ಸೋಮವಾರ, ಮೇ 10, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 130 | ಪುಟ 10

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



18-44 ವಯಸ್ಸಿನವರಿಗೆ ಲಸಿಕೆ ಇಂದಿನಿಂದ

ಬೆಂಗಳೂರು: 'ರಾಜ್ಯದಾದ್ಯಂತ ನಿಗದಿತ ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ 18 ರಿಂದ 44 ವರ್ಷ ವಯೋಮಾನದವರಿಗೆ ಸೋಮವಾರದಿಂದ (ಮೇ 10) ಕೋವಿಡ್ ಲಸಿಕೆ ನೀಡಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

'ಬೆಂಗಳೂರಿನಲ್ಲಿ ಕೆ.ಸಿ. ಜನರಲ್, ಜಯನಗರ ಜನರಲ್, ಸರ್ ಸಿ.ವಿ. ರಾಮನ್ ಜನರಲ್, ಇಎಸ್ಐ ಮತ್ತು ನಿಮ್ಹಾನ್ಸ್ ಆಸ್ಪತ್ರೆಗಳಲ್ಲಿ ಮತ್ತು ಎಲ್ಲ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಈ ವಯೋಮಾನದವರಿಗೆ ಲಸಿಕೆ ನೀಡಲಾಗುವುದು. ಎಲ್ಲ ಜಿಲ್ಲೆಗಳಲ್ಲಿ ಮೊದಲ ಹಂತದಲ್ಲಿ ಜಿಲ್ಲಾಸ್ಪತ್ರೆ, ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಲಸಿಕೆ ನೀಡಲಾಗುವುದು' ಎಂದರು.

'ಸೀರಂ ಸಂಸ್ಥೆಯಿಂದ ಈವರೆಗೆ 6.5 ಲಕ್ಷ ಡೋಸ್ ಕೋವಿಶೀಲ್ಡ್ ಲಸಿಕೆ ಪಡೆಯಲಾಗಿದೆ. ಮೇ ಎರಡು ಅಥವಾ ಮೂರನೇ ವಾರದಲ್ಲಿ ಇನ್ನಷ್ಟು ಲಸಿಕೆ ಲಭ್ಯವಾಗುವ ನಿರೀಕ್ಷೆ ಇದೆ' ಎಂದು ಹೇಳಿದರು.

ಇಂದಿನಿಂದ ವಾಹನಗಳು ರಸ್ತೆಗೆ ಇಳಿಯುವಂತಿಲ್ಲ • ಅಗತ್ಯ ವಸ್ತುಗಳ ಖರೀದಿಗೆ ನಾಲ್ಕು ತಾಸು

14 ದಿನ ರಾಜ್ಯ ಲಾಕ್‌ಡೌನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಏರುತ್ತಿರುವುದನ್ನು ನಿಯಂತ್ರಿಸಲು ರಾಜ್ಯದಾದ್ಯಂತ ಸೋಮವಾರದಿಂದ 14 ದಿನಗಳ ಕಠಿಣ ಲಾಕ್‌ಡೌನ್ ಜಾರಿಗೆ ಬರಲಿದೆ. ಅನುಮತಿ ನೀಡಿರುವ ಚಟುವಟಿಕೆಗಳು ಮತ್ತು ತುರ್ತು ಕಾರಣಗಳನ್ನು ಹೊರತುಪಡಿಸಿ ಯಾರೊಬ್ಬರೂ ರಸ್ತೆಗೆ ಇಳಿಯಲು ಅವಕಾಶವೇ ಇಲ್ಲ.

ಜನರ ಓಡಾಟವನ್ನು ತುಸು ನಿಯಂತ್ರಿಸುವ ಸಾಮಾನ್ಯ ನಿರ್ಬಂಧಗಳಿಂದ ಕೊರೊನಾ ವೈರಸ್ ಸೋಂಕಿನ ಪ್ರಕರಣಗಳನ್ನು ತಗ್ಗಿಸಲು ಸಾಧ್ಯವಾಗಿಲ್ಲ. ಈ ಕಾರಣದಿಂದ 14 ದಿನಗಳ ಕಾಲ ಪೂರ್ಣ ಪ್ರಮಾಣದ ಲಾಕ್‌ಡೌನ್ ಜಾರಿಗೆ ಮೇ 7ರಂದೇ ಆದೇಶ ಹೊರಡಿಸಲಾಗಿದೆ. ಈ ಬಾರಿ ಸ್ಥಳೀಯವಾಗಿಯೂ ಜನರ ಓಡಾಟವನ್ನು ಸಂಪೂರ್ಣವಾಗಿ ನಿರ್ಬಂಧಿಸಲು ಸಿದ್ಧತೆಗಳು ನಡೆದಿವೆ.

ಸೋಮವಾರ ಬೆಳಿಗ್ಗೆ 6ರಿಂದ ಮೇ 24ರ ಬೆಳಿಗ್ಗೆ 6 ಗಂಟೆಯವರೆಗೂ ಲಾಕ್‌ಡೌನ್ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಸರ್ಕಾರಿ ಮತ್ತು ಖಾಸಗಿ ಬಸ್‌ಗಳ ಸಂಚಾರ, ಅಂತರರಾಜ್ಯ ಪ್ರಯಾಣಿಕ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗುವವರನ್ನು ಹೊರತುಪಡಿಸಿ ಬೇರೆ ಯಾವುದೇ ವಾಹನಗಳ ಸಂಚಾರಕ್ಕೂ ಅವಕಾಶ ಇಲ್ಲ.

ಈ ಬಾರಿ ಹಿಂದೆಂದಿಗಿಂತಲೂ ಕಠಿಣವಾದ ರೀತಿಯಲ್ಲಿ ಲಾಕ್‌ಡೌನ್ ಜಾರಿಗೆ ಪೂರಕ ತಯಾರಿ ನಡೆದಿದೆ. ಭಾನುವಾರವೇ ಪೊಲೀಸರು ತಾಲೀಮು ನಡೆಸಿದ್ದು, ಅಗತ್ಯ ವಸ್ತುಗಳ ಖರೀದಿಗಾಗಿ ಸಡಿಲಿಕೆಯ ಅವಧಿಯ ಬಳಿಕ ರಸ್ತೆಗಿಳಿದವರಿಗೆ ಲಾಠಿ ರುಚಿ ತೋರಿಸಿ, ವಾಹನಗಳನ್ನು ವಶಕ್ಕೆ ಪಡೆದರು.


ಅನುಮತಿ ನೀಡಿದ ಚಟುವಟಿಕೆಗಳ ಹೊರತಾಗಿ ರಸ್ತೆಗೆ ಇಳಿಯುವವರ ವಾಹನಗಳನ್ನು ವಶಕ್ಕೆ ಪಡೆದು, 14 ದಿನಗಳ ಕಾಲ ಇರಿಸಿಕೊಳ್ಳಲು ಪೊಲೀಸರಿಗೆ ಸೂಚನೆ ನೀಡಲಾಗಿದೆ.

8 ನೇ ಪುಟ ನೋಡಿ



ಕರ್ಫ್ಯೂ ಇದ್ದರೂ ಅನಗತ್ಯವಾಗಿ ರಸ್ತೆಗಿಳಿದ ದ್ವಿಚಕ್ರವಾಹನ ಸವಾರರ ಮೇಲೆ ಬೆಂಗಳೂರಿನ ಕೆ.ಆರ್. ಮಾರುಕಟ್ಟೆ ವೃತ್ತದ ಬಳಿ ಪೊಲೀಸರು ಭಾನುವಾರ ಲಾಠಿ ಬೀಸಿದರು ಪ್ರಜಾವಾಣಿ ಚಿತ್ರ/ ಎಸ್. ಕೆ. ದಿನೇಶ್

ರಾಜ್ಯದ ಮಾಹಿತಿ ಪಡೆದ ಪ್ರಧಾನಿ



ಬೆಂಗಳೂರು: ಕೋವಿಡ್ ರೋಗಿಗಳಿಗೆ ನೀಡುವ ರೆಮ್‌ಡಿಸಿವಿರ್ ಚುಚ್ಚುಮದ್ದು ಮತ್ತು ಆಮ್ಲಜನಕ ಕೊರತೆ ಬಗ್ಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಪ್ರಧಾನಿ ನರೇಂದ್ರ ಮೋದಿಯ ಗಮನ ಸೆಳೆದಿದ್ದಾರೆ.

ಕೋವಿಡ್ ಪ್ರಕರಣಗಳು ಅತೀ ಹೆಚ್ಚು ಕಂಡುಬರುತ್ತಿರುವ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಪ್ರಧಾನಿ ದೂರವಾಣಿ ಮೂಲಕ ಸಮಾಲೋಚನೆ ನಡೆಸುತ್ತಿದ್ದು, ಭಾನುವಾರ ಬೆಳಿಗ್ಗೆ ಯಡಿಯೂರಪ್ಪ ಅವರಿಗೂ ಕರೆ ಮಾಡಿ ರಾಜ್ಯದಲ್ಲಿನ ವಸ್ತುಸ್ಥಿತಿಯ ಮಾಹಿತಿ ಪಡೆದಿದ್ದಾರೆ.

ಈ ವೇಳೆ, ಹೆಚ್ಚುತ್ತಿರುವ ಸೋಂಕು ಪ್ರಕರಣಗಳು ಮತ್ತು ಸಾವಿನ ಪ್ರಮಾಣದ ಸಹಿತ ರಾಜ್ಯದ ಸದ್ಯದ ಸ್ಥಿತಿಗತಿಯನ್ನು ಪ್ರಧಾನಿಗೆ ಯಡಿಯೂರಪ್ಪ ವಿವರಿಸಿದ್ದಾರೆ. ಅಲ್ಲದೆ, ರಾಜ್ಯಕ್ಕೆ ರೆಮ್‌ಡಿಸಿವಿರ್ ಮತ್ತು ಆಮ್ಲಜನಕ ಹಂಚಿಕೆ ಪಾಲು ಹೆಚ್ಚಿಸುವಂತೆ ಬೇಡಿಕೆ ಇಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೋವಿಡ್ ಎರಡನೇ ಅಲೆ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಈವರೆಗೆ ತೆಗೆದುಕೊಂಡ ಕ್ರಮಗಳು ಮತ್ತು ಲಾಕ್‌ಡೌನ್ ವಿಧಿಸಿರುವ ಬಗ್ಗೆಯೂ ಪ್ರಧಾನಿ ಜೊತೆ ಯಡಿಯೂರಪ್ಪ ವಿಚಾರ ವಿನಿಮಯ ನಡೆಸಿದ್ದಾರೆ ಎಂದೂ ಮೂಲಗಳು ಹೇಳಿವೆ.

ಯಾವುದಕ್ಕೆಲ್ಲ ಅವಕಾಶ

- ಆಹಾರ ಸಂಸ್ಕರಣಾ ಘಟಕಗಳು, ಬ್ಯಾಂಕ್, ವಿಮಾ ಕಚೇರಿಗಳು, ಎಟಿಎಂಗಳು, ದೂರಸಂಪರ್ಕ, ಇಂಟರ್‌ನೆಟ್ ಸೇವೆ ನೀಡುವವರು,
- ಇ-ಕಾಮರ್ಸ್‌ನವರು ಮನೆಗಳಿಗೆ ವಸ್ತುಗಳನ್ನು ತಲುಪಿಸಲು ಅವಕಾಶ
- ಕೋಲ್ಡ್ ಸ್ಟೋರೇಜ್, ಗೋದಾಮು ಸೇವೆಗಳು
- ವಿಮಾನ ಸಂಚಾರ ಮತ್ತು ರೈಲಿನ ಕಾರ್ಯಾಚರಣೆ ಇದೆ. ಇದರ ಮೂಲಕ ಬಂದವರು ಟಿಕೆಟ್ ತೋರಿಸಿ, ತಮ್ಮ ಮನೆಗಳಿಗೆ ತಾವೇ ಮಾಡಿಕೊಂಡ ಖಾಸಗಿ ವಾಹನ, ಆಟೋ, ಕ್ಯಾಬ್ ಮೂಲಕ ಹೋಗಬಹುದು
- ಅಗತ್ಯ ವಸ್ತುಗಳ ಉತ್ಪಾದನಾ ಘಟಕಗಳು, ಸಾರ್ವಜನಿಕ ಮತ್ತು ಖಾಸಗಿ ವಲಯದ ಉದ್ಯಮಗಳು ಕೋವಿಡ್ ಮಾರ್ಗಸೂಚಿ ಅನುಸರಿಸಿ ಕಾರ್ಯನಿರ್ವಹಿಸಬಹುದು.
- ಕೋವಿಡ್ ನಿಯಮ ಪಾಲಿಸಿ ನಿರ್ಮಾಣ ಕಾಮಗಾರಿಗಳನ್ನು ನಡೆಸಬಹುದು. ಕಾರ್ಮಿಕರಿಗೆ ವಾಸ್ತವ್ಯಕ್ಕೆ ಸ್ಥಳದಲ್ಲಿಯೇ ವ್ಯವಸ್ಥೆ ಮಾಡಬಹುದು.
- ಮದುವೆಗಳಿಗೆ ಅವಕಾಶ ಇದ್ದು, 50 ಜನ ಮೀರುವಂತಿಲ್ಲ.
- ಅಂತ್ಯಕ್ರಿಯೆಗೆ 5 ಕ್ಕಿಂತ ಹೆಚ್ಚು ಜನ ಸೇರುವಂತಿಲ್ಲ
- ಆಸ್ಪತ್ರೆಗಳು, ಆಯುಷ್ ಮತ್ತು ಪಶು ಆಸ್ಪತ್ರೆಗಳು, ಕ್ಲಿನಿಕ್‌ಗಳು, ಔಷಧದ ಅಂಗಡಿಗಳು, ಲ್ಯಾಬ್‌ಗಳು, ಜನೌಷಧಿ ಕೇಂದ್ರಗಳು, ರಕ್ತ ನಿಧಿಗಳು
- ಕೃಷಿ ಚಟುವಟಿಕೆಗಳು
- ಅಂಗವಿಕಲರು, ಬುದ್ಧಿಮಾಂದ್ಯರು, ಹಿರಿಯ ನಾಗರಿಕರ ಆರೈಕೆ ವ್ಯವಸ್ಥೆ

ಏನೆಲ್ಲ ಇರುವುದಿಲ್ಲ

- ಮೆಟ್ರೊ ರೈಲು ಸೇವೆ
- ತುರ್ತು ಸಂದರ್ಭ ಹೊರತುಪಡಿಸಿ ಟ್ಯಾಕ್ಸಿ, ಕ್ಯಾಬ್, ಆಟೋಗಳ ಸಂಚಾರಕ್ಕೆ ಅವಕಾಶವಿಲ್ಲ.
- ಶಾಲಾ-ಕಾಲೇಜು ಮತ್ತು ಶಿಕ್ಷಣ ಸಂಸ್ಥೆಗಳು, ಕೋಚಿಂಗ್ ಸೆಂಟರ್‌ಗಳು ನಡೆಯುವಂತಿಲ್ಲ. ಆನ್‌ಲೈನ್ ತರಗತಿಗಳಿಗಷ್ಟೇ ಅವಕಾಶ
- ಹೋಟೆಲ್, ರೆಸ್ಟೋರೆಂಟ್ ಮತ್ತು ಆತಿಥ್ಯ ಸೇವೆಗಳು. (ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಂದ ಪಾರ್ಸೆಲ್ ಒಯ್ಯಬಹುದು)
- ಸಿನಿಮಾ ಹಾಲ್, ಶಾಪಿಂಗ್ ಮಾಲ್, ಜಿಮ್ನಾಷಿಯಂ, ಕ್ರೀಡಾ ಕಾಂಪ್ಲೆಕ್ಸ್, ಈಜುಕೊಳ
- ಸಾಮಾಜಿಕ, ರಾಜಕೀಯ, ಧಾರ್ಮಿಕ, ಮನರಂಜನೆಗಾಗಿ ಜನರನ್ನು ಸೇರಿಸುವುದು ನಿಷೇಧ.

ಕಾರ್ಯ ನಿರ್ವಹಿಸುವ ಸರ್ಕಾರಿ ಕಚೇರಿಗಳು

- ಆರೋಗ್ಯ, ವೈದ್ಯಕೀಯ ಶಿಕ್ಷಣ, ಪೊಲೀಸ್, ಹೋಮ್ ಗಾರ್ಡ್, ಅಗ್ನಿಶಾಮಕ,ಕಂದಾಯ ವಿದ್ಯುತ್, ನೀರು, ನೈರ್ಮಲ್ಯ
- ಬಿಬಿಎಂಪಿ, ಎಲ್ಲ ನಗರ ಸ್ಥಳೀಯ ಸಂಸ್ಥೆಗಳು

24 ಗಂಟೆಯಲ್ಲಿ 20 ಮಂದಿ ಸಾವು

ಚಾಮರಾಜನಗರ: ಸಾವಿನ ಪ್ರಮಾಣ ಏರಿಕೆ

• ಕೆ.ಎಸ್.ಗಿರೀಶ

ಚಾಮರಾಜನಗರ: ಮೇ 2ರ ದುರಂತದಿಂದಾಗಿ ತೀವ್ರ ಆತಂಕಕ್ಕೆ ಒಳಗಾಗಿರುವ ಚಾಮರಾಜನಗರ ಜಿಲ್ಲೆಯಲ್ಲಿ ಕೋವಿಡ್ ಸಾವಿನ ಸಂಖ್ಯೆ ಹೆಚ್ಚುತ್ತಲೇ ಇದ್ದು, ಶನಿವಾರ ಸಂಜೆ 6 ಗಂಟೆಯಿಂದ ಭಾನುವಾರ ಸಂಜೆ 6 ಗಂಟೆಯವರೆಗೆ 20 ಸೋಂಕಿತರು ಮೃತಪಟ್ಟಿದ್ದಾರೆ. ಜಿಲ್ಲೆಯಲ್ಲಿ ಹೊಸದಾಗಿ 910 ಮಂದಿಗೆ ಸೋಂಕು ಕಾಣಿಸಿಕೊಂಡಿದೆ.

ಮೇ 4ರಂದು 8, 5ರಂದು 8, 6ರಂದು 14, 7ರಂದು 9, 8ರಂದು 5 ಹಾಗೂ 9ರಂದು ಸಂಜೆ 6 ಗಂಟೆವರೆಗೆ 20 ಮಂದಿ ಮೃತಪಟ್ಟಿದ್ದಾರೆ. ಮೇ 2ರಂದು ಆಮ್ಲಜನಕದ ವ್ಯತ್ಯಯ ಹಾಗೂ ಇನ್ನಿತರ ಕಾರಣಗಳಿಂದ 24 ಮಂದಿ ಮೃತಪಟ್ಟಿದ್ದರು. ಈ ಘಟನೆಯಿಂದ ಹಿಡಿದು ಇಲ್ಲಿವರೆಗೆ ಒಟ್ಟು 88 ಮಂದಿ ಮೃತರಾಗಿದ್ದಾರೆ ಎಂದು ಆರೋಗ್ಯ ಇಲಾಖೆಯ ಅಂಕಿ ಅಂಶಗಳು ಹೇಳುತ್ತವೆ.

ಮೃತರ ಪೈಕಿ ಜಿಲ್ಲೆಯ ಅಮಚವಾಡಿ ಗ್ರಾಮದ ತಂದೆ ಮತ್ತು ಮಗ ಸೇರಿದ್ದಾರೆ. ಮತ್ತೊಬ್ಬ ಪುತ್ರ ಮೈಸೂರಿನ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

4ನೇ ಪುಟ ನೋಡಿ



ಚಾಮರಾಜನಗರದ ಜಿಲ್ಲಾ ಕೋವಿಡ್ ಆಸ್ಪತ್ರೆ

ಅಂಕಿ-ಅಂಶ

- 164 ಕೋವಿಡ್ ಆಸ್ಪತ್ರೆಯಲ್ಲಿರುವ ಒಟ್ಟು ಬೆಡ್ ಸಂಖ್ಯೆ
- 50 ತೀವ್ರ ನಿಗಾ ಘಟಕ
- 35 ವೆಂಟಿಲೇಟರ್ ಬೆಡ್ ಸಂಖ್ಯೆ

ಹಿಮಂತಗೆ ಅಸ್ಸಾಂ ಚುಕ್ಕಾಣಿ

ಪ್ರಜಾವಾಣಿ ವಾರ್ತೆ



ಹಿಮಂತ

ಗುವಾಹಟಿ: ಅಸ್ಸಾಂನ ಮುಂದಿನ ಮುಖ್ಯಮಂತ್ರಿ ಸ್ಥಾನಕ್ಕೆ ಹಿಮಂತ ಬಿಸ್ವ ಶರ್ಮಾ ಅವರನ್ನು ಬಿಜೆಪಿ ಆಯ್ಕೆ ಮಾಡಿದೆ. ವಾರದಿಂದ ಇದ್ದ ಅನಿಶ್ಚಿತ ಸ್ಥಿತಿಯನ್ನು ಕೊನೆಗೊಳಿಸಿದೆ. ಶರ್ಮಾ ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

2014ರ ಲೋಕಸಭಾ ಚುನಾವಣೆಯಿಂದಲೇ ಅಸ್ಸಾಂನಲ್ಲಿ ಬಿಜೆಪಿಯ ನಾಯಕನಾಗಿದ್ದ ಸರ್ಬಾನಂದ ಸೋನೊವಾಲ್ ಅವರನ್ನು ಬದಿಗೆ ಸರಿಸಿ ಶರ್ಮಾ ಅವರಿಗೆ ಸ್ಥಾನ ನೀಡಲಾಗಿದೆ. ಗುವಾಹಟಿಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕನಾಗಿ ಶರ್ಮಾ ಅವರನ್ನು ಆರಿಸಲಾಯಿತು.

ಇನ್ನೊಂದು ಸುದ್ದಿ 7

ಮಾಜಿ ಸಚಿವ ಕೆ.ಬಿ. ಶಾಣಪ್ಪ ನಿಧನ



ಕಲಬುರ್ಗಿ: ಮಾಜಿ ಸಚಿವ ಕೆ.ಬಿ. ಶಾಣಪ್ಪ (83) ಅವರು ಕೋವಿಡ್‌ನಿಂದ ಇಲ್ಲಿನ ಜಿಮ್ಸ್ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ನಾಲ್ಕು ದಿನಗಳ ಹಿಂದೆ ಕೋವಿಡ್ ದೃಢಪಟ್ಟಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರು ಇದ್ದಾರೆ. ಸೋಮವಾರ (ಮೇ 10) ಬೆಳಿಗ್ಗೆ 10ಕ್ಕೆ ಸ್ವಗ್ರಾಮ ರಾವೂರಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಚಿತ್ತಾಪುರ ತಾಲ್ಲೂಕಿನ ರಾವೂರ ಗ್ರಾಮದ ಶಾಣಪ್ಪ ಅವರು ಕಲಬುರ್ಗಿ ಭಾಗದ ಪ್ರಭಾವಿ ನಾಯಕರಾಗಿದ್ದರು.

ಶಹಾಬಾದ್ ಸಿಮೆಂಟ್ ಕಾರ್ಖಾನೆಯ ಕಾರ್ಮಿಕ ಮುಖಂಡರಾಗಿದ್ದ ಅವರು, ಶಹಾಬಾದ್ ವಿಧಾನಸಭಾ ಕ್ಷೇತ್ರಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷದಿಂದ (ಸಿಪಿಐ) ಎರಡು ಬಾರಿ ಶಾಸಕರಾಗಿದ್ದರು.

ಜೆ.ಎಚ್.ಪಟೇಲ್ ಅವರ ಸಂಪುಟದಲ್ಲಿ ಅಬಕಾರಿ ಸಚಿವರಾಗಿದ್ದ ಅವರು 1996ರಲ್ಲಿ ವಿಧಾನ ಪರಿಷತ್ತಿಗೆ ನಾಮನಿರ್ದೇಶನಗೊಂಡಿದ್ದರು. ನಂತರ ಬಿಜೆಪಿಗೆ ಸೇರಿದ ಅವರು 2006ರಲ್ಲಿ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಸಂಸದರಾಗಿ ಆಯ್ಕೆಯಾದರು. 2012ರಲ್ಲಿ ಮತ್ತೆ ವಿಧಾನ ಪರಿಷತ್ತಿಗೆ ನಾಮನಿರ್ದೇಶನಗೊಂಡಿದ್ದರು. 2019ರಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು.

ಕೆಲಸವೇ ಇಲ್ಲ; ಇಲ್ಲಿದ್ದು ಏನ್ಮಾಡೋದು...

ಮುಂದುವರಿದ ಕಾರ್ಮಿಕರ ವಲಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಭೀತಿಯಿಂದ ಬೆಂಗಳೂರು ತೊರೆಯುತ್ತಿರುವವರ ಸಂಖ್ಯೆ ಹೆಚ್ಚಿರುವ ಕಾರಣ ಭಾನುವಾರವೂ ರೈಲು ನಿಲ್ದಾಣದ ಎದುರು ಮತ್ತು ಟೋಲ್‌ಗಳ ಬಳಿ ಭಾರಿ ಸಂಖ್ಯೆಯಲ್ಲಿ ಜನ ಮತ್ತು ವಾಹನಗಳ ಸಂದಣಿ ಕಂಡು ಬಂದಿತು.

ಕಾರ್ಮಿಕರು ಕುಟುಂಬದೊಂದಿಗೆ ಗಂಟು ಮೂಟೆ ಹೊತ್ತು ನಿಲ್ದಾಣದತ್ತ ಬರುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ದೂರದ ಊರಿಗೆ ಹೊರಟಿದ್ದ ವ್ಯಕ್ತಿಯೊಬ್ಬರು ಪ್ರಯಾಣದ ವೇಳೆ ದಾಹ ನೀಗಿಸಿಕೊಳ್ಳಲು ನೀರು ತುಂಬಿದ್ದ ದೊಡ್ಡ ಕ್ಯಾನ್‌ವೊಂದನ್ನು ಮನೆಯಿಂದಲೇ ಹೊತ್ತು ತಂದಿದ್ದರು.

ಹಲವರು ದ್ವಿಚಕ್ರ ಹಾಗೂ ಕಾರಿನ ಮೇಲೆ ಬಟ್ಟೆ ತುಂಬಿದ ಬ್ಯಾಗ್‌ಗಳನ್ನು ಇಟ್ಟುಕೊಂಡು ಮುಂಜಾನೆಯೇ ಊರಿನತ್ತ ಹೊರಟಿದ್ದ ದೃಶ್ಯ ನೆಲಮಂಗಲದ ಬಳಿ ಕಂಡುಬಂತು. ಕೆಲವರು ಗೂಡ್ಸ್ ಆಟೊದಲ್ಲಿ ಸಾಮಾನು ಸರಂಜಾಮು ತುಂಬಿಕೊಂಡು ಹೋಗುತ್ತಿದ್ದರು. ಹೀಗಾಗಿ ನವಯುಗ ಟೋಲ್‌ಗೇಟ್ ಬಳಿ ಸಂಚಾರ ದಟ್ಟಣೆ ಉಂಟಾಗಿತ್ತು.

ಇಲ್ಲಿ ಇದ್ದು ಏನು ಮಾಡೋದು?: 'ಗಾರೆ ಕೆಲಸ ಮಾಡಿಕೊಂಡು ಹೇಗೊ ಬದುಕು ಸಾಗಿಸುತ್ತಿದ್ದೆವು. ಲಾಕ್‌ಡೌನ್ ಕಾರಣ ಕೆಲಸಕ್ಕೆ ಕುತ್ತು ಬಂದಿದೆ. ಕೈಯಲ್ಲಿ ಕಾಸೇ ಇಲ್ಲದ ಮೇಲೆ ಬೆಂಗಳೂರಿನಲ್ಲಿ ಇದ್ದುಕೊಂಡು ಏನು ಮಾಡುವುದು–ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಎದುರು ಕುಟುಂಬದ ಸದಸ್ಯರೊಂದಿಗೆ ಹರಟುತ್ತಾ ನಿಂತಿದ್ದ ಗಂಗಪ್ಪ ಪ್ರಶ್ನಿಸಿದ್ದು ಹೀಗೆ.

'ಹೆಂಡತಿ ಮಕ್ಕಳ ಜೊತೆ ಕುಂಬಳಗೋಡಿನಲ್ಲಿ ನೆಲೆಸಿದ್ದೆ. ಗಾರೆ ಕೆಲಸ ಮಾಡುತ್ತಿದ್ದುದರಿಂದ ಮೂರು ಹೊತ್ತಿನ ಊಟಕ್ಕೇನೂ ಸಮಸ್ಯೆ ಇರಲಿಲ್ಲ. ಕೋವಿಡ್‌ನಿಂದಾಗಿ ದುಡಿಮೆಗೆ ಪೆಟ್ಟು ಬಿದ್ದಿದೆ. ಸರ್ಕಾರ ದಿನಕ್ಕೊಂದು ನಿರ್ಧಾರ ಕೈಗೊಳ್ಳುತ್ತಿದೆ. ಅಗತ್ಯ ವಸ್ತುಗಳ ಖರೀದಿಗೆ ಅವಕಾಶವೇನೋ ನೀಡಿದೆ. ಅದಕ್ಕೆ ಹಣ ಬೇಕಲ್ಲ. ದಿನಗೂಲಿಯನ್ನೇ ನಂಬಿರುವ ನಮ್ಮಂತಹವರ ಗತಿ ಏನು. ಲಾಕ್‌ಡೌನ್ ಕಾರಣ ದಿನಪೂರ್ತಿ ಮನೆಯಲ್ಲೇ ಇರಬೇಕಂತೆ. ಹಾಗಾದರೆ ಹೊಟ್ಟೆಗೇನು ಮಾಡುವುದು' ಎಂದು ಕೇಳಿದರು.

'ನಾವು ರಾಯಚೂರು ಜಿಲ್ಲೆ ಲಿಂಗಸುಗೂರಿನವರು. ಮನೆಯಲ್ಲಿ ಬಡತನವಿದ್ದ ಕಾರಣ ದುಡಿಮೆ ಅರಸಿ ಇಲ್ಲಿಗೆ ಬಂದಿದ್ದೆವು. ಸದ್ಯದ ಪರಿಸ್ಥಿತಿಯಲ್ಲಿ ಬೆಂಗಳೂರಿನಲ್ಲಿ ಇರುವುದು ಸುರಕ್ಷಿತವಲ್ಲ. ಹೀಗಾಗಿ ಊರ ಹಾದಿ ಹಿಡಿದಿದ್ದೇವೆ. ಅಲ್ಲೇ ಯಾವುದಾದರೂ ಸಣ್ಣ ಪುಟ್ಟ ಕೆಲಸ ಮಾಡಿಕೊಂಡು ನೆಮ್ಮದಿಯಿಂದ ದಿನ ದೂಡುತ್ತೇವೆ' ಎಂದರು.

'ಲಾಕ್‌ಡೌನ್ ಅವಧಿಯಲ್ಲಿ ಕೆಲಸಕ್ಕೂ ಹೋಗುವಂತಿಲ್ಲ. ಹೀಗಾಗಿ ಊರಿಗೆ ಹೊರಟಿದ್ದೇವೆ. ಪರಿಸ್ಥಿತಿ ಸರಿಹೋದ ಮೇಲೆ ಮತ್ತೆ ವಾಪಸ್ಸು ಬರುತ್ತೇವೆ' ಎಂದು ಕುಟುಂಬದ ಜೊತೆ ಕಲಬುರ್ಗಿಗೆ ಹೋಗುತ್ತಿದ್ದ ಈಶ್ವರ್ ತಿಳಿಸಿದರು.



ಲಾಕ್‌ಡೌನ್ ಘೋಷಣೆಯಾಗಿರುವ ಕಾರಣ ಕಾರ್ಮಿಕರು ತಮ್ಮ ಊರುಗಳಿಗೆ ಬೆಂಗಳೂರಿನ ದಾಸರಹಳ್ಳಿಯಿಂದ ಭಾನುವಾರ ವಾಹನಗಳಲ್ಲಿ ತೆರಳಿದರು ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ರಾಜ್ಯ ಕೋವಿಡ್ ಅಂಕಿ-ಅಂಶ

19,34,378 ▲	ಒಟ್ಟು ಸೋಂಕಿತರು (18,86,448 ನಿನ್ನೆಯ ವಿವರ)
5,64,485 ▲	ಸಕ್ರಿಯ ಪ್ರಕರಣಗಳು
13,51,097 ▲	ಗುಣಮುಖರಾದವರು
18,776 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	47,930	▲
ಗುಣಮುಖ	31,796	▼
ಸಾವು	490	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವಾರ್ ರೂಮ್ ಮೇಲೆ ಸಂಸದರ ದಾಳಿ ಬಳಿಕ ಅಮಾನತು

17 ಮುಸ್ಲಿಂ ನೌಕರರ ಮರುನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ತೇಜಸ್ವಿ ಸೂರ್ಯ ಮತ್ತು ಮೂವರು ಶಾಸಕರು ಮೇ 4ರಂದು ಕೋವಿಡ್ ವಾರ್ ರೂಮ್ ಮೇಲೆ ದಾಳಿ ನಡೆಸಿದ ನಂತರ ಅಮಾನತುಗೊಂಡಿದ್ದ 17 ಮುಸ್ಲಿಂ ನೌಕರರು ಸೋಮವಾರದಿಂದ (ಮೇ 10) ಮತ್ತೆ ಕರ್ತವ್ಯಕ್ಕೆ ಹಾಜರಾಗಲಿದ್ದಾರೆ.

ಬಿಬಿಎಂಪಿಯಲ್ಲಿ ಹಾಸಿಗೆ ಬ್ಲಾಕಿಂಗ್ ನಡೆಯುತ್ತಿದೆ ಎಂದು ಆರೋಪಿಸಿದ್ದ ಸಂಸದ ಮತ್ತು ಶಾಸಕರು ಈ ನೌಕರರ ವಿರುದ್ಧ ಹರಿಹಾಯ್ದಿದ್ದರು. ಈ ಹಗರಣಕ್ಕೆ ಕೋಮು ಸ್ವರೂಪ ನೀಡಿದ್ದರು. ವಾರ್ ರೂಮ್‌ನಲ್ಲಿ 212 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದು, ಮುಸ್ಲಿಂ ಸಮುದಾಯದ ಒಬ್ಬರು ಮಾತ್ರ ಹಾಸಿಗೆ ನಿಯೋಜನೆ ವಿಭಾಗದಲ್ಲಿ ಇದ್ದರು.

ಕ್ರಿಸ್ಟಲ್ ಇನ್ಫೋಸಿಸ್ಟಂ ಅಂಡ್ ಸರ್ವಿಸಸ್ ಎಂಬ ಹೊರಗುತ್ತಿಗೆ ಸಂಸ್ಥೆಯು ಈ ನೌಕರರನ್ನು ಬಿಬಿಎಂಪಿಗೆ ಪೂರೈಸಿತ್ತು. ಈ ಸಂಸ್ಥೆಯ ಅಧಿಕಾರಿಗಳು, ಕೋವಿಡ್ ದಕ್ಷಿಣ ವಲಯ ವಾರ್ ರೂಮ್‌ನ ಉಸ್ತುವಾರಿ, ಐಎಎಸ್ ಅಧಿಕಾರಿ ತುಳಸಿ ಮದ್ದಿನೇನಿ ಅವರನ್ನು ಶನಿವಾರ ಭೇಟಿ ಮಾಡಿದ್ದು, 'ಈ ಮುಸ್ಲಿಂ ನೌಕರರು ಹಾಸಿಗೆ ಬ್ಲಾಕಿಂಗ್‌ನಲ್ಲಿ ಪಾಲ್ಗೊಂಡಿಲ್ಲ. ಇವರನ್ನು ಮರುನೇಮಕ ಮಾಡಿಕೊಳ್ಳಬೇಕು' ಎಂದು ಮನವಿ ಮಾಡಿದ್ದರು.

'ಈ ಕೆಲಸವು ಅನೇಕರ ಜೀವನದ ಪ್ರಶ್ನೆಯಾಗಿದೆ. 17 ಮುಸ್ಲಿಂ ನೌಕರರನ್ನು ಮತ್ತೆ ನೇಮಿಸಿಕೊಳ್ಳಲಾಗುವುದು. ಸೋಮವಾರದಿಂದಲೇ ಕರ್ತವ್ಯಕ್ಕೆ ಹಾಜರಾಗಲಿದ್ದಾರೆ' ಎಂದು ತುಳಸಿ ಮದ್ದಿನೇನಿ ತಿಳಿಸಿದರು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-5

ಇಂದಿನ ಪಾಡ್‌ಕಾಸ್ಟ್ ವಿಶೇಷ

ವಚನವಾಣಿ

ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಡಾ.ಅನಿಲ್‌ಕುಮಾರ್ ನೇತೃತ್ವದಲ್ಲಿ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕುಗಳಲ್ಲಿ ಕಾರ್ಯ

100 ಗ್ರಾಮಗಳಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರ

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಜಿಲ್ಲೆಯ ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕಿನ ಒಟ್ಟು 100 ಗ್ರಾಮಗಳಲ್ಲಿ ಕೋವಿಡ್ ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು ಆರಂಭಿಸಲು ವೈದ್ಯ ಡಾ.ಅನಿಲ್‌ಕುಮಾರ್ ಆವುಲಪ್ಪ ಮುಂದಾಗಿದ್ದಾರೆ. ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿಯೂ ಈ ಎರಡೂ ತಾಲ್ಲೂಕಿನ 200 ಹಳ್ಳಿಗಳಲ್ಲಿ ಅವರು ಚಿಕಿತ್ಸಾ ಕೇಂದ್ರಗಳನ್ನು ಆರಂಭಿಸಿದ್ದರು.

ರೈಟ್ ಟು ಲಿವ್ ಫೌಂಡೇಷನ್, ರೋಟರಿ ಸ್ಪಂದನ, ಯಂಗ್ ಲಿವ್ ಫೌಂಡೇಶನ್, ಡಿವೈಎಫ್ಐ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಬಾಗೇಪಲ್ಲಿ ತಾಲ್ಲೂಕು ಫಾರ್ಮಾಸಿಸ್ಟ್ ಅಸೋಸಿಯೇಷನ್ ಇವರ ಕಾರ್ಯಕ್ಕೆ ಕೈ ಜೋಡಿಸಿವೆ.

ಕೋವಿಡ್ ಗುಣಲಕ್ಷಣಗಳು ಇದ್ದರೂ ಗ್ರಾಮೀಣ ಜನರು ಆರಂಭದಲ್ಲಿಯೇ ವೈದ್ಯರ ಬಳಿಗೆ ತೆರಳದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎನ್ನುವ ದೂರುಗಳಿವೆ. ರಕ್ತದಲ್ಲಿ ಆಮ್ಲಜನಕ ಪ್ರಮಾಣದ ಬಗ್ಗೆಯೂ ಅರಿವು ಇರುವುದಿಲ್ಲ. ಈ ಎಲ್ಲ ದೃಷ್ಟಿಯಿಂದ ಪ್ರಾಥಮಿಕ ಹಂತದಲ್ಲಿಯೇ ರೋಗಿಗಳನ್ನು ಗುರುತಿಸುವ ಕೆಲಸವನ್ನು ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳು ಮಾಡಲಿವೆ.

ಕನಿಷ್ಠ ಶಿಕ್ಷಣ ಪಡೆದಿರುವ, ಪಲ್ಸ್ ಆಕ್ಸಿಮೀಟರ್ ಮತ್ತು ಥರ್ಮಾಮೀಟರ್ ಬಗ್ಗೆ ತಿಳಿವಳಿಕೆಯುಳ್ಳ ಆಯಾ ಗ್ರಾಮಗಳ ಇಬ್ಬರು ಅಥವಾ ಮೂವರು ಸ್ವಯಂಸೇವಕರು ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವರು.

'ಗ್ರಾಮಗಳ ಅರಳಿಕಟ್ಟೆ ಸೇರಿದಂತೆ ಯಾವುದಾದರೂ ಒಂದು ಸ್ಥಳದಲ್ಲಿ ಈ ಸ್ವಯಂಸೇವಕರು ನಿತ್ಯ ಕುಳಿತುಕೊಳ್ಳುವರು. ಪಲ್ಸ್ ಆಕ್ಸಿಮೀಟರ್, ಥರ್ಮಾಮೀಟರ್ ಹಾಗೂ ಕೋವಿಡ್‌ನ ಪ್ರಾಥಮಿಕ ಗುಣಲಕ್ಷಣಗಳ ಚಿಕಿತ್ಸೆಗೆ ಅಗತ್ಯವಿರುವ ಮಾತ್ರೆಗಳು ಇವರ ಬಳಿ ಇರಲಿವೆ' ಎಂದು ಡಾ.ಅನಿಲ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಹಳ್ಳಿಗಳಲ್ಲಿ ಜನರು ಸೋಂಕಿನ ಲಕ್ಷಣಗಳು ಕಾಣಿಸಿಕೊಂಡ ತಕ್ಷಣವೇ ಚಿಕಿತ್ಸೆಗೆ ಬರುವ ಮನಸ್ಸು ಮಾಡುತ್ತಿಲ್ಲ. ಲಕ್ಷಣಗಳು ಕಾಣಿಸಿಕೊಂಡ ಐದಾರು ದಿನಗಳ ತರುವಾಯ ಆಸ್ಪತ್ರೆಗೆ ಬರುತ್ತಾರೆ. ಅಷ್ಟರಲ್ಲಿ ರೋಗ ತೀವ್ರವಾಗಿರುತ್ತದೆ. ಸಾವುಗಳು ಸಂಭವಿಸುವ ಸಾಧ್ಯತೆಯೂ ಇರುತ್ತದೆ. ಆದ್ದರಿಂದ ಪ್ರಾಥಮಿಕ ಹಂತದಲ್ಲಿಯೇ ರೋಗವನ್ನು ಗುರುತಿಸಿ ಚಿಕಿತ್ಸೆ ನೀಡಲು ಈ ಕೇಂದ್ರಗಳನ್ನು ಆರಂಭಿಸುತ್ತಿರುವುದಾಗಿ ಹೇಳಿದರು.

'ಆಮ್ಲಜನಕ, ಜ್ವರವನ್ನು ಪರೀಕ್ಷಿಸಲಾಗುತ್ತದೆ. ರೋಗ ಲಕ್ಷಣಗಳಿದ್ದವರ ಬಗ್ಗೆ ದೂರವಾಣಿ ಮೂಲಕ ಸ್ವಯಂಸೇವಕರು ನಮಗೆ ಮಾಹಿತಿ ನೀಡುವರು. ಯಾವ ಮಾತ್ರೆಗಳನ್ನು ನೀಡಬೇಕು ಎಂದು ಸೂಚಿಸುತ್ತೇವೆ. ಅವರ ಮಾಹಿತಿಯನ್ನು ಪುಸ್ತಕದಲ್ಲಿ ನೋಂದಾಯಿಸಿಕೊಳ್ಳುತ್ತೇವೆ. ಬಾಗೇಪಲ್ಲಿಯಲ್ಲಿ 30 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು ಸಿದ್ಧ ಮಾಡಿದ್ದೇವೆ. ಇಲ್ಲಿಗೆ ಸರ್ಕಾರ ಆಮ್ಲಜನಕ ಪೂರೈಸಿದರೆ ನಮ್ಮ ಕೆಲಸಕ್ಕೆ ಅನುಕೂಲವಾಗಲಿದೆ' ಎಂದು ಅವರು ಹೇಳುತ್ತಾರೆ.



ರೈಟ್ ಟು ಲಿವ್ ಫೌಂಡೇಷನ್‌ನಿಂದ ಪಲ್ಸ್ ಆಕ್ಸಿಮೀಟರ್, ಥರ್ಮಾಮೀಟರ್ ದೊರೆಯುತ್ತಿದೆ. ಎರಡನೇ ಹಂತದಲ್ಲಿ ಮತ್ತಷ್ಟು ಹಳ್ಳಿಗಳಲ್ಲಿ ಕೇಂದ್ರಗಳು ಆರಂಭವಾಗಲಿವೆ

ಡಾ.ಅನಿಲ್‌ಕುಮಾರ್, ವೈದ್ಯ

ಒಳ್ಳೆ ಸುದ್ದಿ

ಇಂದು ಚಾಲನೆ

ಕೋವಿಡ್ ಪ್ರಥಮ ಚಿಕಿತ್ಸಾ ಕೇಂದ್ರಗಳಿಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅವರು ಸೋಮವಾರ (ಮೇ 10) ಬೆಳಿಗ್ಗೆ 8ರಿಂದ 9 ಗಂಟೆಯ ನಡುವೆ ಚಾಲನೆ ನೀಡುವರು. ರೈಟ್ ಟು ಲಿವ್ ಫೌಂಡೇಶನ್ ಸಂಸ್ಥಾಪಕ ರಘುರಾಮ್ ಕೋಟೆ ಪಾಲ್ಗೊಳ್ಳುವರು. ಜೂಮ್ ಆ್ಯಪ್ ಬಳಸಿ ಕಾರ್ಯಕ್ರಮ ವೀಕ್ಷಿಸಬಹುದು. ಜೂಮ್ ಮೀಟಿಂಗ್ ಐಡಿ-96341370932. ಪಾಸ್‌ವರ್ಡ್-720761.

‘ಜೈವಿಕ ಅಸ್ತ್ರವಾಗಿ ಕೊರೊನಾ: 2015ರಲ್ಲಿ ಚೀನಾ ಪ್ರಯೋಗ’

ಲಂಡನ್/ಮೆಲ್ಬರ್ನ್ (ಪಿಟಿಐ): ಕೋವಿಡ್ –19 ಸಾಂಕ್ರಾಮಿಕ ರೋಗ ಕಾಣಿಸಿಕೊಳ್ಳುವುದಕ್ಕೂ ಐದು ವರ್ಷಗಳ ಹಿಂದೆ ಚೀನಾದ ಮಿಲಿಟರಿ ವಿಜ್ಞಾನಿಗಳು ಕೊರೊನಾ ವೈರಸ್ ಅನ್ನು ಜೈವಿಕ ಅಸ್ತ್ರವಾಗಿ ಬಳಕೆ ಮಾಡುವ ಬಗ್ಗೆ ಪ್ರಯೋಗ ನಡೆಸಿದ್ದರು. ಅಲ್ಲದೆ ಮೂರನೇ ವಿಶ್ವಮಹಾಯುದ್ಧವು ಜೈವಿಕ ಅಸ್ತ್ರಗಳೊಂದಿಗೆ ನಡೆಯಲಿದೆ ಎಂದು ಭವಿಷ್ಯ ನುಡಿದಿದ್ದರು ಎಂದು ಮಾಧ್ಯಮಗಳು ವರದಿ ಮಾಡಿವೆ.

ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿಯ (ಪಿಎಲ್ಎ) ಅಧಿಕಾರಿಗಳು ಇಂತಹ ಭವಿಷ್ಯ ನುಡಿದಿರುವ ಬಗ್ಗೆ ಅಮೆರಿಕದ ವಿದೇಶಾಂಗ ಇಲಾಖೆಯಿಂದ ಪಡೆದ ದಾಖಲೆಗಳನ್ನು ಉಲ್ಲೇಖಿಸಿ ‘ದಿ ಆಸ್ಟ್ರೇಲಿಯನ್’ ಪತ್ರಿಕೆಯು ವರದಿ ಮಾಡಿದೆ ಎಂದು ಬ್ರಿಟನ್‌ನ ‘ದಿ ಸನ್’ ಪತ್ರಿಕೆಯು ತನ್ನ ವರದಿಯಲ್ಲಿ ಹೇಳಿದೆ.

ಕೋವಿಡ್–19ರ ಮೂಲದ ಬಗ್ಗೆ ನಡೆಸಿದ ಪ್ರಯೋಗದ ಕುರಿತು ಚೀನಾದ ಆರೋಗ್ಯ ಅಧಿಕಾರಿಗಳು ಮತ್ತು ಮಿಲಿಟರಿ ವಿಜ್ಞಾನಿಗಳು ಬರೆದಿದ್ದಾರೆ ಎನ್ನಲಾದ ಬರಹಗಳನ್ನು ಅಮೆರಿಕದ ಅಧಿಕಾರಿಗಳು ಪಡೆದುಕೊಂಡಿದ್ದಾರೆ ಎಂದೂ ವರದಿಯಲ್ಲಿ ಹೇಳಲಾಗಿದೆ.

ಆಮ್ಲಜನಕ ಸೌಲಭ್ಯದ ಹಾಸಿಗೆಯೂ ಸಿಗದೆ ಸಾವನ್ನಪ್ಪುತ್ತಿದ್ದಾರೆ ರೋಗಿಗಳು

ಐಸಿಯು ಹಾಸಿಗೆ ಇಲ್ಲದೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ತೇಜಸ್ವಿ ಸೂರ್ಯ ತಂಡವು ಹಾಸಿಗೆ ಬ್ಲಾಕಿಂಗ್ ಹಗರಣವನ್ನು ಬಯಲಿಗೆಳೆದ ನಂತರ ನಗರದಲ್ಲಿ ಐಸಿಯು ಹಾಸಿಗೆಗಳ ಲಭ್ಯತೆ ಹೆಚ್ಚಿರುತ್ತದೆ ಎಂದೇ ಭಾವಿಸಲಾಗಿತ್ತು. ಆದರೆ, ಈ ದಾಳಿ ನಡೆದು ಆರು ದಿನ ಕಳೆದರೂ, ವೆಂಟಿಲೇಟರ್, ಆಮ್ಲಜನಕ ಸೌಲಭ್ಯ ಹೊಂದಿರುವ ಹಾಸಿಗೆಗಳು ಸಿಗುತ್ತಿಲ್ಲ. ತೀರಾ ಗಂಭೀರ ಸ್ಥಿತಿಯಲ್ಲಿರುವ ರೋಗಿಗಳಿಗೂ ಹಾಸಿಗೆ ಸಿಗದೆ ಆಸ್ಪತ್ರೆಯ ಆವರಣದಲ್ಲಿ, ಆಂಬುಲೆನ್ಸ್ ಒಳಗೇ ಕೊನೆಯುಸಿರು ಎಳೆಯುತ್ತಿದ್ದಾರೆ.

ಪತಿಯನ್ನು ಉಳಿಸಿಕೊಳ್ಳಲು ಶನಿವಾರ ರಾತ್ರಿಯಿಂದ ಭಾನುವಾರ ಮಧ್ಯಾಹ್ನದವರೆಗೆ ಪಟ್ಟ ಪಾಡನ್ನು ಮಹಿಳೆಯೊಬ್ಬರು ‘ಪ್ರಜಾವಾಣಿ’ ಜೊತೆ ಹಂಚಿಕೊಂಡಿದ್ದಾರೆ.

‘ನಾವು ಥಣಿಸಂದ್ರದಲ್ಲಿ ವಾಸಿಸುತ್ತಿದ್ದೇವೆ. ಪತಿಗೆ ಎರಡು ದಿನಗಳಿಂದ ಜ್ವರ ಇತ್ತು. ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಲೂ ಉದ್ದದ ಸಾಲು ಇತ್ತು. ಶನಿವಾರ ಸಂಜೆ ಸ್ಥಳೀಯ ಕ್ಲಿನಿಕ್‌ನಲ್ಲಿ ಎಕ್ಸ್‌ರೇ ತೆಗೆಸಿದಾಗ, ಆಮ್ಲಜನಕ ಮಟ್ಟ 72ಕ್ಕೆ ಕುಸಿದಿದೆ. ಆಸ್ಪತ್ರೆಗೆ ದಾಖಲು ಮಾಡಿ ಎಂದರು’. ‘ಯಾವುದೇ ಆಸ್ಪತ್ರೆಯವರಿಗೆ ವಿಚಾರಿಸಿದರೂ ಬಿಯು ಸಂಖ್ಯೆ ಕೇಳಿದರು. ಕೊನೆಗೆ, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ‘ಸಾರಿ’ (ತೀವ್ರ ಉಸಿರಾಟದ ತೊಂದರೆ) ರೋಗಿಗಳನ್ನು ದಾಖಲಿಸಿಕೊಳ್ಳುತ್ತಾರೆ ಎಂದು ಪರಿಚಯದವರು ಹೇಳಿದರು. ಆಮ್ಲಜನಕ ವ್ಯವಸ್ಥೆ ಇರುವ ಹಾಸಿಗೆ ಕೊಟ್ಟ ರಾಜೀವ್ ಗಾಂಧಿ ಆಸ್ಪತ್ರೆಯವರು ಯಾವುದೇ ಚಿಕಿತ್ಸೆಯನ್ನು ಆರಂಭಿಸಲಿಲ್ಲ. ಆಮ್ಲಜನಕ ಮಟ್ಟ 70ಕ್ಕಿಂತ ಕಡಿಮೆ ಇದೆ. ಇದಕ್ಕೆ ವೆಂಟಿಲೇಟರ್ ಇರುವ ಐಸಿಯು ಹಾಸಿಗೆ ಬೇಕು. ನಮ್ಮ ಬಳಿ ಇಲ್ಲ. ಬೇರೆ ಆಸ್ಪತ್ರೆ ನೋಡಿಕೊಳ್ಳಿ ಎಂದರು’

‘ನನ್ನ ಬಳಿ ಇಎಸ್‌ಐ ಗುರುತಿನ ಚೀಟಿ ಇತ್ತು ಎಂಬ ಕಾರಣಕ್ಕೆ ರಾಜಾಜಿನಗರದ ಇಎಸ್‌ಐ ಆಸ್ಪತ್ರೆಗೆ ಪತಿಯನ್ನು ಕರೆದುಕೊಂಡು ಹೋದೆ. ಐಸಿಯು ಸೌಲಭ್ಯದ ಯಾವುದೇ ಹಾಸಿಗೆಯೂ ಇರಲಿಲ್ಲ. ಗ್ಲೂಕೋಸ್ ಹಾಕಿಸಿ ರಾತ್ರಿಯಿಡೀ ಕುರ್ಚಿಯ ಮೇಲೆ ಕುಳಿತದ್ದಾಯಿತು’

‘ಐಸಿಯು ಹಾಸಿಗೆ ಬೇಕು ಎಂದರೆ ಬಿಯು ಸಂಖ್ಯೆ ಬೇಕಾಗುತ್ತದೆ ಎಂದರು. ಆಂಟಿಜೆನ್ ಪರೀಕ್ಷೆ ಮಾಡಿದಾಗ ಪಾಸಿಟಿವ್ ಬಂದಿತು. ಎಸ್‌ಆರ್‌ಎಫ್ ಐಡಿ ಸೃಷ್ಟಿಯಾದರೂ ಬಿಯು ಸಂಖ್ಯೆಗಾಗಿ ನಾಲ್ಕೈದು ತಾಸು ಕಳೆಯಿತು. 104, 108 ಮತ್ತು 1912ಗೆ ಕರೆ ಮಾಡಿದಾಗ ಮಾಹಿತಿ ತೆಗೆದುಕೊಳ್ಳುತ್ತಿದ್ದರೆ ವಿನಾ ಯಾರೂ ಹಾಸಿಗೆ ವ್ಯವಸ್ಥೆ ಮಾಡಲಿಲ್ಲ’

‘ಯತೀಶ್ ಬಾಬು ಎಂಬುವರು ಉಚಿತವಾಗಿ ಆಮ್ಲಜನಕ ವ್ಯವಸ್ಥೆ ಮಾಡಿಕೊಟ್ಟರು. ಭಾನುವಾರ ಬೆಳಿಗ್ಗೆ 8ಗಂಟೆಯ ವೇಳೆಗೆ ಬಿಯು ಸಂಖ್ಯೆ ಸಿಕ್ಕಿತು. ಕೆ.ಸಿ. ಜನರಲ್ ಆಸ್ಪತ್ರೆ, ವಿಕ್ಟೋರಿಯಾ ಸೇರಿದಂತೆ ಹಲವು ಆಸ್ಪತ್ರೆಗಳಿಗೆ ಅಲೆದರೂ ಐಸಿಯು ಹಾಸಿಗೆ ಸಿಗಲಿಲ್ಲ. ಕೊನೆಗೆ, ಕಾವಲ್ ಬೈರಸಂದ್ರದ ಬಳಿಯ ಬಿ.ಆರ್. ಅಂಬೇಡ್ಕರ್ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿಯೂ ಬೆಡ್ ಸಿಗಲಿಲ್ಲ. 12 ಗಂಟೆಯ ವೇಳೆಗೆ ಪತಿ ತೀರಿಕೊಂಡರು’ ಎಂದು ಕಣ್ಣೀರಾದರು.

‘ಮೊದಲು ಔಷಧ ಕೊಡಿ’

‘ಹೋಂ ಐಸೊಲೇಶನ್‌ನಲ್ಲಿರುವ ಯೋಗಕ್ಷೇಮದ ಕುರಿತು ಬಿಬಿಎಂಪಿ ಸಿಬ್ಬಂದಿ ಕರೆ ಮಾಡಿ ವಿಚಾರಿಸುತ್ತಾರೆ. ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರ ಹೆಸರು, ದೂರವಾಣಿ ಸಂಖ್ಯೆ ಎಲ್ಲ ಕೇಳುತ್ತಾರೆ. ಆದರೆ, ಔಷಧಿ, ಮಾತ್ರೆಗಳು ಬೇಕು ವ್ಯವಸ್ಥೆ ಮಾಡಿ ಎಂದು ಮನವಿ ಮಾಡಿದರೆ, ಅದಕ್ಕೆ ಸಿಬ್ಬಂದಿ ಏನೂ ಹೇಳುವುದಿಲ್ಲ. ಪಿಎಚ್‌ಸಿಗೆ ಹೋಗಿ ಕೇಳಿ ಎನ್ನುತ್ತಾರೆ. ಹೋಂ ಐಸೊಲೇಶನ್‌ನಲ್ಲಿದ್ದವರು ಓಡಾಡಲು ಸಾಧ್ಯವೇ’ ಎಂದು ಮನೆಯಲ್ಲಿಯೇ ಪ್ರತ್ಯೇಕ ಆರೈಕೆಯಲ್ಲಿರುವ ವ್ಯಕ್ತಿಯೊಬ್ಬರು ಪ್ರಶ್ನಿಸಿದರು. ‘ವಿವರಗಳನ್ನು ಸಂಗ್ರಹಿಸುವ ಕೆಲಸವನ್ನು ಮಾತ್ರ ಬಿಬಿಎಂಪಿ ಮಾಡುತ್ತಿದೆ. ಆದರೆ, ರೋಗಿಗಳಿಗೆ ತುರ್ತಾಗಿ ಏನು ಬೇಕು, ಅದಕ್ಕೆ ಯಾವ ವ್ಯವಸ್ಥೆ ಕೈಗೊಳ್ಳಬೇಕು ಎಂಬ ಬಗ್ಗೆ ಚಿಂತಿಸುತ್ತಿಲ್ಲ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಅಸಹಾಯವಾಣಿಗಳು !

‘ಸಾರಿ ರೋಗಿಗಳಿಗೆ ಬಿಯು ಸಂಖ್ಯೆ ಇರುವುದಿಲ್ಲವಾದ್ದರಿಂದ ಅವರಿಗೆ 108ಕ್ಕೆ ಕರೆ ಮಾಡಲು ಹೇಳುತ್ತಾರೆ. ಆದರೆ, ಆಮ್ಲಜನಕ, ಐಸಿಯು ಹಾಸಿಗೆ ಬೇಕಾದರೆ ಬಿಯು ಸಂಖ್ಯೆ ಬೇಕು. ಇದಕ್ಕಾಗಿ 104ಕ್ಕೆ ಕರೆ ಮಾಡಿದರೆ, ಅವರು 1912ಗೆ ಹೇಳಿದರು. 1912ಗೆ ಕರೆ ಮಾಡಿದರೆ 108ಗೆ ಮಾಡಲು ಹೇಳಿದರು. 108 ಸಂಪರ್ಕ ಸಿಗುವುದಕ್ಕೇ ಅರ್ಧ ಗಂಟೆ ಬೇಕು. ಸಿಕ್ಕರೂ ಮಾಹಿತಿ ಕೇಳುತ್ತಾರೆಯೇ ವಿನಾ ಆಗಬೇಕಾದ ಕಾರ್ಯ ಆಗುವುದೇ ಇಲ್ಲ. ರೋಗಿಯ ಸ್ಥಿತಿ ಗಂಭೀರವಾಗಿದೆ, ಬೇಗ ಹಾಸಿಗೆ ವ್ಯವಸ್ಥೆ ಮಾಡಿ ಎಂದು ಮನವಿ ಮಾಡಿ 15 ತಾಸುಗಳಾದರೂ ಸ್ಪಂದಿಸಲಿಲ್ಲ. ಪತಿಯ ಅಂತ್ಯಸಂಸ್ಕಾರ ಮಾಡಿ ಬಂದು ಮೂರು ತಾಸಿನ ನಂತರ ಬಿಬಿಎಂಪಿಯಿಂದ ಕರೆ ಮಾಡಿ, ಹಾಸಿಗೆ ಸಿಕ್ಕಿತಾ ಎಂದು ವಿಚಾರಿಸಿದರು’ ಎಂದು ಮಹಿಳೆ ಅಸಮಾಧಾನ ವ್ಯಕ್ತಪಡಿಸಿದರು.



ಕೆ.ಆರ್.ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳ ಖರೀದಿಗೆ ಭಾನುವಾರ ಸೇರಿದ್ದ ಜನ– ಪ್ರಜಾವಾಣಿ ಚಿತ್ರ/ಅನೂಪ್ ರಾಘ್ ಟಿ.



ಕೊರೊನಾ ಸೋಂಕಿತರಿಗೆ ಸಹಾಯಕವಾಗುವ 250 ಯೂನಿಟ್‌ಗಳ ಆಮ್ಲಜನಕ ಸಾಂದ್ರೀಕರಣ ಸಾಧನಗಳ ವಿತರಣೆಗೆ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರು ಭಾನುವಾರ ಚಾಲನೆ ನೀಡಿದರು.

ಸುದ್ದಿ 2 ನಿಮಿಷ

15,000 ಆಮ್ಲಜನಕ ಸಾಂದ್ರಕ ಖರೀದಿ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ರೋಗಿಗಳಿಗೆ ತುರ್ತು ಸಂದರ್ಭದಲ್ಲಿ ಒದಗಿಸುವುದಕ್ಕಾಗಿ 15,000 ಆಮ್ಲಜನಕ ಸಾಂದ್ರಕ (ಕಾನ್ಸಂಟ್ರೇಟರ್) ಖರೀದಿಸಲಾಗುವುದು ಎಂದು ಕೋವಿಡ್ ಕಾರ್ಯಪಡೆಯ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮನೆ ಬಾಗಿಲಿಗೆ ಆಮ್ಲಜನಕ ಸಾಂದ್ರಕ ಒದಗಿಸುವ ಕಾರ್ಯಕ್ರಮಕ್ಕೆ ಭಾನುವಾರ ಚಾಲನೆ ನೀಡಿ ಮಾತನಾಡಿದ ಅವರು, ‘5,000 ಉಪಕರಣಗಳನ್ನು ದಾಸ್ತಾನು ಹೊಂದಿರುವವರಿಂದ ತಕ್ಷಣದಲ್ಲೇ ಖರೀದಿಸಲಾಗುವುದು. ಉಳಿದ 10,000 ಸಾಧನಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗುವುದು’ ಎಂದರು.

ಔಷಧಿ ತಯಾರಿಕಾ ಕಂಪನಿಗಳು ರಾಜ್ಯಕ್ಕೆ ನಿಗದಿತ ಪ್ರಮಾಣದ ರೆಮ್‌ಡಿಸಿವಿರ್ ಚುಚ್ಚುಮದ್ದು ಪೂರೈಸುತ್ತಿಲ್ಲ. ಅಂತಹ ಕಂಪನಿಗಳಿಗೆ ನೋಟಿಸ್ ನೀಡಲಾಗಿದೆ ಎಂದು ತಿಳಿಸಿದರು.

90 ಆಮ್ಲಜನಕ ಸಾಂದ್ರಕಗಳನ್ನು ರಾಮಾನುಜ ಜಿಯರ್ ಸ್ವಾಮೀಜಿ ಸೇವೆಗೆ ಮುಕ್ತಗೊಳಿಸಿದರು. 70 ಆಮ್ಲಜನಕ ಸಾಂದ್ರಕಗಳನ್ನು ಮಲ್ಲೇಶ್ವರ ಕ್ಷೇತ್ರದ ವ್ಯಾಪ್ತಿಯಲ್ಲಿ ಬಳಸಲಾಗುತ್ತದೆ. 20 ಸಾಂದ್ರಕಗಳನ್ನು ಕೋಲಾರ ಜಿಲ್ಲೆಯಲ್ಲಿ ಬಳಸುವುದಕ್ಕಾಗಿ ಅಲ್ಲಿನ ಸಂಸದ ಮುನಿಸ್ವಾಮಿ ಅವರಿಗೆ ಹಸ್ತಾಂತರಿಸಲಾಯಿತು.

ಆದಿಚುಂಚನಗಿರಿ ಮಠದಿಂದ ಕೋವಿಡ್ ಆರೈಕೆ ಕೇಂದ್ರ



ಬೆಂಗಳೂರು: ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ನಗರದ ವಿಜಯನಗರದ ಕಾಲಭೈರವೇಶ್ವರ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ 100 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರ ಆರಂಭಿಸಿದೆ.


ಮಠದ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಸೌಮ್ಯನಾಥ ಸ್ವಾಮೀಜಿಯವರು ಈ ಕೇಂದ್ರವನ್ನು ಭಾನುವಾರ ಉದ್ಘಾಟಿಸಿದರು.

ಈ ಕೇಂದ್ರದಲ್ಲಿ ನುರಿತ ತಜ್ಞರಿದ್ದು ಸೋಂಕಿತರಿಗೆ ಪ್ರತಿದಿನ ತಪಾಸಣೆ ನಡೆಸಿ ಅಗತ್ಯ ಮಾಹಿತಿಯನ್ನು ಒದಗಿಸಲಿದ್ದಾರೆ. ಔಷಧಿ, ಹಾಸಿಗೆ ಕೂಡ ಇಲ್ಲಿ ಲಭ್ಯವಿರಲಿದೆ.

ಸೋಂಕಿತರನ್ನು ಉಪಚರಿಸಲು ನುರಿತ ಸಹಾಯಕರು ಇರಲಿದ್ದು, ಪ್ರತಿದಿನ ಯೋಗ, ಪ್ರಾಣಾಯಾಮ ಸೇರಿದಂತೆ ಉತ್ತಮ ಆರೋಗ್ಯಕ್ಕೆ ಅಮೂಲ್ಯವಾದ ಸಲಹೆಗಳನ್ನು ನೀಡುವ ತಂಡ ಕಾರ್ಯನಿರ್ವಹಿಸಲಿದೆ.

‘ನನ್ನನ್ನು ನೋಡಿಕೊಳ್ಳುವ ‘ಕನ್ನಡಿ’ ಒದಗಿಸಿತು’

ಕೋವಿಡ್ ಗೆದ್ದವರ ಕಥೆ



ಬೆಂಗಳೂರು: ‘ಕೋವಿಡ್ ಪೀಡಿತನಾಗಿದ್ದ 74ರ ಹರೆಯದ ನನಗೆ ‘ಸುಧಾರಿಸಿಕೊಂಡು ಬನ್ನಿ’ ಎಂದು ಹೇಳಿದವರಲ್ಲಿ ಕೆಲವರು ಇದ್ದಕ್ಕಿದ್ದಂತೆ ಇಲ್ಲವಾದರು. ಆಸ್ಪತ್ರೆಯಲ್ಲಿ ನನ್ನ ಕೊಠಡಿಯ ಪಕ್ಕದಲ್ಲೇ ಇದ್ದವರೊಬ್ಬರು ನಾನು ಮನೆಗೆ ತೆರಳುವ ಮುನ್ನವೇ ದೂರವಾಗಿದ್ದರು. ಇದನ್ನೆಲ್ಲ ನೋಡಿದರೆ ನಾನೂ ಬದುಕಿಬಿಟ್ಟಿದ್ದೇನೆ ಎನ್ನುವ ಭಾವ ಉಂಟಾಗಿದೆ.’

‘ಕಳೆದ ಏಪ್ರಿಲ್ 4ರಂದು ಜ್ವರ, ತಲೆಭಾರ ಸೇರಿದಂತೆ ವಿವಿಧ ಲಕ್ಷಣಗಳು ಕಾಣಿಸಿಕೊಂಡವು. ಕೂಡಲೇ ಸುಗುಣ ಆಸ್ಪತ್ರೆಗೆ ದಾಖಲಾಗಿ, ಪರೀಕ್ಷೆ ಮಾಡಿಸಿಕೊಂಡೆ. ಕೊರೊನಾ ಸೋಂಕಿತನಾಗಿರುವುದು ದೃಢಪಟ್ಟಿತು. ಐದು ದಿನಗಳು ಅಲ್ಲಿನ ವೈದ್ಯರು ಮತ್ತು ಶುಶ್ರೂಷಕಿಯರು ನೀಡಿದ ಸೇವೆಯಿಂದ ನಾನು ರೋಗಮುಕ್ತನಾಗಿ ಮನೆಗೆ ಬಂದೆ. ಬಳಿಕ 15 ದಿನಗಳು ಮನೆಯಲ್ಲಿಯೇ ನಿಗಾ ವ್ಯವಸ್ಥೆಗೆ ಒಳಗಾದೆ. ಆಗ ನೆರವಾದದ್ದು ನನ್ನ ಶೇಷಾದ್ರಿಪುರ ಮತ್ತು ಸುರಾನಾ ಕಾಲೇಜುಗಳ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿ ಬಳಗ.’

‘ವಾಟ್ಸ್‌ಆ್ಯಪ್ ಸಂದೇಶಗಳು, ಹಾಸ್ಯಚಟಾಕಿಗಳು, ಚರ್ಚೆಗಳು, ಸಂಗೀತದ ತುಣುಕುಗಳು, ಬರವಣಿಗೆ, ಪುಸ್ತಕಗಳು ಹಾಗೂ ದಿನಪತ್ರಿಕೆಗಳು ಸಮಯವನ್ನು ಕಳೆಯಲು ಸಹಕಾರಿಯಾದವು. ಸ್ಮಾರ್ಟ್‌ಫೋನ್‌ನ ನೆರವಿನಿಂದ ದೇಶ ವಿದೇಶದ ವಿಭಿನ್ನ ಸಂಗೀತರಾಗವನ್ನು ಆಲಿಸಲು ಸಾಧ್ಯವಾಯಿತು. ಈ ಕೋವಿಡ್ ಕಾರಣದಿಂದಲೇ ಎಷ್ಟೊಂದು ಪಡೆದುಕೊಂಡೆ. ನನ್ನನ್ನು ‘ನನ್ನನ್ನಾಗಿ’ ನೋಡಿಕೊಳ್ಳುವ ‘ಕನ್ನಡಿ’ಯನ್ನು ಈ ಕಾಯಿಲೆ ಒದಗಿಸಿತು.’

‘ಜಾತಿ, ಮತ, ಲಿಂಗ, ಬಣ್ಣ ಮತ್ತು ವಯಸ್ಸುಗಳ ಭೇದ ಭಾವ ಇಲ್ಲದೆಯೇ ಎಲ್ಲರನ್ನೂ ಸ್ಪರ್ಶಿಸುವ ಕೋವಿಡ್, ನಾವೆಲ್ಲರೂ ಒಂದೇ ಬುಡದ ‘ಕಟ್ಟು’ ಎನ್ನುವುದನ್ನು ನಮ್ಮ ಅಂತರಂಗದಲ್ಲಿ ಬೇರೂರಿಸಲಿ. ಔಷಧಗಳ ಜತೆಗೆ ನಮ್ಮ ಮೊಬೈಲ್‌ಗಳಲ್ಲಿ ಅಡಗಿರುವ ಕಲಾಜಗತ್ತಿನ ಸಾಂಗತ್ಯವು ಸೋಂಕನ್ನು ತೊಲಗಿಸಲು ಶಕ್ತಿ ನೀಡುವ ಆರೋಗ್ಯವರ್ಧಕ ಎನ್ನುವುದು ನಮ್ಮ ಅರಿವಿನಲ್ಲಿರಲಿ.

ಪ್ರೊ.ಕೆ.ಈ. ರಾಧಾಕೃಷ್ಣ, ಶಿಕ್ಷಣ ತಜ್ಞ

‘ಜನರನ್ನು ಹಸಿವಿನತ್ತ ನೂಕಲಿರುವ ಲಾಕ್‌ಡೌನ್’

ಬೆಂಗಳೂರು: ‘ರಾಜ್ಯ ಸರ್ಕಾರ ಜಾರಿಗೊಳಿಸಿರುವ ಲಾಕ್‌ಡೌನ್ ಅಮಾನವೀಯ ಮತ್ತು ಅಪ್ರಯೋಜಕ. ಇದು ಜನರನ್ನು ಹಸಿವಿನತ್ತ ನೂಕಲಿದ್ದು ಅವರ ಜೀವವನ್ನು ಬಲಿಪಡೆಯಲಿದೆ’ ಎಂದು ಡಿವೈಎಫ್‌ಐ ರಾಜ್ಯ ಸಮಿತಿ ಟೀಕಿಸಿದೆ.

‘ಕೊರೊನಾ ಸೋಂಕಿಗೆ ಕಡಿವಾಣ ಹಾಕಲು ಹಾಗೂ ಸೋಂಕಿತರಿಗೆ ಅಗತ್ಯ ಚಿಕಿತ್ಸೆ ಒದಗಿಸಿ ಸಾವಿನ ಪ್ರಮಾಣ ಕಡಿಮೆ ಮಾಡುವಲ್ಲಿ ಸರ್ಕಾರವು ಸಂಪೂರ್ಣವಾಗಿ ವಿಫಲಗೊಂಡಿದೆ. ನೆರೆಯ ರಾಜ್ಯಗಳು ಈ ಪಿಡುಗನ್ನು ತಡೆಯುವ ನಿಟ್ಟಿನಲ್ಲಿ ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿವೆ. ‘ಚಿಕಿತ್ಸೆ, ಪರಿಹಾರ ಮತ್ತು ನಿರ್ಬಂಧ’ ಹೀಗೆ ಮೂರು ಸೂತ್ರಗಳನ್ನು ಅಳವಡಿಸಿಕೊಂಡಿವೆ. ಆದರೆ, ನಮ್ಮಲ್ಲಿ ಇದಕ್ಕೆ ತದ್ವಿರುದ್ಧವಾದ ಪರಿಸ್ಥಿತಿ ಇದೆ’ ಎಂದು ಸಮಿತಿಯ ಅಧ್ಯಕ್ಷ ಮುನೀರ್ ಕಾಟಿಪಳ್ಳ ಹೇಳಿದ್ದಾರೆ.

‘ರೋಗಿಗಳ ಸೇವೆಗೆ ಹೊಂದಾಣಿಕೆ ಅನಿವಾರ್ಯ’

ಶುಶ್ರೂಷಕರ ಅಂತರಂಗ



ಬೆಂಗಳೂರು: ‘ಕೋವಿಡ್ ಪೀಡಿತರ ಆರೈಕೆಯಲ್ಲಿ ತೊಡಗಿಕೊಂಡ ಬಳಿಕ ಜೀವನದಲ್ಲಿ ಕೆಲವೊಂದು ಹೊಂದಾಣಿಕೆ ಮಾಡಿಕೊಂಡು ಸಾಗಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಮೊದಲ ಅಲೆಯ ಅವಧಿಯಲ್ಲಿ 5 ತಿಂಗಳು ಕುಟುಂಬದಿಂದ ಅಂತರ ಕಾಯ್ದುಕೊಂಡಿದ್ದೆ. ಈಗ, ಪತ್ನಿ ಹಾಗೂ ಮಕ್ಕಳ ಮುಖ ನೋಡದೆಯೇ ತಿಂಗಳು ಉರುಳಿದೆ.’

ಇದು ಕೋವಿಡ್ ಸೇವೆಯಲ್ಲಿ ನಿರತರಾಗಿರುವ ವಿಕ್ಟೋರಿಯಾ ಆಸ್ಪತ್ರೆಯ ಶುಶ್ರೂಷಾಧಿಕಾರಿ ಕೇಶವಮೂರ್ತಿ ಅವರ ಮನದಾಳದ ಮಾತುಗಳು. ಆಸ್ಪತ್ರೆಯ ತೀವ್ರ ನಿಗಾ ಘಟಕ ಮತ್ತು ಸಾಮಾನ್ಯ ವಾರ್ಡ್‌ಗಳಲ್ಲಿ ಸೇವೆ ನೀಡುತ್ತಿರುವ ಅವರು, ಸುರಕ್ಷತೆಯ ದೃಷ್ಟಿಯಿಂದ ಕುಟುಂಬದ ಸದಸ್ಯರನ್ನು ಊರಿಗೆ ಕಳುಹಿಸಿದ್ದಾರೆ.

‘ಮೊದಲ ಅಲೆ ಕಾಣಿಸಿಕೊಂಡ ವೇಳೆ ನಾನು ಸಂಯೋಜಕನಾಗಿ ಕಾರ್ಯನಿರ್ವಹಿಸಿದೆ. ವಾರ್ಡ್‌ಗಳಲ್ಲಿ ಸೇವೆ ಒದಗಿಸುತ್ತಿರುವವರಿಗೆ ಔಷಧ ಸೇರಿದಂತೆ ಅಗತ್ಯ ಪರಿಕರಗಳು ಸಮಸ್ಯೆಯಾಗದಂತೆ ನೋಡಿಕೊಳ್ಳುತ್ತಿದೆ. ಎರಡನೇ ಅಲೆ ಕಾಣಿಸಿಕೊಂಡ ಬಳಿಕ ವಾರ್ಡ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ. ಮೊದಲನೇ ಅಲೆಯ ವೇಳೆ ಸೋಂಕಿತರಿಗೆ ವಿಶೇಷ ಚಿಕಿತ್ಸೆಗಳು ಬೇಕಾಗಿರಲಿಲ್ಲ. ಆದರೆ, ಎರಡನೇ ಅಲೆಯಲ್ಲಿ ಸೋಂಕಿತರು ಗಂಭೀರವಾಗಿ ಅಸ್ವಸ್ಥರಾಗುತ್ತಿದ್ದು, ಬಹುತೇಕರಿಗೆ ಹಾಸಿಗೆಯಿಂದ ಎದ್ದು ಓಡಾಡಲು ಸಾಧ್ಯವಾಗುವುದಿಲ್ಲ. ಪ್ರತಿಯೊಂದಕ್ಕೂ ನಮ್ಮನ್ನೇ ಅವರು ಅವಲಂಬಿಸಿರುತ್ತಾರೆ’ ಎಂದು ತಿಳಿಸಿದರು.

‘ಈಗಾಗಲೇ ಕೋವಿಡ್ ಲಸಿಕೆಯ ಎರಡೂ ಡೋಸ್ ಅನ್ನು ಪಡೆದುಕೊಂಡಿದ್ದೇನೆ. ಆಸ್ಪತ್ರೆಯ ಒಳಗಡೆ ಕಾಲಿಡುವಾಗ ಭಯಕ್ಕೆ ಒಳಗಾಗಬಾರದು. ಆದರೂ ಮುನ್ನೆಚ್ಚರಿಕೆಗಳನ್ನು ವಹಿಸಬೇಕಾಗುತ್ತದೆ. ವೈಯಕ್ತಿಕ ಸುರಕ್ಷಾ ಸಾಧನಗಳನ್ನು ಧರಿಸಿ 6 ಗಂಟೆಗಳು ಸೇವೆ ನೀಡಬೇಕಾಗುತ್ತದೆ. ಆ ವೇಳೆ ನೀರು ಕುಡಿಯಲು, ತಿಂಡಿ–ಊಟ ಸೇವಿಸಲು ಸಾಧ್ಯವಾಗುವುದಿಲ್ಲ. ಮೂತ್ರ ವಿಸರ್ಜನೆಗೆ ಕೂಡ ಅವಕಾಶ ಇರುವುದಿಲ್ಲ. ರೋಗಿಗಳ ಸೇವೆ ಹೊರತುಪಡಿಸಿ ಬೇರೆಯ ವಿಚಾರಗಳು ನಮ್ಮಲ್ಲಿ ಮೂಡುವುದಿಲ್ಲ’ ಎಂದರು.

‘ಕೋವಿಡ್ ಪೀಡಿತರು ಆತಂಕ, ಭಯಕ್ಕೆ ಒಳಗಾಗಿರುತ್ತಾರೆ. ಅವರಿಗೆ ಧೈರ್ಯ ತುಂಬಬೇಕಾಗುತ್ತದೆ. ಈಗ ಆಸ್ಪತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರು ಇರುವುದರಿಂದ ಅವರ ಎಲ್ಲ ಬೇಕು ಬೇಡಗಳನ್ನು ಈಡೇರಿಸುವುದು ಕೆಲವು ವೇಳೆ ಸಾಧ್ಯವಾಗುವುದಿಲ್ಲ. ಎಷ್ಟೋ ರೋಗಿಗಳಿಗೆ ನಾನೇ ಊಟ ಮಾಡಿಸಿದ್ದೇನೆ’ ಎಂದು ವಿವರಿಸಿದರು.

ಪರಿಚಯ

ಹೆಸರು: ಕೇಶವಮೂರ್ತಿ ಎಂ.
ಊರು: ಚಾಮರಾಜನಗರದ ಮುಡಿಗುಂಡ
ವೃತ್ತಿ: ಶುಶ್ರೂಷಾಧಿಕಾರಿ
ಸೇವೆ: 11 ವರ್ಷ
ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ: ವಿಕ್ಟೋರಿಯಾ, ಬೆಂಗಳೂರು

ನಗರದ ಕೋವಿಡ್ ಅಂಕಿ–ಅಂಶ

9,50,893 ಒಟ್ಟು ಪ್ರಕರಣಗಳು (9,29,996 ನಿನ್ನೆಯ ವಿವರ)
3,50,370 ಸಕ್ರಿಯ ಪ್ರಕರಣಗಳು
5,92,465 ಗುಣಮುಖರಾದವರು
8,057 ಒಟ್ಟು ಸಾವು

ದಿನದ ಏರಿಕೆ
ಹೊಸ ಪ್ರಕರಣ 20,897
ಗುಣಮುಖ 15,000
ಸಾವು 281

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ತಂದೆಯ ಮೃತದೇಹ ಪಡೆಯಲು ನಿರಾಕರಿಸಿದ ನ್ಯಾಯಾಧೀಶರು!

ಪಟ್ನಾ: ಬಿಹಾರದ ಸಿವಾನ್ ಜಿಲ್ಲೆಯ ಕೆಳ ನ್ಯಾಯಾಲಯದ ನ್ಯಾಯಾಧೀಶರೊಬ್ಬರು ಕೋವಿಡ್‌ನಿಂದ ಮೃತಪಟ್ಟ ತಂದೆಯ ಮೃತದೇಹವನ್ನು ಪಡೆಯಲು ನಿರಾಕರಿಸಿದ್ದಾರೆ. ತಂದೆ ಕೋವಿಡ್‌ನಿಂದ ಮೃತಪಟ್ಟಿರುವುದರಿಂದ ಮೃತದೇಹವನ್ನು ಮನೆಗೆ ತೆಗೆದುಕೊಂಡು ಹೋದರೆ ಕುಟುಂಬದ ಇತರ ಸದಸ್ಯರಿಗೂ ಸೋಂಕು ತಗುಲುವ ಸಾಧ್ಯತೆಯಿದೆ ಎಂದು ಅವರು ಕಾರಣ ನೀಡಿದ್ದಾರೆ.

ಕೋವಿಡ್ ಪಾಸಿಟಿವ್ ಇದ್ದ ಕಾರಣ ನ್ಯಾಯಾಧೀಶರ ತಂದೆಯನ್ನು ಸಿವಾನ್‌ನ ಕೋವಿಡ್ ಚಿಕಿತ್ಸಾ ಕೇಂದ್ರಕ್ಕೆ ದಾಖಲಿಸಲಾಗಿತ್ತು. ಆಮ್ಲಜನಕದ ಮಟ್ಟ ಕಡಿಮೆಯಾಗಿ ಶುಕ್ರವಾರ ತಡರಾತ್ರಿ ನಿಧನರಾಗಿದ್ದರು.

‘ನ್ಯಾಯಾಧೀಶರಿಗೆ ತನ್ನ ತಂದೆಯ ಸಾವಿನ ಬಗ್ಗೆ ತಿಳಿಸಲಾಗಿತ್ತು. ಆದರೆ, ಅವರು ತನ್ನ ಕುಟುಂಬದ ಇತರ ಸದಸ್ಯರು ಸೋಂಕಿಗೆ ಒಳಗಾಗಬಹುದೆಂದು ಭಾವಿಸಿ ತಂದೆಯ ಶವವನ್ನು ನಿವಾಸಕ್ಕೆ ಕೊಂಡೊಯ್ಯಲು ನಿರಾಕರಿಸಿದರು. ಜಿಲ್ಲಾಡಳಿತವು ನಮ್ಮ ತಂದೆಯ ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಬೇಕು ಎಂದು ಒತ್ತಾಯಿಸಿದರು’ ಎಂದು ಆರೋಗ್ಯ ಇಲಾಖೆಯ ಮೂಲವೊಂದು ತಿಳಿಸಿದೆ.

ಆದರೆ, ಮೃತದೇಹವು 20 ಗಂಟೆಗಳ ಕಾಲ ಆಸ್ಪತ್ರೆಯಲ್ಲಿಯೇ ಇತ್ತು. ಅಂತಿಮವಾಗಿ, ಶನಿವಾರ, ನ್ಯಾಯಾಧೀಶರು ತಮ್ಮ ಪರವಾಗಿ ಶವವನ್ನು ಪಡೆಯಲು ವಕೀಲರೊಬ್ಬರಿಗೆ ಅಧಿಕಾರ ನೀಡಿದರು.

‘ನ್ಯಾಯಾಧೀಶರ ತಂದೆಯ ಶವವನ್ನು ಎಸ್‌ಡಿಒ ರಾಮ್ ಬಾಬು ಪ್ರಸಾದ್ ಮತ್ತು ಉಸ್ತುವಾರಿ ಸಿವಿಲ್ ಸರ್ಜನ್ ಡಾ.ಎಂ.ಆರ್.ರಂಜನ್ ಅವರ ಸಮ್ಮುಖದಲ್ಲಿ ವಕೀಲರಿಗೆ ಹಸ್ತಾಂತರಿಸಲಾಯಿತು’ ಎಂದು ಮೂಲಗಳು ತಿಳಿಸಿವೆ.

ನಂತರ, ಜಿಲ್ಲಾಡಳಿತವು ಸಾಮಾಜಿಕ ಕಾರ್ಯಕರ್ತ ಶ್ರೀನಿವಾಸ್ ಯಾದವ್ ಅವರ ನೆರವಿನೊಂದಿಗೆ ಮೃತದೇಹದ ಅಂತ್ಯಕ್ರಿಯೆಯನ್ನು ಕಂದವಾರ ನದಿಯ ದಡದಲ್ಲಿ ನೆರವೇರಿಸಿತು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	15.87 ಕೋಟಿ	2.26 ಕೋಟಿ
ಸಕ್ರಿಯ ಪ್ರಕರಣ	1.91 ಕೋಟಿ	37.43 ಲಕ್ಷ
ಗುಣಮುಖ	13.62 ಕೋಟಿ	1.86 ಕೋಟಿ
ಸಾವು	33.02 ಲಕ್ಷ	2.46 ಲಕ್ಷ
ದಿನದ ಏರಿಕೆ: ಹೊಸ ಪ್ರಕರಣ	4.15 ಲಕ್ಷ	3,62,141
ದಿನದ ಏರಿಕೆ: ಗುಣಮುಖ	6.04 ಲಕ್ಷ	3,47,025
ದಿನದ ಏರಿಕೆ: ಸಾವು	6,124	3,648

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 63,268 ಬ್ರೆಜಿಲ್; 35,755 ಅಮೆರಿಕ; 18,052 ಟರ್ಕಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 64.53 ಅಮೆರಿಕ; 10.51 ಬ್ರೆಜಿಲ್; 8.28 ಫ್ರಾನ್ಸ್

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 75,849 ಮಹಾರಾಷ್ಟ್ರ; 15,648 ತಮಿಳುನಾಡು; 19,344 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 51.01 ಮಹಾರಾಷ್ಟ್ರ; 19.02 ಕೇರಳ; 15.03 ಉತ್ತರ ಪ್ರದೇಶ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಯುದ್ಧದಲ್ಲಿ ಧರ್ಮಾಂಧತೆ ಬೇಡ: ಟ್ವೀಟಿಗರ ಸಲಹೆ

‘ನಮ್ಮೂರ ಎಲ್ಲರೂ ನಮ್ಮೋರು’ ಅಭಿಯಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಧರ್ಮವನ್ನು ಮುಂದಿಟ್ಟು ನಮ್ಮನ್ನು ಬೇರೆ ಮಾಡಲು ಹೊರಟ ರಾಜಕಾರಣಿಗಳು
- ಕಾರ್ಮಿಕ ಸಂಘಟನೆಗಳು, ಕಲಾವಿದರು, ವಕೀಲರು, ಸೇರಿ ಸಾವಿರಾರು ಜನ ಟ್ವೀಟ್
- ಕೋವಿಡ್ ಕಡೆ ಗಮನ ಕೊಡಿ, ಜಾತಿ-ಧರ್ಮ ಈಗಾದರೂ ಬಿಡಿ

ಬೆಂಗಳೂರು: ನೀವು ಹಾದಿಯಲ್ಲಿ ಮುಳ್ಳು ಹಾಕ್ತಾ ಹೋಗಿ, ನಾವು ಪ್ರೀತಿ ಹೂವನ್ನು ನೆಡುತ್ತಾ ಹೋಗ್ತೀವಿ...ನಿಮ್ಮ ದ್ವೇಷದ ಸೂರ್ಯನ ಧಗೆಗೆ ಪ್ರೀತಿಯ ಮಳೆ ಚೆಲ್ಲಿ ಕಾಮನಬಿಲ್ಲಿನಿಂದ ಮುಚ್ಚಿ ಬಿಡ್ತೀವಿ... ಏನ್ ಬೇಕಾದರೂ ಮಾಡಿ ಸರ್, ನಮ್ಮೂರಲ್ಲಿ ಎಲ್ಲರೂ ನಮ್ಮೋರೆ...

‘ಕೋವಿಡ್ ಸಂದರ್ಭದಲ್ಲಿ ಧರ್ಮಾಂಧತೆ ಬೇಡ’ ಎಂಬ ಆಶಯದೊಂದಿಗೆ ಸಮಾನ ಮನಸ್ಕರು ಭಾನುವಾರ ಟ್ವಿಟರ್‌ನಲ್ಲಿ ‘ನಮ್ಮೂರ ಎಲ್ಲರೂ ನಮ್ಮೋರು’ ಹ್ಯಾಶ್‌ಟ್ಯಾಗ್ ಅಡಿ ನಡೆಸಿದ ‘ಪ್ರೀತಿಗಾಗಿ ಬೆಂಗಳೂರು’ ಅಭಿಯಾನದಲ್ಲಿ ಕೆಲವರು ಮಾಡಿದ ಟ್ವೀಟ್‌ಗಳಿವು.

‘ತಮ್ಮ ವೈಫಲ್ಯಗಳನ್ನು ಮುಚ್ಚಿಡಲು ಕೆಲವು ರಾಜಕಾರಣಿಗಳು ಧರ್ಮವನ್ನು ಮುಂದಿಟ್ಟು ನಮ್ಮನ್ನು ಬೇರೆ ಮಾಡಲು ಹೊರಟಿದ್ದಾರೆ. ನಾವು ಇದನ್ನು ಬಿಡುವುದಿಲ್ಲ, ನಾವೆಲ್ಲರೂ ಒಂದಾಗಿ ಕೋವಿಡ್ ಸೋಂಕನ್ನು ಎದುರಿಸುತ್ತೇವೆ ಎಂದು ತೋರಿಸೋಣ’ ಎಂಬ ಗುರಿಯೊಂದಿಗೆ ನಡೆದ ಈ ಅಭಿಯಾನದಲ್ಲಿ ಕಾರ್ಮಿಕ ಸಂಘಟನೆಗಳು, ಕಲಾವಿದರು,- ವಕೀಲರು, ಯುವತಿಯರು-ಯುವಕರು, ವಿಜ್ಞಾನಿಗಳು, ಮಹಿಳಾ ಹೋರಾಟಗಾರರು ಸೇರಿದಂತೆ ಸಾವಿರಾರು ಜನ ಟ್ವೀಟ್ ಮಾಡಿದರು.

ಕೋವಿಡ್ ಬಿಕ್ಕಟ್ಟಿನ ಈ ಕಷ್ಟ ಕಾಲದಲ್ಲಿ, ಹಾಸಿಗೆ, ಆಮ್ಲಜನಕ, ಲಸಿಕೆ, ಔಷಧಿ ಇವೆಲ್ಲವನ್ನೂ ಸಮರ್ಪಕವಾಗಿ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಕನ್ನಡ, ಇಂಗ್ಲಿಷ್ ಸೇರಿದಂತೆ ಹಲವು ಭಾಷೆಗಳಲ್ಲಿ ಸರ್ಕಾರಕ್ಕೆ ಅನೇಕ ಸಂದೇಶಗಳನ್ನು ಜನ ನೀಡಿದರು. ತಾವು ಹೇಳಬೇಕಾದ ಸಾಲುಗಳನ್ನು ಫಲಕಗಳಲ್ಲಿ ಬರೆದುಕೊಂಡು ಕೆಲವರು ಟ್ವಿಟರ್‌ನಲ್ಲಿ ಪ್ರದರ್ಶಿಸಿದರೆ, ಹಾಡು, ಕವಿತೆಗಳ ಮೂಲಕ ಅನೇಕರು ಸಂದೇಶ ನೀಡಿದರು.

‘ಕೋವಿಡ್ ಕಡೆ ಗಮನ ಕೊಡಿ, ಜಾತಿ-ಧರ್ಮ ಈಗಾದರೂ ಬಿಡಿ’ ಎಂದು ಹಲವರು ಸಲಹೆ ನೀಡಿದರೆ, ‘ಯುಗಾದಿ ಬಂದಾಗ ಡಿವಿಜಿ ರೋಡು, ಕ್ರಿಸ್‌ಮಸ್ ಬಂದಾಗ ಬ್ರಿಗೇಡ್ ರೋಡು, ರಮ್ಜಾನ್ ಬಂದಾಗ ಮಸೀದಿ ರೋಡು, ಈ ಒಗ್ಗಟ್ಟನ್ನು ಮುರೀಬೇಡ, ಬಿಟ್ಟುಬಿಡು’ ಎಂದು ಹೇಳುವ ಮೂಲಕ ಹಲವರು ಸಾಮರಸ್ಯದ ಪಾಠ ಮಾಡಿದರು.

‘ನಿಮ್ಮ ಬದ್ಧತೆಯ ಕೊರತೆಯನ್ನು ಮುಚ್ಚಿಹಾಕಲು ಧರ್ಮಾಂಧತೆಯ ಮತ್ತೊಂದು ಸೋಂಕನ್ನು ಹರಡಬೇಡಿ’ ಎಂದು ಕೆಲವರು ಚುಚ್ಚಿದರೆ, ‘ಜನರೇ ಬದುಕುಳಿಯದಿದ್ದರೆ ಯಾವ ಜಾತಿ? ಯಾವ ಧರ್ಮ?, ಕೊಳಕು ರಾಜಕೀಯ ಪಕ್ಕಕ್ಕಿಡಿ, ಲಸಿಕೆ ಆಮ್ಲಜನಕ ತಂದುಕೊಡಿ’ ಎಂದು ಒತ್ತಾಯಿಸಿದವರು ಅನೇಕ ಮಂದಿ.

‘ಈ ನಾಡು ಸರ್ವಜನಾಂಗದ ಶಾಂತಿಯ ತೋಟ, ಬೂಟಾಟಿಕೆ ಸಾಕು ಲಸಿಕೆ ಬೇಕು’ ಎಂದು ಅನೇಕರು ರಾಜಕಾರಣಿಗಳಿಗೆ ಸಲಹೆ ನೀಡಿದರು.

ರಶ್ಮಿ ರವಿಕುಮಾರ್, ಶೃಂಗ, ನಿಧಿ, ಜಾಕೊಬ್, ಭಾವನಾ, ಭಟ್ಟಾಚಾರ್ಯ, ವಿನಯ್ ಕುಮಾರ್, ವಿನಯ್ ಶ್ರೀನಿವಾಸ್ ಸೇರಿದಂತೆ ಹಲವು ಟ್ವೀಟ್ ಮಾಡಿದರು.

ನಿಧನ ವಾರ್ತೆ

ಸುಶೀಲಾ



ಬೆಂಗಳೂರು: ಲೇಖಕ ಬಾಬು ಕೃಷ್ಣಮೂರ್ತಿ ಅವರ ಪತ್ನಿ ಸುಶೀಲಾ (75) ಅನಾರೋಗ್ಯದಿಂದ ನಗರದ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಅವರು ಬಿಟಿಎಂ ಬಡಾವಣೆಯ ಎರಡನೇ ಹಂತದಲ್ಲಿ ವಾಸವಿದ್ದರು. ಹೆಬ್ಬಾಳದ ಚಿತಾಗಾರದಲ್ಲಿ ಅಂತ್ಯಕ್ರಿಯೆ ಭಾನುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋವಿಡ್ ಎರಡನೇ ಅಲೆ ಸಮರ್ಥ ನಿರ್ವಹಣೆಗೆ ಮಾಡಬೇಕಾದುದೇನು? ಮೂರನೇ ಅಲೆ ಎದುರಿಸಲು ಸನ್ನದ್ಧರಾಗುವುದು ಹೇಗೆ?

ಐಸಿಯು ಹೊಂದಿಸುವಲ್ಲಿ– ಎಡವಿದ್ದೆಲ್ಲಿ?

• ಪ್ರವೀಣ್ ಕುಮಾರ್ ಪಿ.ವಿ.


ಬೆಂಗಳೂರು: ನಗರದಲ್ಲಿ ಕೋವಿಡ್ ಎರಡನೇ ಅಲೆ ಅಟ್ಟಹಾಸ ಮೆರೆಯುತ್ತಿದೆ. ನಗರದ ಅಷ್ಟೂ ಆಸ್ಪತ್ರೆಗಳ ತೀವ್ರ ನಿಗಾ ಘಟಕಗಳು (ಐಸಿಯು) ತೀವ್ರ ಉಸಿರಾಟದ ಸಮಸ್ಯೆ ಎದುರಿಸುತ್ತಿರುವ ಕೊರೋನಾ ಸೋಂಕಿತರಿಂದ ಭರ್ತಿಯಾಗಿವೆ. ಸಾವಿನಂಚು ತಲುಪಿರುವ ರೋಗಿಗಳ ಚಿಕಿತ್ಸೆಗೂ ಯಾವುದೇ ಆಸ್ಪತ್ರೆಗಳ ಐಸಿಯುಗಳಲ್ಲೂ ಹಾಸಿಗೆ ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ.

ದ್ವಿತೀಯ ಹಾಗೂ ತೃತೀಯ ಹಂತದ ಆರೋಗ್ಯ ಸೇವೆಯಲ್ಲಿ ದೇಶದಲ್ಲೇ ಅತ್ಯುತ್ತಮ ಸೌಕರ್ಯ ಹೊಂದಿರುವ ನಗರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಬೆಂಗಳೂರಿನ ಪರಿಸ್ಥಿತಿ ಹೀಗೇಗಾಯಿತು. ನೆರೆಯ ರಾಜ್ಯ ಮಹಾರಾಷ್ಟ್ರದಲ್ಲಿ ಕೋವಿಡ್ ಎರಡನೇ ಅಲೆಯಲ್ಲಿ ಸಿಲುಕಿ ಜನ ತರಗೆಲೆಗಳು ಉದುರಿ ಬೀಳುವ ತೆರದಲ್ಲಿ ಪ್ರಾಣ ಬಿಡುತ್ತಿದ್ದಾಗಲೂ ನಮ್ಮ ಸರ್ಕಾರ 'ಇಂತಹ ಸಮಸ್ಯೆ ನಮ್ಮಲ್ಲೂ ಬರಬಹುದು' ಎಂದು ಏಕೆ ಮುಂದಾಲೋಚಿಸಲಿಲ್ಲ. ಇಲ್ಲಿ ಎರಡನೇ ಅಲೆಯ ತೀವ್ರ ಸ್ವರೂಪ ಪಡೆದು ಎರಡೂವರೆ ತಿಂಗಳುಗಳಲ್ಲಿ ಏಕೆ ಐಸಿಯು ಘಟಕಗಳ ಬಲವರ್ಧನೆಯ ಪ್ರಯತ್ನ ನಡೆಯಲಿಲ್ಲ...? ಇವೆಲ್ಲವೂ ಇನ್ನೂ ಉತ್ತರವೇ ಸಿಗದೇ ಪ್ರಶ್ನೆಗಳು.

ನಗರದಲ್ಲಿ ನಿತ್ಯವೂ ಸಾವಿರಕ್ಕೂ ಅಧಿಕ ಕೋವಿಡ್ ಪ್ರಕರಣಗಳು ವರದಿಯಾಗಲು ಶುರುವಾಗಿ ಎರಡು ತಿಂಗಳುಗಳೇ ಕಳೆದಿವೆ. ಮಾರ್ಚ್‌ನಿಂದ ಇದುವರೆಗೆ ನಗರದ 5.24 ಲಕ್ಷ ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ. 2,500 ಮಂದಿ ಈ ಅಲ್ಪಾವಧಿಯಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಕೋವಿಡ್ ನಿಯಂತ್ರಣಕ್ಕೆ ಜನರ ಓಡಾಟದ ಮೇಲೆ ನಿರ್ಬಂಧ ಹೇರುವ ಬಿಗಿ ನಿಯಮಗಳನ್ನು ಜಾರಿಗೆ ತಂದು 15 ದಿನಗಳೇ ಕಳೆದಿವೆ. ಆದರೆ, ಈಗಲೂ ನಿತ್ಯ 20 ಸಾವಿರಕ್ಕೂ ಅಧಿಕ ಪ್ರಕರಣಗಳು ಪತ್ತೆಯಾಗುತ್ತಿವೆ. ಕೋವಿಡ್‌ಗೆ ನಗರದಲ್ಲಿ ಇದುವರೆಗೆ ಒಟ್ಟು 7,777 ಮಂದಿ (ಮೇ 8ರವರೆಗೆ) ಮಂದಿ ಕೊನೆಯುಸಿರೆಳೆದಿದ್ದಾರೆ. ಇವುಗಳಲ್ಲಿ 2493 ಸಾವುಗಳು ಸಂಭವಿಸಿದ್ದು 2021ರ ಮಾರ್ಚ್ ನಂತರದಲ್ಲಿ. ಮೇ ತಿಂಗಳಲ್ಲಿ ಎಂಟೇ ದಿನಗಳಲ್ಲಿ 1,239 ಮಂದಿ ಮೃತಪಟ್ಟಿದ್ದಾರೆ.

ನಿತ್ಯವೂ ಸಂಭವಿಸುತ್ತಿರುವ 150ಕ್ಕೂ ಅಧಿಕ ಸಾವುಗಳಿಗೆ (ಕಳೆದ ಮೂರು ದಿನಗಳಲ್ಲಿ ಸಾವಿನ ಪ್ರಮಾಣದ ಸರಾಸರಿ 250 ದಾಟಿದೆ) ಕೊರೊನಾ ಹೇಗೆ ಕಾರಣವೋ, ಐಸಿಯುವಿನಲ್ಲಿ ಚಿಕಿತ್ಸೆ ಪಡೆಯಲು ಹಾಸಿಗೆಗಳು ಲಭ್ಯವಾಗದಿರುವುದೂ ಅಷ್ಟೇ ಕಾರಣ. ಐಸಿಯು ಹಾಸಿಗೆಗಳು ಸಾಕಷ್ಟು ಪ್ರಮಾಣದಲ್ಲಿ ಸಿದ್ಧವಿರುತ್ತಿದ್ದರೆ ಸಾವಿನ ಸರಮಾಲೆಯನ್ನು ಕಡಿಮೆಮಾಡಬಹುದಿತ್ತು ಎಂಬುದು ನಿರ್ವಿವಾದ.

ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ 50 ಹಾಸಿಗೆ ಸಾಮರ್ಥ್ಯದ ಮಾಡ್ಯುಲಾರ್ ಐಸಿಯುವನ್ನು ಹತ್ತೇ ದಿನಗಳಲ್ಲಿ ಸ್ಥಾಪಿಸಲಾಗಿತ್ತು. ಅದರಿಂದ ನೂರಾರು ರೋಗಿಗಳಿಗೆ ಅನುಕೂಲವಾಗಿದೆ. ಅಂತಹ ಪ್ರಯತ್ನ ಇನ್ನಷ್ಟು ಆಸ್ಪತ್ರೆಗಳಲ್ಲಿ ಕೈಗೊಳ್ಳುವ ಅವಕಾಶವಿತ್ತು. ಪರಿಸ್ಥಿತಿ ಕೈ ಮೀರುವ ಹಂತ ತಲುಪಿದ್ದರೂ ಸರ್ಕಾರ ಐಸಿಯು ಮೂಲ ಸೌಕರ್ಯ ಹೆಚ್ಚಳಕ್ಕೆ ಗಂಭೀರ ಪ್ರಯತ್ನ ನಡೆಸಿಯೇ ಇಲ್ಲ. ಈಗಲೂ ಸರ್ಕಾರ ಖಾಸಗಿ ಆಸ್ಪತ್ರೆಗಳ ಮೇಲೆ ಒತ್ತಡ ಹೇರಿ ಅವುಗಳ ಐಸಿಯು ಹಾಸಿಗೆಗಳನ್ನು ಪಡೆಯಲು ಪ್ರಯತ್ನಿಸುವುದರಲ್ಲೇ ತಲ್ಲೀನವಾಗಿದೆ.



ಐಸಿಯು ಹಾಸಿಗೆ ಲಭ್ಯತೆ (ಸರ್ಕಾರಿ ಕೋಟಾ)

ಆಸ್ಪತ್ರೆಗಳು	ಐಸಿಯು ಹಾಸಿಗೆಗಳು	ವೆಂಟಿಲೇಟರ್ ಹಾಸಿಗೆಗಳು
ಸರ್ಕಾರಿ ಆಸ್ಪತ್ರೆ	70	79
ಸರ್ಕಾರಿ ವೈದ್ಯಕೀಯ ಕಾಲೇಜುಗಳು	23	22
ಖಾಸಗಿ ಆಸ್ಪತ್ರೆಗಳು	206	75
ಖಾಸಗಿ ವೈದ್ಯಕೀಯ ಕಾಲೇಜುಗಳು	150	165
(ಬಹುತೇಕ ಎಲ್ಲ ಹಾಸಿಗೆಗಳೂ ಭರ್ತಿ)		

ತೀವ್ರ ನಿಗಾ ಘಟಕ ಏನೇನಿರಬೇಕು?



ಐಸಿಯು ಸ್ಥಾಪನೆಗೆ ನಿರಂತರ ಆಮ್ಲಜನಕ ಪೂರೈಕೆ, ಸ್ರಾವ/ ದ್ರವಗಳನ್ನು ಹೀರುವಿಕೆ ಹಾಗೂ ಸಾಂದ್ರ ಅನಿಲ ಪೂರೈಕೆಗೆ ಕೇಂದ್ರೀಕೃತ ವ್ಯವಸ್ಥೆಗಳು ಬಲು ಮುಖ್ಯ. ರೋಗಿಗಳಿಗೆ ಯಾವುದೇ ಕ್ಷಣದಲ್ಲೂ ಆಮ್ಲಜನಕ ಪೂರೈಕೆ ಸ್ಥಗಿತಗೊಳ್ಳಬಾರದು ಎಂದಾದರೆ ದ್ರವೀಕೃತ ಅನಿಲ ರೂಪದ ಆಮ್ಲಜನಕ ಪೂರೈಕೆಗೆ 1 ಸಾವಿರ ಲೀಟರ್ ಸಾಮರ್ಥ್ಯದ ಘಟಕವನ್ನು ಹೊಂದಬೇಕಾಗುತ್ತದೆ ಅಥವಾ 250 ಲೀ ಸಾಮರ್ಥ್ಯದ ಎರಡು ಡ್ಯೂರಾ ಸಿಲಿಂಡರ್‌ಗಳಿರಬೇಕು. ಒಂದು ಸಿಲಿಂಡರ್ ಖಾಲಿಯಾದಾಗ ಇನ್ನೊಂದನ್ನು ಬಳಸಬಹುದು. 40 ಹಾಸಿಗೆ (20 ವೆಂಟಿಲೇಟರ್) ಸಾಮರ್ಥ್ಯದ ಐಸಿಯು ನಡೆಸಲು ಇವಿಷ್ಟು ಬೇಕೇ ಬೇಕು.

ಮೇಲಕ್ಕೆ, ಕೆಳಗೆ, ಎರಡೂ ಪಾರ್ಶ್ವಗಳಿಗೆ ಹೊಂದಿಸುವುದು ಹಾಗೂ ಕತ್ತಿನ ಭಾಗವನ್ನು ಎತ್ತರಿಸುವುದು ಸೇರಿ ಐದು ಕಡೆ ಚಲಿಸಬಲ್ಲ ಹಾಸಿಗೆ ಐಸಿಯುವಿನಲ್ಲಿ ಇರಬೇಕು. ತುರ್ತು ನಿರ್ವಹಣೆ ವ್ಯವಸ್ಥೆಗಳು ಸಕ್ರಿಯವಾಗಿರಬೇಕು. ಐಸಿಯುನಲ್ಲಿ 10 ಹಾಸಿಗೆಗಳಿದ್ದರೆ ಕನಿಷ್ಠ ಮೂರರಿಂದ ಗರಿಷ್ಠ ಐದು ಹಾಸಿಗೆಗಳಿಗೆ ವೆಂಟಿಲೇಟರ್ ವ್ಯವಸ್ಥೆ ಇರಬೇಕು. ಪ್ರತಿ ಎರಡು ಹಾಸಿಗೆಗೆ ಒಬ್ಬರು ಶುಶ್ರೂಷಕರು (ಮೂರು



ಪಾಳಿಗಳಿಗೆ ಪ್ರತ್ಯೇಕ) ಒಬ್ಬರು ಮುಖ್ಯ ಶುಶ್ರೂಷಕರು ಇರಬೇಕು.

ಇನ್ವೇಸಿವ್ ವೆಂಟಿಲೇಟರ್ (ಗಂಟಲ ಒಳಗೆ ಕೊಳವೆ ಹಾಕಿ ಆಮ್ಲಜನಕ ಪೂರೈಕೆ) ಇಲ್ಲದೇ ಹೋದರೆ ನಾನ್ ಇನ್‌ವೇಸಿವ್ ವೆಂಟಿಲೇಟರ್ (ಬೈ–ಪ್ಯಾಪ್) ಆದರೂ ಇರಲೇಬೇಕು. ಶೌಚಾಲಯ ಇರಬೇಕು, ಸಂಗ್ರಹಾಗಾರ ಚೆನ್ನಾಗಿರಬೇಕು. ಶುಚಿತ್ವ ನಿರ್ವಹಣೆಗೆ ಮಾದರಿ ಕಾರ್ಯ ವಿಧಾನ ಪಾಲಿಸುವ ನುರಿತ ಸ್ವಚ್ಛತಾ ಕಾರ್ಮಿಕರು ಬೇಕು. ಸ್ವಚ್ಛತೆ ಕಾಪಾಡುವಿಕೆ ಸರಿಯಾಗಿ ಇಲ್ಲದಿದ್ದರೆ ಸೋಂಕು ಹರಡುವ ಸಾಧ್ಯತೆ ಅಧಿಕ.

ಐಸಿಯುವಿನಲ್ಲಿ 10 ರೋಗಿಗಳಿಗೆ ಒಬ್ಬರು ತಜ್ಞ ವೈದ್ಯರು ಬೇಕು. ಪ್ರತಿ ಪಾಳಿಗೊಬ್ಬರು ಶ್ವಾಸಕೋಶ ಚಿಕಿತ್ಸಕರು, ಮುಖ್ಯ ವೈದ್ಯರು ಇರಬೇಕು. ಕನಿಷ್ಠ ಒಂದು ಡಯಾಲಿಸಿಸ್ ಯಂತ್ರ ಹಾಗೂ ಅದರ ನಿರ್ವಹಣೆಗೆ ತಂತ್ರಜ್ಞ ಇರಬೇಕು. ಕೆಲವು ರೋಗಿಗಳು ರಕ್ತ ವಾಂತಿ ಮಾಡುತ್ತಾರೆ ಅಥವಾ ರಕ್ತದ ಭೇದಿ ಮಾಡಿಕೊಳ್ಳುತ್ತಾರೆ. ಇಂತಹವರ ಚಿಕಿತ್ಸೆಗೆ ಉದರ ತಜ್ಞರು ಹಾಗೂ ಅಗತ್ಯ ಸಲಕರಣೆಗಳು ಸನ್ನದ್ಧವಾಗಿರಬೇಕು. ಉತ್ತಮ ಸೌಕರ್ಯದ ಐಸಿಯುಗಳಲ್ಲಿ ಕಲನೋಸ್ಕೋಪಿ ಹಾಗೂ ಎಂಡೋಸ್ಕೋಪಿ ವ್ಯವಸ್ಥೆಗಳೂ ಇರುತ್ತವೆ. ಇಷ್ಟಿದ್ದರೆ ಮಾತ್ರ ಅದು ಪೂರ್ಣ ಪ್ರಮಾಣದ ಐಸಿಯು.

ಆದರೆ ಕೋವಿಡ್‌ನಂತಹ ತುರ್ತು ಸಂದರ್ಭಕ್ಕಾಗಿ ನಿರ್ಮಿಸುವ ಐಸಿಯುವಿನಲ್ಲಿ ಡಯಾಲಿಸಿಸ್ ತಂತ್ರಜ್ಞರನ್ನು ಹಾಗೂ ಉದರ ತಜ್ಞರನ್ನು ಕೈಬಿಡಬಹುದು. ಕರ್ತವ್ಯ ನಿರತ ವೈದ್ಯರೇ ಶ್ವಾಶಕೋಶ ಚಿಕಿತ್ಸಕರ ಕಾರ್ಯ ನಿರ್ವಹಿಸಬಹುದು. ಉಳಿದ ಎಲ್ಲ ವ್ಯವಸ್ಥೆಗಳಿರುವುದು ಅತ್ಯಗತ್ಯ.

ಕಡಿಮೆ ಎಂದರೂ ಒಂದು ಹಾಸಿಗೆಗೆ ₹ 25 ಲಕ್ಷ ಖರ್ಚಾಗುತ್ತದೆ. ಪ್ರತಿಷ್ಠಿತ ಆಸ್ಪತ್ರೆಗಳು ಒಂದು ಐಸಿಯು ಹಾಸಿಗೆಗೆ ₹ 1.5ಕೋಟಿಯಿಂದ ₹ 2 ಕೋಟಿವರೆಗೂ ಖರ್ಚು ಮಾಡುತ್ತವೆ.

ಐಸಿಯು ಹೊಸದಾಗಿ ಕೇಂದ್ರೀಕೃತ ವ್ಯವಸ್ಥೆಯ ಕೊಳವೆ ಮಾರ್ಗ ಅಳವಡಿಸಲು ಒಂದುವಾರ ಬೇಕು. ಎಲ್ಲ ವ್ಯವಸ್ಥೆಗಳಿದ್ದರೆ 10 ಹಾಸಿಗೆಯ ಐಸಿಯುವನ್ನು ಹೊಸದಾಗಿ ಸಜ್ಜುಗೊಳಿಸಲು ಕನಿಷ್ಠ 1 ತಿಂಗಳು ಬೇಕು. ರೋಗಿಗಳಿಲ್ಲದ ಸ್ಥಿತಿಯಲ್ಲಿ ಯಂತ್ರೋಪಕರಣಗಳನ್ನು ಮೂರು ದಿನ ಚಲಾಯಿಸಿ (ನಾಕ್‌ಡೌನ್ ರನ್ನಿಂಗ್) ಪರಿಶೀಲಿಸಬೇಕು.

ಐಸಿಯು ಸ್ಥಾಪಿಸಿದರೆ ಸಾಲದು; ಅವುಗಳ ನಿರ್ವಹಣೆಯೂ ಬಲು ಮುಖ್ಯ. ತಜ್ಞ ವೈದ್ಯರು, ಶುಶ್ರೂಷಕಿಯರು ಇಲ್ಲದೇ ಹೋದರೆ ಅವು ಪ್ರಯೋಜನಕ್ಕೆ ಬರುವುದಿಲ್ಲ. ಐಸಿಯು ತಜ್ಞರು ತಿಂಗಳಿಗೆ ₹ 3.5 ಲಕ್ಷದಿಂದ ₹ 4 ಲಕ್ಷ ಕಡಿಮೆ ಸಂಬಳಕ್ಕೆ ಬರುವುದಿಲ್ಲ. ಐಸಿಯು ಶುಶ್ರೂಷಕಿಯರಿಗೆ ₹ 40ಸಾವಿರ ಸಂಬಳ ಇದೆ.

ಡಾ.ಜಗದೀಶ ಹಿರೇಮಠ,
ಐಸಿಯು ತಜ್ಞ, (ಜಿಗಣಿಯ ಎಸಿಇ ಸುಹಾಸ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ)

'3ಂಗಳಲ್ಲೇ ಹಾಸಿಗೆಗಳ ಸಂಖ್ಯೆ 1 ಸಾವಿರದಷ್ಟು ಹೆಚ್ಚಿಸಬಹುದು'



ಸರ್ಕಾರ ಮನಸ್ಸು ಮಾಡಿದರೆ, ಲಭ್ಯ ಇರುವ ಹಾಸಿಗೆಗಳನ್ನೇ ಐಸಿಯು ಹಾಸಿಗೆಗಳನ್ನಾಗಿ ಪರಿವರ್ತಿಸುವ ಮೂಲಕ ಒಂದೇ ವಾರದಲ್ಲಿ ಐಸಿಯು ಘಟಕಗಳಲ್ಲಿ ಲಭ್ಯ ಇರುವ ಹಾಸಿಗೆಗಳ ಸಾಮರ್ಥ್ಯವನ್ನು ಒಂದು ಸಾವಿರ ಹಾಸಿಗೆಗಳವರೆಗೆ ಹೆಚ್ಚಿಸಬಹುದು. ಆದರೆ, ಇವುಗಳಿಗೆ ಪೂರಕವಾಗಿ ಮಾನವ ಸಂಪನ್ಮೂಲ ಹೊಂದಿಸುವುದು ಕಷ್ಟ.

ಡಾ.ಎಚ್.ಎಂ.ಪ್ರಸನ್ನ, ಬೆಂಗಳೂರು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳ ಒಕ್ಕೂಟದ (ಫಾನಾ) ಅಧ್ಯಕ್ಷ

'ಐಸಿಯು ನಿರ್ವಹಣೆ ಪಾಠವಾಗಲಿ'

ತುರ್ತು ಸಂದರ್ಭದಲ್ಲಿ ಐಸಿಯುಗಳನ್ನು ಸ್ಥಾಪಿಸಿ ನಿರ್ವಹಿಸುವುದು ಹೇಗೆ ಎಂಬುದನ್ನು ವೈದ್ಯಕೀಯ ಪಠ್ಯಕ್ರಮದಲ್ಲೇ ಅಳವಡಿಸಬೇಕು. ಸದ್ಯಕ್ಕೆ ಸರ್ಕಾರ ಐಸಿಯುಗಳನ್ನು ಒದಗಿಸಿದರೂ ಅದನ್ನು ನಿರ್ವಹಿಸಲು ಅಗತ್ಯವಿರುವಷ್ಟು ನುರಿತ ಮಾನವ ಸಂಪನ್ಮೂಲ ಲಭ್ಯ ಇಲ್ಲ. ಹಾಗಾಗಿ ಇರುವ ಐಸಿಯು ತಜ್ಞರು, ಐಸಿಯು ಶುಶ್ರೂಷಕರು ಇತರರಿಗೆ ಅಲ್ಪಾವಧಿ ತರಬೇತಿ ನೀಡಿ ತುರ್ತು ನಿರ್ವಹಣಾ ತಂಡಗಳನ್ನು ಸಜ್ಜುಗೊಳಿಬೇಕು. ಕೋವಿಡ್ ಮೂರನೇ ಅಲೆಯನ್ನು ನಿರ್ವಹಿಸಬೇಕಾದರೆ ಇಂತಹ ಸಿದ್ಧತೆ ಅನಿವಾರ್ಯ.



ಡಾ.ಗುಣಶೇಖರ ವುಪ್ಪಲವತಿ,
ತಜ್ಞ ವೈದ್ಯ, (ಇನ್‌ವಿವೊ ಆಸ್ಪತ್ರೆ, ಜೆ.ಪಿ.ನಗರ, ಬೆಂಗಳೂರು)

'ಪ್ರತಿ ವಲಯದಲ್ಲಿ ಆಮ್ಲಜನಕ ವ್ಯವಸ್ಥೆಯ 480 ಹಾಸಿಗೆ'



ಬಿಬಿಎಂಪಿಯ ಪ್ರತಿ ವಲಯದಲ್ಲೂ ಆಮ್ಲಜನಕ ಪೂರೈಕೆ ವ್ಯವಸ್ಥೆಯ ತಲಾ 300 ಹಾಸಿಗೆಗಳು, ತೀವ್ರ ಅವಲಂಬನೆ ಘಟಕಗಳ (ಎಚ್‌ಡಿಯು) ತಲಾ 150 ಹಾಸಿಗೆಗಳು, ತಲಾ 15 ಸಾಮಾನ್ಯ ಐಸಿಯು ಹಾಸಿಗೆಗಳು ಹಾಗೂ ವೆಂಟಿಲೇಟರ್ ವ್ಯವಸ್ಥೆಯ ತಲಾ 15 ಹಾಸಿಗೆಗಳನ್ನು ನಿರ್ಮಿಸಲು ಸಿದ್ಧತೆ ನಡೆಸಿದ್ದೇವೆ. ಈ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಇವುಗಳಿಗೆ ನಿರಂತರ ಆಮ್ಲಜನಕ ಪೂರೈಕೆಗೆ ವ್ಯವಸ್ಥೆ ಕಲ್ಪಿಸುವುದಕ್ಕೆ ಹಾಗೂ ಮಾನವ ಸಂಪನ್ಮೂಲ ನಿಯೋಜಿಸುವುದಕ್ಕೆ ಸಿದ್ಧತೆ ನಡೆದಿದೆ.

ಪಿ.ಎಸ್.ಹರ್ಷ, ಐಸಿಯು ಸ್ಥಾಪನೆಯ ನೋಡಲ್ ಅಧಿಕಾರಿ

11,693 ಸರ್ಕಾರಿ ಕೋಟಾ ಅಡಿ ಕೋವಿಡ್ ಚಿಕಿತ್ಸೆಗೆ ಹಂಚಿಕೆ ಮಾಡಿರುವ ಒಟ್ಟು ಹಾಸಿಗೆಗಳು

9,514 ಸರ್ಕಾರಿ ಕೋಟಾ ಅಡಿ ಲಭ್ಯ ಇರುವ ಹಾಸಿಗೆಗಳು ಭರ್ತಿ ಆಗಿರುವುದು

1,429 ಚಿಕಿತ್ಸೆಗೆ ಲಭ್ಯ ಇರುವುದು

5,664 ಕೋವಿಡ್‌ಗೆ ಖಾಸಗಿಯಾಗಿ ಚಿಕಿತ್ಸೆ ಪಡೆಯುವವರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಹಾಸಿಗೆಗಳು

90% ಹಾಸಿಗೆಗಳು ಭರ್ತಿ ಅಗಿವೆ

ರಸ್ತೆಗಿಳಿದ ಸವಾರರಿಗೆ ಲಾಠಿ ರುಚಿ: 2,227 ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ಸಂಚಾರಕ್ಕೆ ನಿರ್ಬಂಧವಿದ್ದರೂ ಅನಗತ್ಯವಾಗಿ ಭಾನುವಾರ ರಸ್ತೆಗಿಳಿದಿದ್ದ 2,227 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಸೋಮವಾರದಿಂದ ಲಾಕ್‌ಡೌನ್ ಜಾರಿಯಾಗುವ ಭೀತಿಯಿಂದ ಜನ ಅಗತ್ಯ ವಸ್ತುಗಳ ಖರೀದಿ ಹಾಗೂ ಊರುಗಳನ್ನು ತಲುಪಲು ವಾಹನಗಳಲ್ಲಿ ಬಂದಿದ್ದರು. ಆದರೆ, ಬೆಳಿಗ್ಗೆ 10 ಗಂಟೆ ನಂತರದ ನಿರ್ಬಂಧಿತ ಅವಧಿಯಲ್ಲೂ ಸಂಚರಿಸುತ್ತಿದ್ದ 1,984 ದ್ವಿಚಕ್ರ ವಾಹನಗಳು, 99 ತ್ರಿಚಕ್ರ ವಾಹನ ಹಾಗೂ 144 ನಾಲ್ಕು ಚಕ್ರದ ವಾಹನಗಳನ್ನು ಜಪ್ತಿ ಮಾಡಿದ್ದು, ಎನ್‌ಡಿಎಂಎ ಕಾಯ್ದೆಯಡಿ 23 ಪ್ರಕರಣಗಳನ್ನು ದಾಖಲಿಸಿರುವುದಾಗಿ ಪೊಲೀಸ್ ಇಲಾಖೆ ತಿಳಿಸಿದೆ.



ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ಭಾನುವಾರ ಅನಗತ್ಯವಾಗಿ ಸಂಚರಿಸುತ್ತಿದ್ದ ದ್ವಿಚಕ್ರ ವಾಹನ ಸವಾರನಿಗೆ ಪೊಲೀಸ್ ಅಧಿಕಾರಿ ಲಾಠಿ ಬೀಸಿದರು –ಪ್ರಜಾವಾಣಿ ಚಿತ್ರ

'ಪೊಲೀಸರ ದೌರ್ಜನ್ಯ ತಡೆಯಿರಿ'

ಬೆಂಗಳೂರು: 'ತುರ್ತು ಕಾರ್ಯಗಳ ನಿಮಿತ್ತ ಮನೆಯಿಂದ ಹೊರಗಡೆ ಬಂದವರ ಮೇಲೆ ಕೂಡ ಪೊಲೀಸರು ದೌರ್ಜನ್ಯ ನಡೆಸುತ್ತಿದ್ದಾರೆ. ಇದನ್ನು ತಡೆಯಲು ಗೃಹ ಸಚಿವರು ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಕರ್ನಾಟಕ ವಿಕಾಸ ರಂಗ ಆಗ್ರಹಿಸಿದೆ.

'ಕೋವಿಡ್ ನಿಯಂತ್ರಣಕ್ಕೆ ಲಾಕ್‌ಡೌನ್ ಬಿಗಿಗೊಳಿಸಿರುವುದು ಸ್ವಾಗತಾರ್ಹ. ಆದರೆ, ತುರ್ತು ಕಾರ್ಯಕ್ಕಾಗಿ ಹೊರಗಡೆ ಬಂದವರ ಮೇಲೆ ಕೂಡ ಪೊಲೀಸರು ಮಾರಣಾಂತಿಕ ಹಲ್ಲೆ ನಡೆಸುತ್ತಿದ್ದಾರೆ. ಅನಗತ್ಯವಾಗಿ ಓಡಾಟ ನಡೆಸುತ್ತಿರುವವರ ಮೇಲೆ ಪ್ರಕರಣ ದಾಖಲಿಸಿ, ಕ್ರಮಕೈಗೊಳ್ಳಲಿ. ಅಮಾಯಕರ ಮೇಲೆ ದಾಳಿ ನಡೆಸುವುದು ಸರಿಯಲ್ಲ' ಎಂದು ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಸಿಕೆ: ಸಂದೇಶ ಕಡ್ಡಾಯ

ಬೆಂಗಳೂರು: ರಾಜ್ಯದ ನಿಗದಿತ ಕೇಂದ್ರಗಳಲ್ಲಿ ಸೋಮವಾರದಿಂದ (ಮೇ 10) 18 ರಿಂದ 44 ವಯೋಮಾನದವರಿಗೆ ಕೋವಿಡ್ ಲಸಿಕೆ ನೀಡಲಾಗುತ್ತಿದ್ದು, ಈಗಾಗಲೇ ನೋಂದಣಿ ಮಾಡಿಕೊಂಡವರು ತಮಗೆ ಬಂದಿರುವ ಮೊಬೈಲ್ ಸಂದೇಶವನ್ನು (ಎಸ್‌ಎಂಎಸ್) ಪೊಲೀಸರಿಗೆ ತೋರಿಸಿ ಲಸಿಕೆ ಪಡೆಯಲು ತೆರಳಬಹುದು ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಲಸಿಕೆ ಪಡೆಯಲು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡವರ (18 ರಿಂದ 44) ಮೊಬೈಲ್‌ಗೆ ಲಸಿಕೆ ಪಡೆಯಬೇಕಾದ ದಿನ ಮತ್ತು ಸಮಯ ಇರುವ ಸಂದೇಶ (ಎಸ್‌ಎಂಎಸ್) ಬಂದಿರುತ್ತದೆ. ಇದನ್ನು ಪರಿಶೀಲಿಸಿದ ನಂತರವಷ್ಟೇ ಪೊಲೀಸರು ಲಸಿಕಾ ಕೇಂದ್ರಗಳಿಗೆ ತೆರಳಲು ಅನುಮತಿ ನೀಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಲಾಕ್‌ಡೌನ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ. ಅನಗತ್ಯವಾಗಿ ಓಡಾಡದೆ, ಮನೆಯಲ್ಲೇ ಸುರಕ್ಷಿತವಾಗಿರಿ.
ಕಮಲ್ ಪಂತ್, ನಗರ ಪೊಲೀಸ್ ಕಮಿಷನರ್

ಸಂಕ್ಷಿಪ್ತ ಸುದ್ದಿ

ಹಾಸಿಗೆ ಬ್ಲಾಕ್ ದಂಧೆ: 3 ಆಸ್ಪತ್ರೆಗಳಲ್ಲಿ ಅಕ್ರಮ ಬುಕಿಂಗ್ ಪತ್ತೆ

ಬೆಂಗಳೂರು: ಹಾಸಿಗೆ ಬ್ಲಾಕಿಂಗ್ ದಂಧೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಸಿಬಿ ಅಧಿಕಾರಿಗಳು, ಅಕ್ರಮವಾಗಿ ಹಾಸಿಗೆಗಳನ್ನು ಬುಕ್ ಮಾಡುತ್ತಿದ್ದ ಮೂರು ಆಸ್ಪತ್ರೆಗಳನ್ನು ಪತ್ತೆ ಹಚ್ಚಿದ್ದಾರೆ.

'ಸಿಸಿಬಿ ಅಧಿಕಾರಿಗಳು ಶೋಧಿಸಿರುವ ಮೂರೂ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿ ಹಾಗೂ 'ಆರೋಗ್ಯ ಮಿತ್ರ' ಸಿಬ್ಬಂದಿಯನ್ನು ವಿಚಾರಣೆ ನಡೆಸಲಾಗಿದೆ. ಹೆಚ್ಚಿನ ಮಾಹಿತಿ ಕಲೆ ಹಾಕಲು ತನಿಖೆ ಮುಂದುವರಿದಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ದಂಧೆಯಲ್ಲಿ ಭಾಗಿಯಾಗಿದ್ದ ಆರೋಪದಡಿ ವೈದ್ಯರು, ತಾಂತ್ರಿಕ ಸಿಬ್ಬಂದಿ ಸೇರಿದಂತೆ ನಾಲ್ವರನ್ನು ಈಗಾಗಲೇ ಬಂಧಿಸಿ, ಹಲವರನ್ನು ವಿಚಾರಣೆ ನಡೆಸಿದೆ. ತನಿಖೆ ಚುರುಕುಗೊಳಿಸಿದ್ದ ಸಿಸಿಬಿ ಅಧಿಕಾರಿಗಳು ಈ ಪ್ರಕರಣಕ್ಕೆ ಸಂಬಂಧಿಸಿ ನಗರದ 16 ಆಸ್ಪತ್ರೆಗಳಲ್ಲಿ ಶನಿವಾರ ಶೋಧ ನಡೆಸಿದ್ದರು.

4 ಖಾಸಗಿ ಬಸ್ ಜಪ್ತಿ

ಬೆಂಗಳೂರು: ಕೋವಿಡ್ ನಿಯಮಾವಳಿ ಉಲ್ಲಂಘಿಸಿ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ನಾಲ್ಕು ಖಾಸಗಿ ಬಸ್‌ಗಳನ್ನು ಸಾರಿಗೆ ಇಲಾಖೆ ಅಧಿಕಾರಿಗಳು ಭಾನುವಾರ ಜಪ್ತಿ ಮಾಡಿದ್ದಾರೆ.

'ಲಾಕ್‌ಡೌನ್ ವೇಳೆಯಲ್ಲಿ ಯಾವುದೇ ಬಸ್‌ಗಳು ಕಾರ್ಯಾಚರಣೆ ನಡೆಸುವಂತಿಲ್ಲ. ಆದರೆ, ಕೆಲ ಖಾಸಗಿ ಬಸ್‌ಗಳು ಅಕ್ರಮವಾಗಿ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದವು'.

'ಸಾರಿಗೆ ಇಲಾಖೆ ಹೆಚ್ಚುವರಿ ಆಯುಕ್ತ ನರೇಂದ್ರ ಹೋಳ್ಕರ್ ನೇತೃತ್ವದ ತಂಡಗಳು ಬಾಗೇಪಲ್ಲಿ, ಅತ್ತಿಬೆಲೆ ಹಾಗೂ ಬಳ್ಳಾರಿ ರಸ್ತೆಯ ಎಸ್ಟೀಮ್ ಮಾಲ್ ಬಳಿ ಭಾನುವಾರ ದಾಳಿ ನಡೆಸಿದಾಗ ಒಟ್ಟು ನಾಲ್ಕು ಖಾಸಗಿ ಬಸ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

'ಮೆಟ್ರೊ ಕಾಮಗಾರಿ ಸ್ಥಗಿತ ಬೇಡ'

ಬೆಂಗಳೂರು: 'ನಮ್ಮ ಮೆಟ್ರೊ'ದ ಎರಡನೇ ಹಂತದಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ರಾಕೇಶ್ ಸಿಂಗ್ ಭಾನುವಾರ ಪರಿಶೀಲಿಸಿದರು.




ಸುಮಾರು 18.82 ಕಿ.ಮೀ. ದೂರದ ಆರ್.ವಿ. ರಸ್ತೆ- ಬೊಮ್ಮಸಂದ್ರ ನಡುವಿನ ಮೆಟ್ರೊ ಕಾಮಗಾರಿಗಳು, ಜಯದೇವ ಆಸ್ಪತ್ರೆ ಬಳಿಯ ಉತ್ತರ-ದಕ್ಷಿಣ ಪ್ರಯಾಣಿಕರ ವಿನಿಮಯ ಜಂಕ್ಷನ್ ಮತ್ತು ಕಾಸ್ಟಿಂಗ್ ಯಾರ್ಡ್‌ಗಳ ಪರಿಶೀಲನೆಯನ್ನು ಅವರು ನಡೆಸಿದರು.

'ಲಾಕ್‌ಡೌನ್ ನಡುವೆಯೂ 'ನಮ್ಮ ಮೆಟ್ರೋ' ಎರಡನೇ ಹಂತದ ಕಾಮಗಾರಿಗಳನ್ನು ಎಲ್ಲ ಮುನ್ನೆಚ್ಚರಿಕೆ ತೆಗೆದುಕೊಂಡು ನಡೆಸಲಾಗುತ್ತಿದೆ. ಈ ಕಾಮಗಾರಿ ಯಾವುದೇ ಅಡ್ಡಿಯಿಲ್ಲದೆ ಮುಂದುವರಿಸಬೇಕು' ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭ ನಿಗಮದ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಒಳನೋಟ
ಕೋವಿಡ್ ಕಾಲದ ದುರಂತ

ಬೆಂಗಳೂರು: 'ಉಸಿರನೇ ಕಸಿದ ಅವ್ಯವಸ್ಥೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಮೇ 9) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.


'ಸಂಕಟ ಬಂದಾಗ ವೆಂಕಟರಮಣ'



ಚಾಮರಾಜನಗರದಲ್ಲಿ ನಡೆದದ್ದು ಒಂದು ದೊಡ್ಡ ದುರಂತ. ಆಮ್ಲಜನಕದ ಕೊರತೆ ಇರುವುದನ್ನು ಮೊದಲೇ ತಿಳಿದಿದ್ದ ಜಿಲ್ಲಾಡಳಿತ ಕಣ್ಣುಮುಚ್ಚಿ ಕುಳಿತಿತ್ತೇ? ಮೊದಲೇ ಏಕೆ ಆಮ್ಲಜನಕ ಪೂರೈಸಿಕೊಳ್ಳಲಿಲ್ಲ? ಈ ಮುನ್ನೆಚ್ಚರಿಕೆ ತೆಗೆದುಕೊಂಡಿದ್ದರೆ, ಮಾರಣಹೋಮ ನಡೆಯುತ್ತಿರಲಿಲ್ಲ. ಜಿಲ್ಲಾಡಳಿತದ ಸ್ಥಿತಿ ಸಂಕಟ ಬಂದಾಗ ವೆಂಕಟರಮಣ ಎಂಬಂತಾಗಿದೆ.

ಅಶೋಕ ನಾಯಕ, ಬಳ್ಳಾರಿ

ಮೃತರ ಕುಟುಂಬಕ್ಕೆ ಪರಿಹಾರ ಸಿಗಲಿ



'ಒಳನೋಟ' ಲೇಖನ ಓದಿ ಕಣ್ಣೀರಾದೆ. ಮಾಜಿ ಮಂತ್ರಿಗಳಾದ ದಿವಂಗತ ವಿ.ಎಸ್.ಆಚಾರ್ಯ ಅವರು, ಭ್ರೂಣ ಜನ್ಮ ತಾಳಿ, ಜೀವನ ಸವೆಸಿ, ಸಾವನಪ್ಪಿದ ನಂತರ ಅಂತ್ಯಕ್ರಿಯೆಯವರೆಗೂ ಸರ್ಕಾರದ ಜವಾಬ್ದಾರಿ ಇರುತ್ತದೆ ಎನ್ನುತ್ತಿದ್ದರು. ಆದರೆ, ಈಗ ಚಾಮರಾಜನಗರದಲ್ಲಿ ಹಲವಾರು ಜೀವಗಳು ಬಲಿಯಾಗಿ, ಕೆಸರೆರಚಾಟ ಆರಂಭವಾಗಿದೆ. ತಪ್ಪೆಸಗಿದವರಿಗೆ ಶಿಕ್ಷೆ ಆಗುವುದೇ ಇಲ್ಲ. ಕೆಲ ದಿನಗಳ ನಂತರ ಈ ಘಟನೆ ಮರೆಯಾಗುತ್ತದೆ. ಅಗಲಿದ ಜೀವಗಳ ಕುಟುಂಬಕ್ಕೆ ಸರ್ಕಾರ ನೆರವು ನೀಡಲೇಬೇಕು.

ವೆಂಕಟೇಶ ಮುದಗಲ್, ಕಲಬುರ್ಗಿ


ಚಾಮರಾಜನಗರ ಇಂದಿಗೂ ನಿರ್ಲಕ್ಷ್ಯ



ಗಡಿ ಜಿಲ್ಲೆ ಚಾಮರಾಜನಗರದ ಅಭಿವೃದ್ಧಿ ವಿಚಾರದಲ್ಲಿ ಹಿಂದಿನಿಂದಲೂ ನಿರ್ಲಕ್ಷ್ಯ ರೂಢಿಗತ. ರಾಜಕೀಯ ಲಾಭಕ್ಕೆ ಮುಗ್ಧರು ಬಲಿಯಾಗಿದ್ದಾರೆ. ಕೋವಿಡ್ ಎರಡನೇ ಅಲೆ ಬಿಗಡಾಯಿಸಿದ ಸಂದರ್ಭದಲ್ಲಿ ಚಾಮರಾಜನಗರಕ್ಕೆ ವೈದ್ಯಕೀಯ ಸೌಲಭ್ಯಗಳನ್ನು ನೀಡುವಲ್ಲಿ ಸರ್ಕಾರ ವಿಫಲವಾಗಿದೆ. ಬೆಂಗಳೂರಿನಲ್ಲೇ ಬೀಡು ಬಿಟ್ಟಿರುವ ಜನಪ್ರತಿನಿಧಿಗಳು ಜಿಲ್ಲೆಗೆ ಬಂದು ಪರಿಸ್ಥಿತಿ ನಿಯಂತ್ರಿಸಬೇಕು.

ಬಂಡಳ್ಳಿ ಕುಮಾರ್, ಚಾಮರಾಜನಗರ


ಅಭಿವೃದ್ಧಿ ಕಾರ್ಯ ನಿಲ್ಲಿಸಿ



ಎಲ್ಲ ನಾಯಕರು ಸದ್ಯ ಅಭಿವೃದ್ಧಿ ಕಾರ್ಯಗಳನ್ನು ನಿಲ್ಲಿಸಿ, ಜನರ ಆರೋಗ್ಯ ಕಾಪಾಡಲು ಮುಂದಾಗಲಿ. ಜನರಿಂದ ಆಯ್ಕೆಯಾದವರು ಜನರ ಕಷ್ಟಗಳಿಗೆ ಬಾರದೆ ಇರುವುದು ದುರಂತ. ಸರ್ಕಾರಗಳ ಲೋಪದಿಂದ ಇಂದು ಜನ ಪರದಾಟಕ್ಕೆ ಸಿಲುಕಿದ್ದಾರೆ. ತುರ್ತು ಸಂದರ್ಭಗಳಲ್ಲಿ ರಾಜಕೀಯ ನಾಯಕರ ಪಾತ್ರ ಏನೆಂಬುದನ್ನು ಜನ ಈಗಲಾದರೂ ಅರ್ಥ ಮಾಡಿಕೊಂಡರೆ ಸಾಕು.

ಹರ್ಷವರ್ಧನ್, ಚಿತ್ರದುರ್ಗ

ಘಟನೆ ಮರುಕಳಿಸದಿರಲಿ



ಚಾಮರಾಜನಗರದಲ್ಲಿ ಆಮ್ಲಜನಕ ಸಿಗದೆ ಹೆಚ್ಚಿನ ಸಂಖ್ಯೆಯ ರೋಗಿಗಳು ಮೃತಪಟ್ಟ ಘಟನೆ ತಲೆ ತಗ್ಗಿಸುವಂತಿದೆ. ದಿನವೂ ಕೊರೊನಾ ಸೋಂಕಿತರು ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿಯಿದೆ. ಹಾಸಿಗೆ ಸಿಕ್ಕರೂ ಸರಿಯಾದ ಚಿಕಿತ್ಸೆ ಸಿಗುತ್ತಿಲ್ಲ. ರೋಗಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಲಸಿಕೆ ಕೂಡ ಸರಿಯಾಗಿ ಸಿಗುತ್ತಿಲ್ಲ. ಚಾಮರಾಜನಗರದ ಘಟನೆ ಮತ್ತೆಲ್ಲೂ ಮರುಕಳಿಸದಿರಲಿ.

ಅನಿಲ್ ಜಿರೋಬೆ, ಬೀದರ್


ಆಯ್ಕೆಯಲ್ಲಿ ಎಡವಿದ್ದೇವೆ



ಚುನಾವಣೆಯ ಸಂದರ್ಭದಲ್ಲಿ ಜನರ ಸೇವೆಗಾಗಿ ಹಾತೊರೆಯುವ ಪ್ರಾಮಾಣಿಕ ಹಾಗೂ ನಿಸ್ವಾರ್ಥ ವ್ಯಕ್ತಿಗಳ ಆಯ್ಕೆಯನ್ನು ನಿರ್ಲಕ್ಷಿಸಿದ ಜನರು, ಹಣ, ಧರ್ಮ, ಜಾತಿ ಹಾಗೂ ಇನ್ನಿತರ ಆಮಿಷಗಳಿಗೆ ಬಲಿಯಾದರು. ರಾಜಕಾರಣವನ್ನು ವ್ಯಾಪಾರ ಮಾಡಿಕೊಂಡಿರುವ ಬಂಡವಾಳಶಾಹಿಗಳನ್ನು ಆಯ್ಕೆ ಮಾಡಿ ವಿಧಾನಸೌಧಕ್ಕೆ ಕಳುಹಿಸಿದರು. ಬೇರೆ ರಾಜ್ಯಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ರಾಜ್ಯದಲ್ಲಿ ನಡೆಯುತ್ತಿರುವುದು ಸುಲಿಗೆ. ಈ ಪರಿಸ್ಥಿತಿಗೆ ಕಾರಣರಾದ ನಮ್ಮನ್ನೇ ನಾವು ದೂಷಿಸಿಕೊಳ್ಳಬೇಕು

ಅಶೋಕ್ ಕುಮಾರ್, ಬೆಂಗಳೂರು

ಪರದಾಟ ಕೇಳುವವರಾರು?




ಜೀವಂತವಾಗಿ ಆಸ್ಪತ್ರೆಗೆ ಹೋದವರು ಶವವಾಗಿ ಹೊರ ಬರುತ್ತಿದ್ದಾರೆ. ಮೃತದೇಹಗಳ ರಾಶಿ ಒಂದೆಡೆಯಾದರೆ, ಒಪ್ಪೊತ್ತಿಗೂ ಪರದಾಡುವ ಬಡವರ ಜೀವನ ಅತಂತ್ರ. ಸರ್ಕಾರದ ದಿಢೀರ್ ನಿರ್ಧಾರಗಳಿಂದ ನಿರುದ್ಯೋಗಿಗಳಾದವರು ಅಸಂಖ್ಯಾತ. ಉಳ್ಳವರು ಬದುಕಿ, ಇಲ್ಲದವರು ಸಾಯುತ್ತಿದ್ದಾರೆ. ಅಗತ್ಯ ವಸ್ತುಗಳ ದರ ಗಗನಕ್ಕೇರಿದೆ. ಇದಕ್ಕೆಲ್ಲ ಕಾರಣವಾದ ಸರ್ಕಾರದ ಕಣ್ಣು ಕುರುಡಾಗಿದೆ. ಇದಕ್ಕೆ ಕಾಲವೇ ಉತ್ತರ ನೀಡಲಿದೆ.

ದಿಲ್ಶಾದ್ ಬೇಗಂ, ವಿಜಯನಗರ

ಉಸಿರನೇ ಕಸಿದ ಅವ್ಯವಸ್ಥೆ...
ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3becEah


ಜನರಿಗೆ ದಿಕ್ಕುತೋಚುತ್ತಿಲ್ಲ



ಹಾಸಿಗೆ, ವೆಂಟಿಲೇಟರ್, ಐಸಿಯು ಹಾಗೂ ಚಿಕಿತ್ಸೆಗೆ ಜನರ ಪರದಾಟ ನಿಲ್ಲುತ್ತಿಲ್ಲ. ಚಿಕಿತ್ಸೆ ಪಡೆಯಲು ದುಬಾರಿ ವೆಚ್ಚ. ಇದೇ ವೇಳೆ ಅನೇಕರಿಗೆ ಹಣ ಮಾಡುವ ದುರ್ಬುದ್ಧಿ. ಇವೆಲ್ಲದರಿಂದ ಜನ ದಿಕ್ಕುತೋಚದಂತಾಗಿದ್ದಾರೆ. ಮುಂಬರುವ ಆಪತ್ತುಗಳಿಂದ ಪಾರಾಗಲು ತಜ್ಞರ ಸಲಹೆಗಳನ್ನು ಪಡೆಯುವುದು ಅನಿವಾರ್ಯ.

ಎ.ವಿ.ಶಾಮರಾವ್, ರಾಮಮೂರ್ತಿನಗರ, ಬೆಂಗಳೂರು

ಸರ್ಕಾರ ಎಡವಿದೆ



ಕೋವಿಡ್ ನಿಯಂತ್ರಿಸುವಲ್ಲಿ ಸರ್ಕಾರ ಎಡವಿದೆ. ಆಸ್ಪತ್ರೆಯಲ್ಲಿ ಅವ್ಯವಸ್ಥೆಗಳಿಂದ ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅಳಲು ತೋಡಿಕೊಂಡರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಇಲ್ಲ. ಸರ್ಕಾರ ಕೂಡಲೇ ಎಚ್ಚೆತ್ತುಕೊಳ್ಳಬೇಕು. ಜನರ ಆರೋಗ್ಯ ರಕ್ಷಣೆ ಮಾಡುವಂತೆ ವೈದ್ಯರಿಗೆ ಸರ್ಕಾರ ಸೂಚಿಸಬೇಕು. ನಾವೂ ಜಾಗೃತರಾಗಬೇಕು.

ಬಿ.ಎಸ್.ಮುಳ್ಳೂರ, ಹಲಗತ್ತಿ, ಬೆಳಗಾವಿ

ಸುದ್ದಿ 2 ನಿಮಿಷ

ಬಿಗ್‌ಬಾಸ್ ಸ್ಪರ್ಧಿ ಸೋನು ನೆರವಿಗೆ ಬಂದ ಕಿಚ್ಚ ಸುದೀಪ್

ಬಾಗಲಕೋಟೆ: ತಾಯಿಯ ಚಿಕಿತ್ಸೆಗೆ ಹಣವಿಲ್ಲದೇ ಪರದಾಡುತ್ತಿದ್ದ ಬಿಗ್ ಬಾಸ್ ಸೀಸನ್ 2ರ ಸ್ಪರ್ಧಿ, ಕಿರುತೆರೆ ನಟಿ ಸೋನು ಪಾಟೀಲ ಅವರ ನೆರವಿಗೆ ನಟ ಕಿಚ್ಚ ಸುದೀಪ್ ಧಾವಿಸಿದ್ದಾರೆ. ಸೋನು ಅವರ ತಾಯಿ ಮಹಾದೇವಿ ಪಾಟೀಲ ಅವರ ಆಸ್ಪತ್ರೆ ಬಿಲ್ ಹಾಗೂ ಔಷಧದ ವೆಚ್ಚವಾಗಿ ₹5 ಲಕ್ಷದವರೆಗೆ ಸುದೀಪ್ ಪಾವತಿಸಿದ್ದಾರೆ.

ಸುದೀಪ್ ನೀಡಿರುವ ನೆರವಿನ ಬಗ್ಗೆ ಸ್ವತಃ ಸೋನು ಪಾಟೀಲ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದಾರೆ.

'ತಾಯಿ ಮಹಾದೇವಿ ತೀವ್ರವಾಗಿ ನ್ಯುಮೋನಿಯಾ ಬಾಧಿತರಾಗಿದ್ದರು. ಮಧುಮೇಹ, ಅಧಿಕ ರಕ್ತದೊತ್ತಡದಿಂದ ಆರೋಗ್ಯ ಸ್ಥಿತಿ ಗಂಭೀರವಾಗಿದ್ದ ಅವರನ್ನು ಬಾಗಲಕೋಟೆಯ ಶಕುಂತಲಾ ಆಸ್ಪತ್ರೆಗೆ ದಾಖಲಿಸಿದ್ದೆ. ಈ ವೇಳೆ ಅಮ್ಮನ ಚಿಕಿತ್ಸೆಗೆ ಹಣ ಹೊಂದಿಸುವುದು ಕಷ್ಟವಾಯಿತು. ಕೋವಿಡ್ ಕರ್ಫ್ಯೂ ಕಾರಣ ಈಗ ಶೂಟಿಂಗ್ ನಿಂತಿದೆ. ಎಲ್ಲಿಯೂ ಕೆಲಸವಿಲ್ಲದಂತಾಗಿದೆ. ಹಣ ಸಾವಿರ ಲೆಕ್ಕದಲ್ಲಿ ಆಗಿದ್ದರೆ ಹೇಗಾದರೂ ಹೊಂದಿಸುತ್ತಿದ್ದೆ. ಆದರೆ ಲಕ್ಷಗಟ್ಟಲೆ ಬೇಕಾಯಿತು. ಕೆಲವು ಸ್ನೇಹಿತರ ಬಳಿ ಆರ್ಥಿಕ ನೆರವು ಕೇಳಿದರೂ ಸಿಗಲಿಲ್ಲ. ಸಹಾಯ ಮಾಡುವುದಾಗಿ ಹೇಳಿದವರೂ ಸ್ಪಂದಿಸಲಿಲ್ಲ. ಕೊನೆಗೆ ಸುದೀಪ್ ಅಣ್ಣ ಅವರನ್ನು ಸಂಪರ್ಕಿಸಿದೆ. ಅವರು ನನ್ನ ಕಷ್ಟಕ್ಕೆ ಸ್ಪಂದಿಸಿದರು' ಎಂದು ಸೋನು ಪಾಟೀಲ ಹೇಳಿದ್ದಾರೆ.



'ಸುದೀಪ್ ತಮ್ಮ 'ಕಿಚ್ಚ ಚಾರಿಟೆಬಲ್ ಟ್ರಸ್ಟ್' ಮೂಲಕ ದವಾಖಾನೆಯ ಸಂಪೂರ್ಣ ಬಿಲ್ ಪಾವತಿಸಿದ್ದಾರೆ. ಆ ಮೊತ್ತ ₹5 ಲಕ್ಷದಷ್ಟು ಆಗಿದೆ. ಸಂಕಷ್ಟದ ಸಂದರ್ಭದಲ್ಲಿ ಬೆನ್ನಿಗೆ ನಿಂತ ಸುದೀಪ್ ಅಣ್ಣ ಅವರಿಗೆ ಧನ್ಯವಾದ. ಯಾವತ್ತಿಗೂ ಅವರಿಗೆ ಋಣಿ' ಎಂದು ಸೋನು ವಿಡಿಯೊದಲ್ಲಿ ಕಣ್ಣೀರು ಹಾಕಿದ್ದಾರೆ.

ಜಿಂದಾಲ್‌ಗೆ ಭೂಮಿ ಮಾರಾಟ– ನನ್ನ ನಿಲುವಿಗೆ ಬದ್ಧ: ಆನಂದ್ ಸಿಂಗ್

ಹೂವಿನಹಡಗಲಿ (ಬಳ್ಳಾರಿ ಜಿಲ್ಲೆ): 'ಜಿಂದಾಲ್ ಕಂಪನಿಗೆ ಭೂಮಿ ಮಾರಾಟ ಮಾಡುವುದನ್ನು ಮೊದಲಿಂದಲೂ ವಿರೋಧಿಸಿದ್ದೇನೆ. ಈಗಲೂ ನನ್ನ ನಿಲುವಿಗೆ ಬದ್ಧನಿದ್ದೇನೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಆನಂದ್ ಸಿಂಗ್ ಸ್ಪಷ್ಟಪಡಿಸಿದರು.

ಪಟ್ಟಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸರ್ಕಾರದ ತೀರ್ಮಾನ ಪುನರ್ ಪರಿಶೀಲಿಸಲು ಮುಖ್ಯಮಂತ್ರಿಗೆ ಮನವಿ ಮಾಡಿದ್ದೇನೆ. ಜಿಂದಾಲ್‌ಗೆ ಭೂಮಿ ಮಾರಾಟದ ಬದಲು ಷರತ್ತುಗಳನ್ನು ವಿಧಿಸಿ, ಗುತ್ತಿಗೆ ನೀಡಬಹುದು ಎಂದು ತಿಳಿಸಿದ್ದೇನೆ. ಸಚಿವ ಸಂಪುಟ ಸಭೆಯಲ್ಲಿ ಈ ವಿಚಾರ ಮತ್ತೆ ಚರ್ಚೆಗೆ ಬರಲಿದೆ. ಆಗ ನನ್ನ ಅಭಿಪ್ರಾಯವನ್ನು ತಿಳಿಸಲಿದ್ದೇನೆ' ಎಂದು ಹೇಳಿದರು.

ಸಿಎಂ ಬದಲಾಯಿಸುವ ಪತ್ರ ನಕಲಿ: 'ಮುಖ್ಯಮಂತ್ರಿ ಸ್ಥಾನದಿಂದ ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಾಯಿಸುವ ಪತ್ರದ ವಿಚಾರ ನನಗೆ ಗೊತ್ತಿಲ್ಲ. ಯಾವ ಪತ್ರಕ್ಕೂ ನಾನು ಸಹಿ ಮಾಡಿಲ್ಲ. ಮಾಧ್ಯಮಗಳಲ್ಲಿ ತೋರಿಸುತ್ತಿರುವ ಪತ್ರ ನಕಲಿ ಇರಬೇಕು' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕೊರೊನಾ ಸೋಂಕಿನ ವಿರುದ್ಧ ಜಯಿಸಿದವರಿಗೆ ಮತ್ತೊಂದು ಸೋಂಕು ಎದುರಿಸುವ ಸವಾಲು

ದೃಷ್ಟಿಯ ಜತೆ ಜೀವ ಕಸಿಯುವ ಶಿಲೀಂಧ್ರ ಸೋಂಕು

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲೂ ಕೋವಿಡ್‌ನಿಂದ ಚೇತರಿಸಿಕೊಂಡ ಕೆಲವರಿಗೆ ಅತ್ಯಂತ ಅಪಾಯಕಾರಿ ಶಿಲೀಂಧ್ರ ಸೋಂಕು (ಮ್ಯೂಕೋರ್ಮೈಕೋಸಿಸ್ ಅಥವಾ ಬ್ಲ್ಯಾಕ್ ಫಂಗಸ್) ಕಾಣಿಸಿಕೊಳ್ಳುತ್ತಿದೆ. ಈಗಾಗಲೇ ದೃಷ್ಟಿ ಕಳೆದುಕೊಂಡ ಪ್ರಕರಣಗಳು ಇಲ್ಲಿನ ಮಿಂಟೋ ಸೇರಿದಂತೆ ಪ್ರಮುಖ ಕಣ್ಣಿನ ಆಸ್ಪತ್ರೆಗಳಲ್ಲಿ ವರದಿಯಾಗಿವೆ.

ರೋಗನಿರೋಧಕ ಶಕ್ತಿ ಕಡಿಮೆ ಇದ್ದವರಲ್ಲಿ ಕೋವಿಡ್‌ನಿಂದ ಚೇತರಿಸಿಕೊಂಡ ಒಂದು ತಿಂಗಳ ಒಳಗಡೆ ಈ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಈ ಸೋಂಕು ಕಣ್ಣು, ಕಿವಿ ಮತ್ತು ಮಿದುಳಿಗೆ ವ್ಯಾಪಿಸಿಕೊಂಡು, ಜೀವಕ್ಕೆ ಅಪಾಯವನ್ನುಂಟು ಮಾಡಲಿದೆ. ಕೋವಿಡ್ 2ನೇ ಅಲೆ ಕಾಣಿಸಿಕೊಂಡ ಬಳಿಕ ಈ ಸಮಸ್ಯೆಗೆ ಒಳಪಡುವವರ ಸಂಖ್ಯೆ ಹೆಚ್ಚಾಗಿದೆ.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಎಂಟು ಪ್ರಕರಣಗಳನ್ನು ಮಿಂಟೊ ಕಣ್ಣಿನ ಆಸ್ಪತ್ರೆಯ ವೈದ್ಯರ ನೆರವಿನಿಂದ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಅದರಲ್ಲಿ 6 ಮಂದಿ ಈ ಸೋಂಕಿನಿಂದ ಮೃತಪಟ್ಟಿದ್ದಾರೆ. ಇಬ್ಬರು ದೃಷ್ಟಿ ಕಳೆದುಕೊಂಡಿದ್ದಾರೆ. ಇದೇ ರೀತಿ, ನಾರಾಯಣ ನೇತ್ರಾಲಯ, ಪೀಪಲ್ ಟ್ರೀ, ಡಾ. ಅಗರ್‌ವಾಲ್ ಕಣ್ಣಿನ ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿ ಪ್ರಕರಣಗಳು ವರದಿಯಾಗಿವೆ.

'ಗಂಭೀರವಾಗಿ ಅಸ್ವಸ್ಥಗೊಂಡ ಕೊರೊನಾ ಸೋಂಕಿತರಿಗೆ ಸ್ಟೆರಾಯ್ಡ್ ಬಳಸುವುದರಿಂದ ದೇಹದಲ್ಲಿನ ಸಕ್ಕರೆ ಅಂಶ ಹೆಚ್ಚಳವಾಗುತ್ತದೆ. ಅದೇ ರೀತಿ, ರೋಗನಿರೋಧಕ ಶಕ್ತಿ ಕಡಿಮೆ ಇದ್ದಲ್ಲಿ ಈ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಚಿಕಿತ್ಸೆ ವಿಳಂಬವಾದಲ್ಲಿ ಮಿದುಳಿಗೆ ಸಂಬಂಧಿಸಿದ ಸಮಸ್ಯೆಗಳು ಕಾಣಿಸಿಕೊಂಡು, ವ್ಯಕ್ತಿ ಮೃತಪಡುವ ಸಾಧ್ಯತೆ ಇರುತ್ತದೆ' ಎಂದು ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

ಗಂಭೀರ ಸಮಸ್ಯೆ: 'ಮಧುಮೇಹ ಇದ್ದವರಿಗೆ ಈ ಮೊದಲು ಶಿಲೀಂಧ್ರ ಸೋಂಕು ಕಾಣಿಸಿಕೊಳ್ಳುತ್ತಿತ್ತು. ಕೋವಿಡ್‌ನಿಂದ ಚೇತರಿಸಿಕೊಂಡ ಎರಡರಿಂದ ನಾಲ್ಕು ವಾರಗಳ ಅವಧಿಯಲ್ಲಿ ಈ ಸೋಂಕು ಪತ್ತೆಯಾಗುತ್ತಿದೆ' ಎಂದು ಮಿಂಟೋ ಕಣ್ಣಿನ ಆಸ್ಪತ್ರೆಯ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ತಿಳಿಸಿದರು.

'ಈ ಸಮಸ್ಯೆ ಕಡೆಗಣಿಸಿದಲ್ಲಿ ಸೋಂಕು, ಮಿದುಳು ಸೇರಿ ಜೀವಕ್ಕೆ ಅಪಾಯ ತಂದೊಡ್ಡಲಿದೆ. ಕಣ್ಣು ನೋವು, ಕಿವಿಯ ಹಿಂದೆ ಊತ, ಕಣ್ಣು ಗುಡ್ಡೆ ಮುಂದೆ ಬರುವುದು ಸೇರಿದಂತೆ ವಿವಿಧ ಲಕ್ಷಣಗಳು ಈ ಸೋಂಕು ಇರುವವರಲ್ಲಿ ಕಾಣಿಸಿಕೊಳ್ಳುತ್ತದೆ' ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ.ಕೆ. ಭುಜಂಗ ಶೆಟ್ಟಿ ವಿವರಿಸಿದರು.

ಚಿಕಿತ್ಸೆಗೆ ಬೇಕಾದ ಔಷಧ ದುಬಾರಿ

ಪ್ರಜಾವಾಣಿ ವಿಶೇಷ

'ನಾಲ್ಕು ಪ್ರಕರಣಗಳಲ್ಲಿ ವ್ಯಕ್ತಿಯ ಕಣ್ಣನ್ನೇ ತೆಗೆಯುವ ಮೂಲಕ ಶಿಲೀಂಧ್ರ ಸೋಂಕಿನಿಂದ ಜೀವ ಉಳಿಸಲಾಯಿತು. ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಎಂಟು ಪ್ರಕರಣಗಳು ಬಂದಿದ್ದವು. ಈ ಸೋಂಕು ನಿವಾರಣೆಗೆ ಒದಗಿಸುವ ಔಷಧ ದುಬಾರಿಯಾಗಿದ್ದು' ಎಂದು ಪೀಪಲ್ ಟ್ರೀ ಆಸ್ಪತ್ರೆಯ ಇಎನ್‌ಟಿ ಶಸ್ತ್ರಚಿಕಿತ್ಸಕ ಡಾ. ರವಿ ಸಚ್ಚಿದಾನಂದ ತಿಳಿಸಿದರು.

'ಲಿಪೋಸೋಮಲ್ ಆಂಫೊಟೆರಿಸಿನ್ ಬಿ ಎಂಬ ಔಷಧವನ್ನು ಸೋಂಕು ನಿವಾರಣೆಗೆ ನೀಡಬೇಕಾಗುತ್ತದೆ' ಎಂದರು.

ಕೇಂದ್ರದ ಎಚ್ಚರಿಕೆ

ನವದೆಹಲಿ(ಪಿಟಿಐ): ಅನಿಯಂತ್ರಿತ ಮಧುಮೇಹವಿರುವ ಮತ್ತು ದೀರ್ಘಕಾಲ ತೀವ್ರ ನಿಗಾ ಘಟಕಕ್ಕೆ ದಾಖಲಾಗುವ ಕೋವಿಡ್ ರೋಗಿಗಳು ಅಪಾಯಕಾರಿ ಶಿಲೀಂಧ್ರ ಸೋಂಕನ್ನು ಕಡೆಗಣಿಸಿದರೆ ಮಾರಣಾಂತಿಕವಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ. ಶ್ವಾಸಕೋಶಗಳ ಮೇಲೂ ಈ ಸೋಂಕು ಪರಿಣಾಮ ಬೀರುತ್ತದೆ ಎಂದು ಹೇಳಿದೆ.

ಕೊಡಗಿನಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ವಿವಿಧೆಡೆ ಭಾನುವಾರ ಸಂಜೆ ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ.

ಸಿದ್ದಾಪುರ, ಗುಹ್ಯ, ನೆಲ್ಯಹುದಿಕೇರಿ, ಕರಡಿಗೋಡು, ಗೋಣಿಕೊಪ್ಪಲು, ಪೊನ್ನಂಪೇಟೆ, ತಿತಿಮತಿ ಭಾಗದಲ್ಲಿ ಜೋರು ಮಳೆಯಾಯಿತು.

ಸುಂಟಿಕೊಪ್ಪ, ಬೋಯಿಕೇರಿ, ಅಂದಗೋವೆ, ಕೆದಕಲ್, 7ನೇ ಹೊಸಕೋಟೆ, ಹರದೂರು, ಗದ್ದೆಹಳ್ಳ, ಕೊಡಗರಹಳ್ಳಿಯಲ್ಲೂ ಉತ್ತಮ ಮಳೆ ಸುರಿದಿದೆ. ವಿರಾಜಪೇಟೆಯಲ್ಲಿ ತುಂತುರು ಮಳೆಯಾಗಿದೆ.

ಬೆಳಗಾವಿ, ಉತ್ತರ ಕನ್ನಡದ ಶಿರಸಿ ಸೇರಿದಂತೆ ಕೆಲವೆಡೆ ಶನಿವಾರ ತಡರಾತ್ರಿ ಹಾಗೂ ಭಾನುವಾರ ಬೆಳಗಿನ ಜಾವ ಗುಡುಗು ಸಹಿತ ಮಳೆಯಾಗಿದೆ. ಶಿರಸಿಯಲ್ಲಿ ಮಧ್ಯಾಹ್ನದ ನಂತರ ಮಳೆಯಾಗಿದೆ.

ಸಿಡಿಲು ಬಡಿದು ಇಬ್ಬರು ಸಾವು


ಕಲಬುರ್ಗಿ: ಬೀದರ್ ಜಿಲ್ಲೆಯ ಕಮಲನಗರ ತಾಲ್ಲೂಕಿನ ಧನಸಿಂಗ್ ತಾಂಡಾದಲ್ಲಿ ಭಾನುವಾರ ಸಿಡಿಲು ಬಡಿದು ರೈತ ವಿಜಯಕುಮಾರ ಶಂಕರ್ ರಾಠೋಡ (34) ಮೃತಪಟ್ಟಿದ್ದಾರೆ. ಬೀದರ್ ತಾಲ್ಲೂಕಿನ ಕಾಶೆಂಪೂರ್ (ಪಿ) ಗ್ರಾಮದಲ್ಲಿ ಶನಿವಾರ ಸಿಡಿಲು ಬಡಿದು ಚಿದಾನಂದ ಬಂಡೆಪ್ಪ (40) ಮೃತಪಟ್ಟಿದ್ದಾರೆ.

ಇದೇ ತಾಲ್ಲೂಕಿನ ಮುಧೋಳ್ (ಬಿ) ಗ್ರಾಮದಲ್ಲಿ 9 ಆಡುಗಳು ಸಿಡಿಲು ಬಡಿದು ಸಾವನ್ನಪ್ಪಿವೆ.

ಜಿಲ್ಲೆಯ ಭಾಲ್ಕಿ, ಹುಲಸೂರ, ಬಸವಕಲ್ಯಾಣ ಮತ್ತು ಖಟಕಚಿಂಚೋಳಿಯಲ್ಲಿ ಮಳೆಯಾಗಿದೆ.

ನಿಧನ ವಾರ್ತೆ


ಚಲನಚಿತ್ರ ಸಾಹಿತಿ ಶ್ರೀರಂಗ



ಬೆಂಗಳೂರು: ಖ್ಯಾತ ಚಲನಚಿತ್ರ ಸಾಹಿತಿ, ಸಂಭಾಷಣೆಗಾರ ಶ್ರೀರಂಗ (86) ಅವರು ಭಾನುವಾರ ಸಂಜೆ ನಾಗರಬಾವಿಯಲ್ಲಿನ ಮನೆಯಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಮೂವರು ಪುತ್ರಿಯರು ಇದ್ದಾರೆ.

1974–75ರಲ್ಲಿ ಚಿತ್ರರಂಗ ಪ್ರವೇಶಿಸಿದ್ದ ಅವರು, ಮೊದಲು ಸಿದ್ದಲಿಂಗಯ್ಯ ಅವರ ನಿರ್ದೇಶನದ 'ಭೂಲೋಕದಲ್ಲಿ ಯಮರಾಜ' ಚಿತ್ರಕ್ಕೆ ಕಥೆ, ಹಾಡು, ಸಂಭಾಷಣೆ ಬರೆದಿದ್ದರು. 'ನಂಜುಂಡಿ ಕಲ್ಯಾಣ' ಚಿತ್ರದ 'ಒಳಗೆ ಸೇರಿದರೆ ಗುಂಡು..' ಹಾಡಿನಿಂದ ಶ್ರೀರಂಗ ಅವರು ಖ್ಯಾತಿ ಪಡೆದಿದ್ದರು. 'ಭಂಗಿರಂಗ' ಕಾವ್ಯನಾಮದಲ್ಲಿ ಅವರು ಹಾಡು ಬರೆಯುತ್ತಿದ್ದರು. ಡಾ.ರಾಜ್‌ಕುಮಾರ್ ಹಾಗೂ ಅವರ ತಮ್ಮ ವರದಪ್ಪ ಅವರ ಒಡನಾಡಿಯಾಗಿದ್ದ ಶ್ರೀರಂಗ ಅವರು, ಸುಮಾರು ಒಂದು ಸಾವಿರಕ್ಕೂ ಅಧಿಕ ಚಲನಚಿತ್ರಗಳಿಗೆ ಹಾಡು ಬರೆದಿದ್ದಾರೆ.

ಸೂರ್ಯನಾರಾಯಣ



ಬೆಂಗಳೂರು: ಹಿರಿಯ ಪತ್ರಕರ್ತ ವಿ.ಎಸ್. ಸೂರ್ಯನಾರಾಯಣ (78) ಅವರು ಹೃದಯಾಘಾತದಿಂದ ಭಾನುವಾರ ನಿಧನರಾದರು. ಅವರು ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಸುದ್ದಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು.

ನಾಗರಬಾವಿಯಲ್ಲಿ ವಾಸವಿದ್ದ ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಗೌರಿಬಿದನೂರು ತಾಲ್ಲೂಕಿನ ಸ್ವಗ್ರಾಮ ವೇದಲವೇಣಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅವರು ದೆಹಲಿ, ಧಾರವಾಡ, ಬೆಂಗಳೂರು ಆಕಾಶವಾಣಿ ಕೇಂದ್ರಗಳಲ್ಲಿ ಹಾಗೂ ದೂರದರ್ಶನದಲ್ಲಿ ಕಾರ್ಯನಿರ್ವಹಿಸಿದ್ದರು.

ಡಿ.ಮಂಜುನಾಥ್



ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ತುಮಕೂರು ಜಿಲ್ಲಾ ಹಿರಿಯ ಸಹಾಯಕ ನಿರ್ದೇಶಕ ಡಿ.ಮಂಜುನಾಥ್ (40) ಅವರು ಕೋವಿಡ್‌ನಿಂದ ನಗರದ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು. ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ. ಇವರು ದೊಡ್ಡಬಳ್ಳಾಪುರ ತಾಲ್ಲೂಕಿನ ನೆಲ್ಲಕುಂಟೆ ಗ್ರಾಮದವರು.

ಡಿ.ಸಿ ನಿವಾಸದಲ್ಲಿ ಈಜುಕೊಳ, ಜಿಮ್ ಬೇಕಿತ್ತೇ: ಜೆಡಿಎಸ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಕೋವಿಡ್‌ನಿಂದಾಗಿ ನಿತ್ಯ ಸಾವಿನ ಯಾತ್ರೆ ನಡೆದಿರುವ ಈ ಹೊತ್ತಿನಲ್ಲಿ, ಮೈಸೂರು ಜಿಲ್ಲಾಧಿಕಾರಿ ನಿವಾಸದಲ್ಲಿ ಅಂದಾಜು ₹50 ಲಕ್ಷ ವೆಚ್ಚದಲ್ಲಿ ಈಜುಕೊಳ, ಜಿಮ್ ನಿರ್ಮಿಸುವ ಅವಶ್ಯವೇನಿತ್ತು' ಎಂದು ಜೆಡಿಎಸ್ ಮುಖಂಡ ಕೆ.ವಿ.ಮಲ್ಲೇಶ್ ಭಾನುವಾರ ಇಲ್ಲಿ ಪ್ರಶ್ನಿಸಿದರು.

'ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಈಜುಪಟುವೇ? ಅವರು ಈಜುಪಟುವಾಗಿ ರಾಜ್ಯ, ದೇಶ ಪ್ರತಿನಿಧಿಸುತ್ತಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಈಜುಕೊಳ ನಿರ್ಮಾಣಕ್ಕೆ ಯಾವ ಅನುದಾನ ಬಳಸಿಕೊಂಡಿದ್ದಾರೆ? ಇಲ್ಲದಿದ್ದರೆ ಪ್ರಾಯೋಜಕತ್ವ ವಹಿಸಿದವರು ಯಾರು ಎಂಬುದನ್ನು ಬಹಿರಂಗಪಡಿಸಲಿ' ಎಂದು ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

'ಜಿಲ್ಲಾಧಿಕಾರಿಯ ನಿವಾಸ ಪಾರಂಪರಿಕ ಕಟ್ಟಡ. ಪಾರಂಪರಿಕ ಕಟ್ಟಡಗಳ ರಕ್ಷಣೆಯ ಸಮಿತಿಗೆ ಜಿಲ್ಲಾಧಿಕಾರಿಯೇ ಅಧ್ಯಕ್ಷರು. ಇದೀಗ ನಡೆದಿರುವ ಈಜುಕೊಳ ನಿರ್ಮಾಣ, ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ' ಎಂದರು.

ಕೆ.ವಿ.ಮಲ್ಲೇಶ್ ಅವರ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆಗಾಗಿ ಮೊಬೈಲ್‌ಗೆ ಕರೆ ಮಾಡಿದರೂ ಸಿಂಧೂರಿ ಸ್ಪಂದಿಸಲಿಲ್ಲ. ಮೊಬೈಲ್ ಸಂದೇಶಕ್ಕೂ ಪ್ರತಿಕ್ರಿಯಿಸಲಿಲ್ಲ.



ಮಾರುಕಟ್ಟೆ ಜನಜಂಗುಳಿ

ಸೋಮವಾರದಿಂದ ಲಾಕ್‌ಡೌನ್ ಜಾರಿಯಾಗುತ್ತಿರುವ ಹಿನ್ನೆಲೆಯಲ್ಲಿ ಧಾರವಾಡ ಮಾರುಕಟ್ಟೆ ಪ್ರದೇಶದಲ್ಲಿ ಭಾನುವಾರ ಅಗತ್ಯ ವಸ್ತುಗಳ ಖರೀದಿಗೆ ಮುಗಿಬಿದ್ದ ಸಾರ್ವಜನಿಕರು. ಅಲ್ಲಿ ಅಂತರವೂ ಇರಲಿಲ್ಲ, ಬಹುತೇಕರಿಗೆ ಮಾಸ್ಕ್ ಕೂಡ ಇರಲಿಲ್ಲ.

ಪ್ರಜಾವಾಣಿ ಚಿತ್ರ/ ಬಿ.ಎಂ.ಕೇದಾರನಾಥ

400 ಆಮ್ಲಜನಕ ಸಾಂದ್ರೀಕರಣ ಸಾಧನ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ಸೇಲ್ಸ್ ಫೋರ್ಸ್ ಭಾರತಕ್ಕೆ ದೇಣಿಗೆಯಾಗಿ ನೀಡಿದ 2,200 ಆಮ್ಲಜನಕ ಸಾಂದ್ರೀಕರಣ ಸಾಧನದ (ಕಾನ್ಸ್‌ಟ್ರೇಟರ್) ಪೈಕಿ, 400ನ್ನು ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಹಂಚಿಕೆ ಮಾಡಿದೆ.

ಅಲ್ಲದೆ, ಅದೇ ಸಂಸ್ಥೆ ದೇಣಿಗೆಯಾಗಿ ನೀಡಿದ 10 ಸಾವಿರ ಆಕ್ಸಿಮೀಟರ್‌ಗಳ ಪೈಕಿ 1,308ನ್ನು ಕರ್ನಾಟಕಕ್ಕೆ ಹಂಚಿಕೆ ಮಾಡಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಟ್ವೀಟ್ ಮಾಡಿದ್ದಾರೆ.

24 ಗಂಟೆಯಲ್ಲಿ 20 ಮಂದಿ ಸಾವು

ಒಂದನೇ ಪುಟದಿಂದ

ಈ ಸಂಬಂಧ ಚಾಮರಾಜನಗರ ವೈದ್ಯಕೀಯ ಕಾಲೇಜಿನ ಡೀನ್ ಮತ್ತು ನಿರ್ದೇಶಕ ಡಾ.ಸಂಜೀವ್ ಅವರನ್ನು ಸಂಪರ್ಕಿಸಿದಾಗ ಪ್ರತಿಕ್ರಿಯಿಸಲು ನಿರಾಕರಿಸಿದರು. 'ಈ ಕುರಿತು ನನಗೇನೂ ಗೊತ್ತಿಲ್ಲ' ಎಂದಷ್ಟೇ ಹೇಳಿ ಕರೆ ಮೊಟಕುಗೊಳಿಸಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ರವಿ ಕೂಡ ಕರೆ ಸ್ವೀಕರಿಸಲಿಲ್ಲ.

ಜಿಲ್ಲಾ ಸರ್ಜನ್ ಡಾ.ಶ್ರೀನಿವಾಸ್ ಪ್ರತಿಕ್ರಿಯಿಸಿ, 'ರೋಗ ಉಲ್ಬಣಗೊಂಡ ನಂತರ ಕೊನೆಯ ಸ್ಥಿತಿಯಲ್ಲಿ ಆಸ್ಪತ್ರೆಗೆ ಬರುತ್ತಿರುವುದು ಸಾವಿನ ಪ್ರಮಾಣ ಹೆಚ್ಚಾಗುತ್ತಿರುವುದಕ್ಕೆ ಕಾರಣ. ಜತೆಗೆ, ಆಸ್ಪತ್ರೆಯ ಮೇಲೂ ಅಧಿಕ ಒತ್ತಡ ಇದೆ' ಎಂದರು.

ಆಮ್ಲಜನಕದ ಸಂಗ್ರಹವಿದೆ: 'ಸಾವಿನ ಪ್ರಮಾಣ ಹೆಚ್ಚುತ್ತಿರುವುದಕ್ಕೆ ಆಮ್ಲಜನಕದ ಕೊರತೆ ಕಾರಣ ಅಲ್ಲ' ಎಂದು ಆಮ್ಲಜನಕ ಸರಬರಾಜು ವಿಭಾಗದ ನೋಡೆಲ್ ಅಧಿಕಾರಿ ಡಿಸಿಎಫ್ ಏಡುಕುಂಡಲು 'ಪ್ರಜಾವಾಣಿ'ಗೆ ತಿಳಿಸಿದರು.

'ಆಮ್ಲಜನಕದ ಸಂಗ್ರಹ ಇರುವಂತೆ ವ್ಯವಸ್ಥೆ ಮಾಡಲಾಗಿದೆ. ನಿತ್ಯ 4.5 ಕೆ.ಎಲ್ ಆಮ್ಲಜನಕ ಬೇಕಿದೆ. 400 ಆಮ್ಲಜನಕದ ಸಿಲಿಂಡರ್‌ಗಳೂ ಇವೆ. ಸೋಮವಾರ ಬೆಳಿಗ್ಗೆ 8 ಗಂಟೆಯವರೆಗೆ ಸಾಕಾಗುತ್ತದೆ' ಎಂದರು.

ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಒಂದೇ ರಾತ್ರಿ 14 ಮಂದಿ ಮೃತಪಟ್ಟ ಸುದ್ದಿ ಹರಡುತ್ತಿದ್ದಂತೆ ನಗರದಲ್ಲಿ ವ್ಯಾಪಾರಸ್ಥರು ಪೊಲೀಸರ ಸೂಚನೆಗೂ ಕಾಯದೆ ಸ್ವಯಂಪ್ರೇರಿತರಾಗಿ ಭಾನುವಾರ ತಮ್ಮ ಅಂಗಡಿಗಳನ್ನು ಬಂದ್ ಮಾಡಿದರು.

ಶುಕ್ರವಾರವಷ್ಟೇ ಆರೋಗ್ಯ ಇಲಾಖೆಯ ಪರಿಣತರ ತಂಡವೊಂದು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಕೋವಿಡ್ ರೋಗಿಗಳ ಸಾವಿನ ಕುರಿತು ಪರಿಶೀಲನೆ ನಡೆಸಿತ್ತು.

ಹಳ್ಳಿಗಳಲ್ಲಿ ಸೋಂಕು, ಸಾವು ಹೆಚ್ಚಳ: ಹೊಸ ಸೋಂಕಿತರು ಮತ್ತು ಮರಣ ಹೊಂದುತ್ತಿರುವವರ ಸಂಖ್ಯೆ ನಗರ ಪ್ರದೇಶಕ್ಕಿಂತ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿದೆ. ಮೇ 4ರಿಂದ 9 ರವರೆಗೆ 16 ಮಂದಿಯಷ್ಟೇ ಪಟ್ಟಣ ಪ್ರದೇಶದವರು ಮೃತಪಟ್ಟಿದ್ದರೆ, 42 ಮಂದಿ ಗ್ರಾಮೀಣ ಪ್ರದೇಶದವರು ಸಾವಿಗೀಡಾಗಿದ್ದಾರೆ. ಪಟ್ಟಣ ಪ್ರದೇಶದ 723 ಹಾಗೂ ಗ್ರಾಮೀಣ ಪ್ರದೇಶದ 3,237 ಮಂದಿಗೆ ಸೋಂಕು ತಗುಲಿದೆ.

'ಸೋಂಕಿನ ಲಕ್ಷಣ ಕಂಡು ಬಂದ ಕೂಡಲೇ ಅವರನ್ನು ಪರೀಕ್ಷೆಗೆ ಯಾರೂ ಕರೆದುಕೊಂಡು ಹೋಗುವುದಿಲ್ಲ. ಗಂಭೀರವಾಸ್ಥೆ ತಲುಪಿದಾಗ ಮಾತ್ರವೇ ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಬರುತ್ತಾರೆ. ಹೀಗಾಗಿ, ಸಾವಿನ ಪ್ರಮಾಣ ಹೆಚ್ಚಾಗುತ್ತಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ವೈದ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಲಾಠಿ ಪ್ರಹಾರಕ್ಕೆ ಜಗ್ಗೇಶ್ ಆಕ್ಷೇಪ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ನಿಯಮ ಉಲ್ಲಂಘಿಸುವವರ ಮೇಲೆ ಲಾಠಿ ಪ್ರಹಾರ ಮಾಡಬಾರದು ಎಂದು ಬಿಜೆಪಿ ಮುಖಂಡ, ಚಿತ್ರ ನಟ ಜಗ್ಗೇಶ್ ಒತ್ತಾಯಿಸಿದ್ದಾರೆ.

ಈ ಕುರಿತು ಭಾನುವಾರ ತಮ್ಮ ಟ್ವಿಟರ್ ಖಾತೆಯಲ್ಲಿ ಅಭಿಪ್ರಾಯ ಹಂಚಿಕೊಂಡಿರುವ ಅವರು, 'ಆದೇಶ ಪಾಲಿಸದವರಿಗೆ ದಂಡ ವಿಧಿಸಿ, ವಾಹನ ಜಪ್ತಿ ಮಾಡಿ. ಆದರೆ, ನಿರ್ದಯವಾಗಿ ಲಾಠಿಯಲ್ಲಿ ಹೊಡೆಯಬೇಡಿ. ಯುವಕರು ಹೇಗೋ ತಡೆದುಕೊಳ್ಳಬಹುದು. ವಯಸ್ಸಾಗಿರುವವರಿಗೆ ಯಾವ ಕಾಯಿಲೆ ಇರುತ್ತದೆ ಎಂಬುದು ನಿಮಗೇನು ತಿಳಿದಿರುತ್ತದೆ' ಎಂದು ಪೊಲೀಸ್ ಪಡೆಯ ಮುಖ್ಯಸ್ಥರನ್ನು ಪ್ರಶ್ನಿಸಿದ್ದಾರೆ.

'ಕೆಲವು ಅಧಿಕಾರಿಗಳು ಒಂದು ಏಟು ಕೊಟ್ಟು ಭಯಪಡಿಸುವ ಬದಲಿಗೆ ಪ್ರಾಣ ಹೋಗುವಂತೆ ಹಲ್ಲೆ ಮಾಡುತ್ತಾರೆ. ಕೊರೊನಾ ಮನುಕುಲದ ಅನ್ನ, ದುಡಿಮೆ, ನೆಮ್ಮದಿ ಕಸಿದಿದೆ. ಇಂಥ ಸಮಯದಲ್ಲಿ ಮನುಷ್ಯರಾಗಿ ನಾವು ಮನುಷ್ಯತ್ವ ಪಾಲಿಸಬೇಕು' ಎಂದು ಆಗ್ರಹಿಸಿದ್ದಾರೆ.



ಸ್ವಯಂ ಪ್ರೇರಣೆ
ವಿದ್ಯಾರ್ಥಿಗಳ ಸಿದ್ಧಿಗೆ ಸಂಜೀವಿನಿ

ಕಳೆದೊಂದು ವರ್ಷದಿಂದ ಹಿಂದೆಂದೂ ಕಂಡರಿಯದ ಸವಾಲುಗಳೂ ಅನಿಶ್ಚಿತ ಪರಿಸ್ಥಿತಿಯೂ ಎದುರಾಗಿವೆ. ವಿದ್ಯಾರ್ಥಿಗಳಂತೂ ಭವಿಷ್ಯದ ಬಗ್ಗೆ ತೀವ್ರ ಆತಂಕ ಹೊಂದಿದ್ದಾರೆ. ಹೀಗಿರುವಾಗ ಸ್ವಯಂಪ್ರೇರಣೆ ಬೆಳೆಸಿಕೊಂಡರೆ ಮುಂದಿನ ಗುರಿಯನ್ನು ಯಶಸ್ವಿಯಾಗಿ ಮುಟ್ಟಬಹುದು.

ಪ್ರದೀಪ್ ವೆಂಕಟರಾಮ್

ಕಳೆದ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆಯು ಕೋವಿಡ್ ಮೊದಲನೇ ಅಲೆಯ ನಡುವೆಯೇ ನಡೆಯಿತು. ತನ್ನ ಭವಿಷ್ಯದ ಬಗ್ಗೆ ಅನೇಕ ಕನಸುಗಳನ್ನು ಕಟ್ಟಿಕೊಂಡಿದ್ದ ಆರತಿಗೆ ನಿರೀಕ್ಷಿತ ಫಲಿತಾಂಶ ಬರಲಿಲ್ಲ. ಆದರೆ ಅವಳು ಎದೆಗುಂದಲಿಲ್ಲ; ಅವಳೇ ತಂದೆ- ತಾಯಿಗೆ ಸಾಂತ್ವನ ಹೇಳಿ ಮುಂಬರುವ ಸಪ್ಲಿಮೆಂಟರಿ ಪರೀಕ್ಷೆಗೆ ಇನ್ನೂ ಹೆಚ್ಚಿನ ತಯಾರಿ ನಡೆಸುವುದಾಗಿಯೂ ಮತ್ತು ತನ್ನ ಭವಿಷ್ಯದ ಕನಸುಗಳನ್ನು ಸಾಕಾರಗೊಳಿಸುವ ಯೋಜನೆಗಳಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ತಿಳಿಸಿದಳು. ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಒಳ್ಳೆಯ ಫಲಿತಾಂಶ ಗಳಿಸಿ ಕಂಪ್ಯೂಟರ್ ಸೈನ್ಸ್ ಕೋರ್ಸ್‌ಗೆ ಮೆರಿಟ್ ಸೀಟ್ ಗಿಟ್ಟಿಸಿಕೊಂಡ ಆರತಿಯಂತಹ ಯುವತಿಯರು ಎಲ್ಲರಿಗೂ ಮಾದರಿಯಾಗಬಲ್ಲರು. ಇಂತಹ ಯುವಕ- ಯುವತಿಯರ ಬಗ್ಗೆ ಹೆಮ್ಮೆಯಾಗುತ್ತದೆ, ಅಲ್ಲವೇ?

ಈ ಕಾಲಘಟ್ಟದಲ್ಲಿ ಹಿಂದೆಂದೂ ಕಂಡರಿಯದ ಸವಾಲುಗಳನ್ನೂ ಅನಿಶ್ಚಿತ ಪರಿಸ್ಥಿತಿಯನ್ನೂ ನಾವೆಲ್ಲರೂ ನೋಡುತ್ತಿದ್ದೇವೆ. ಕೈಯಲ್ಲಿರುವ ಉದ್ಯೋಗವನ್ನು ಕಾಪಾಡಿಕೊಳ್ಳುವ ಸವಾಲು ಉದ್ಯೋಗಸ್ಥರಿಗಾದರೆ, ಭವಿಷ್ಯದ ಉದ್ಯೋಗವನ್ನರಸಿ ನೂರಾರು ಕನಸುಗಳ ಬೆನ್ನೇರಿರುವ ವಿದ್ಯಾರ್ಥಿಗಳ ಆತಂಕ, ಅನುಮಾನ ಇನ್ನೊಂದೆಡೆ. ಅನಿಶ್ಚಿತತೆಯ ಈ ದಿನಗಳಲ್ಲಿ, ನಿಮ್ಮ ಕನಸುಗಳನ್ನು ಸಾಕಾರಗೊಳಿಸಬೇಕಾದರೆ, ಸ್ವಯಂಪ್ರೇರಣೆಯೇ ಸಾಧನೆಗೆ ಸಂಜೀವಿನಿಯಾಗಬೇಕು.

ಪ್ರೇರಣೆಯೆಂದರೆ, ನಮ್ಮ ಗುರಿಗಳತ್ತ ನಮ್ಮನ್ನು ಕ್ರಿಯಾತ್ಮಕವಾಗಿ ಸಾಗಿಸುವ ಚಾಲನಾ ಶಕ್ತಿ. ಏಕೆಂದರೆ, ಅತ್ಯಂತ ಶಕ್ತಿಶಾಲಿಯಾದ ಆಂತರಿಕ ಪ್ರೇರಣೆಯೇ ನಮ್ಮ ಸ್ಫೂರ್ತಿಗೂ, ಚೈತನ್ಯಕ್ಕೂ, ಕಾರ್ಯತತ್ಪರತೆಗೂ ಮೂಲ. ಪ್ರೇರಣೆ, ಬದುಕಿನ ಕನಸುಗಳನ್ನು ಕಾಣುವುದರ ಜೊತೆಗೆ ನಮ್ಮಲ್ಲಿ ಅವುಗಳನ್ನು ಸಾಧಿಸುವ ಛಲ, ಆತ್ಮವಿಶ್ವಾಸವನ್ನು ಹುಟ್ಟುಹಾಕುತ್ತದೆ.

ಹಾಗಾದರೆ ಸ್ವಯಂಪ್ರೇರಣೆಯನ್ನು ಬೆಳೆಸಿಕೊಂಡು, ಅಲ್ಪಾವಧಿ ಮತ್ತು ದೀರ್ಘಾವಧಿ ಗುರಿಗಳನ್ನು ಸಾಧಿಸುವುದು ಹೇಗೆ?



1 ಬದುಕಿನ ಗುರಿಗಳು: ಸ್ಪಷ್ಟವಾದ, ಸಾಧಿಸಬಹುದಾದ ವೃತ್ತಿ ಮತ್ತು ವೈಯಕ್ತಿಕ ಬದುಕಿನ ಗುರಿಗಳು ದೃಢವಾಗಿದ್ದರೆ, ಸ್ವಯಂ ಪ್ರೇರಣೆ ತಾನೇ ತಾನಾಗಿ ಮೂಡುತ್ತದೆ. ನಿಮ್ಮ ಆಸಕ್ತಿ, ಅಭಿರುಚಿಯ ಆಧಾರದ ಮೇಲೆ ಮಾರ್ಗದರ್ಶಕರೊಡನೆ ಸಮಾಲೋಚಿಸಿ, ವೃತ್ತಿಯ ಗುರಿಗಳನ್ನು ನಿರ್ಧರಿಸಿ.

2 ಸವಾಲುಗಳನ್ನು ನಿರೀಕ್ಷಿಸಿ: ಸಾಧನೆಯ ಹಾದಿಯಲ್ಲಿ ಅನೇಕ ಅಡಚಣೆಗಳು, ವೈಫಲ್ಯಗಳು, ವಿಳಂಬಗಳು ಸರ್ವೇಸಾಮಾನ್ಯ. ಆರತಿಯಂತಹ ಅನೇಕರು ಎದುರಿಸಿದಂತಹ ಸವಾಲುಗಳು, ತೆಗೆದುಕೊಂಡ ನಿರ್ಧಾರಗಳು ಮತ್ತು ಅವರು ಕಂಡುಕೊಂಡ ಪರಿಹಾರದ ಮಾರ್ಗಗಳು ನಿಮಗೆ ಪ್ರೇರಣೆಯಾಗಿರಲಿ. ಹಾಗಾಗಿ ಅಡಚಣೆಗಳನ್ನು ನಿರೀಕ್ಷಿಸಿ. ಮನಸ್ಸು ಸ್ಥಿತಪ್ರಜ್ಞೆಯಿಂದಿದ್ದರೆ ಸೃಜನಶೀಲ ಚಿಂತನೆ ಸಾಧ್ಯವಾಗಿ, ಸಾಧನೆಯ ಹಾದಿ ಸುಗಮವಾಗುತ್ತದೆ.

3 ಸಕಾರಾತ್ಮಕ ಪರಿಸರ: ಸುತ್ತಮುತ್ತಲಿನ ಪರಿಸರ ಸಕಾರಾತ್ಮಕವಾಗಿರಲಿ. ನಿಷ್ಠೆಯಿಂದಿರುವ ಉತ್ತಮವಾದ ಸ್ನೇಹಿತರು ನಿಮ್ಮಲ್ಲಿನ ಪ್ರತಿಭೆಗೆ ಸಕಾರಾತ್ಮಕ ಪ್ರೇರಣೆ ನೀಡಬಲ್ಲರು; ಆದ್ದರಿಂದ, ಸ್ನೇಹಿತರ ಆಯ್ಕೆಯಲ್ಲಿ ಜಾಣ್ಮೆಯಿರಲಿ. ಏನೇ ಸಮಸ್ಯೆಗಳಿದ್ದರೂ ಮಾರ್ಗದರ್ಶಕರು, ಪೋಷಕರು, ಶಿಕ್ಷಕರು ಮತ್ತು ಸ್ನೇಹಿತರೊಡನೆ ಹಂಚಿಕೊಳ್ಳಿ. ಕ್ರೀಡೆಗಳು, ಮನರಂಜನೆಯ ಜೊತೆಗೆ ಉತ್ತಮವಾದ ಸಂದೇಶವಿರುವ ಚಲನಚಿತ್ರಗಳು, ಟಿ.ವಿ. ಕಾರ್ಯಕ್ರಮಗಳು, ಪುಸ್ತಕಗಳು, ವಿಡಿಯೊಗಳಲ್ಲಿ ನಿಯಮಿತವಾದ ಆಸಕ್ತಿಯನ್ನು ಬೆಳೆಸಿಕೊಳ್ಳಿ.

4 ಸಾಧನೆಯ ಮೈಲಿಗಲ್ಲುಗಳು: ಹತ್ತನೇ ತರಗತಿಯ ನಂತರ ಸ್ನಾತಕೋತ್ತರ ಕೋರ್ಸ್‌ವರೆಗೆ 7–8 ವರ್ಷಗಳ ಪಯಣ. ಈ ದೀರ್ಘಾವಧಿಯಲ್ಲಿನ ಸಾಧನೆಗಳನ್ನು ಸಂಭ್ರಮಿಸಿ; ಆ ಸಾಧನೆಗಳ ಹಿಂದಿರುವ ಪರಿಶ್ರಮ, ಕಾರಣಗಳನ್ನು ಅವಲೋಕಿಸಿ, ಮುಂದಿನ ಮೈಲಿಗಲ್ಲಿನ ಯೋಜನೆಗಳಲ್ಲಿ ಸೂಕ್ತವಾದ ರೀತಿಯಲ್ಲಿ ಅಳವಡಿಸಿ.

5 ಸಾಧಕರ ಕಥೆಗಳು: ಮಹಾತ್ಮ ಗಾಂಧಿಯವರಂತಹ ರಾಷ್ಟ್ರ ನಾಯಕರು, ಸಿ.ವಿ. ರಾಮನ್‌ರಂತಹ ವಿಜ್ಞಾನಿಗಳು ಮತ್ತು ಜೆ.ಆರ್.ಡಿ. ಟಾಟಾರವರಂತಹ ಹಿರಿಯ ಕೈಗಾರಿಕೋದ್ಯಮಿಗಳ ಯಶಸ್ಸಿನ ಹಿಂದಿರುವ ಪರಿಶ್ರಮದ ಕಥೆಗಳನ್ನು ಓದಿ, ನಿಮ್ಮ ಉತ್ಸಾಹವನ್ನೂ, ಸ್ವಯಂಪ್ರೇರಣೆಯನ್ನೂ ವೃದ್ಧಿಸಿಕೊಳ್ಳಿ.

ನೀವು ಕನಸುಗಳನ್ನು ಕಾಣಬಲ್ಲವರಾದಲ್ಲಿ ನಿಶ್ಚಯವಾಗಿಯೂ ನೀವು ಅವುಗಳನ್ನು ಸಾಕಾರಗೊಳಿಸಬಲ್ಲಿರಿ; ಏಕೆಂದರೆ, ನಿಮ್ಮಲ್ಲಿದೆ ಅಪಾರವಾದ ಶಕ್ತಿ. ಕೋವಿಡ್ ವೈರಾಣುವಿಂದ ಉದ್ಭವಿಸಿರುವ ಅನಿಶ್ಚಿತ ಪರಿಸ್ಥಿತಿ, ಗೊಂದಲ, ಆತಂಕದ ಇಂದಿನ ಪರಿಸ್ಥಿತಿ ತಾತ್ಕಾಲಿಕ; ಹಾಗಾಗಿ ಎದೆಗುಂದದಿರಿ ಮತ್ತು ನಿಮ್ಮ ದೀರ್ಘಾವಧಿ ಕನಸುಗಳಿಂದ ದೂರ ಸರಿಯದಿರಿ. ಪ್ರಮುಖವಾಗಿ, ನಿಮ್ಮ ಇಷ್ಟ, ಅಭಿರುಚಿಗೆ ಸ್ಪಂದಿಸುವಂತಹ ವೃತ್ತಿ ಮತ್ತು ಅದಕ್ಕೆ ಅಗತ್ಯವಿರುವ ವಿದ್ಯೆಯನ್ನು ಅರಸಿ. ನಿಮಗೆ ಒಲವಿರುವ ವೃತ್ತಿಜೀವನದಲ್ಲಿ ನಿಮ್ಮ ಸ್ವಾಭಾವಿಕ ಪ್ರತಿಭೆ ಅರಳಿ, ವೃತ್ತಿಯಲ್ಲೂ ವೈಯಕ್ತಿಕ ಬದುಕಿನಲ್ಲೂ ಯಶಸ್ಸು ನಿಮ್ಮದಾಗಬಲ್ಲದು.

(ಲೇಖಕ: ಮ್ಯಾನೇಜ್‌ಮೆಂಟ್ ಮತ್ತು ಶಿಕ್ಷಣ ತಜ್ಞರು)

ವಿದ್ಯಾರ್ಥಿ ವೇತನ ಕೈಪಿಡಿ

ಡಿಎಕ್ಸ್‌ಸಿ ಪ್ರೊಗ್ರೆಸಿಂಗ್ ಮೈಂಡ್ಸ್ ಸ್ಕಾಲರ್‌ಶಿಪ್ 2021
- **ವಿವರ:** ಸಿಎಸ್, ಐಟಿ, ಇಇ, ಇಸಿ ವಿಭಾಗದಲ್ಲಿ ಬಿಇ, ಬಿಟೆಕ್ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಡಿಎಕ್ಸ್‌ಸಿ ಟೆಕ್ನಾಲಜಿ ಅರ್ಜಿಗಳನ್ನು ಆಹ್ವಾನಿಸಿದೆ. ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಈ ಸ್ಕಾಲರ್‌ಶಿಪ್‌ಗೆ ಅರ್ಹರು.
- **ಅರ್ಹತೆ:** ಭಾರತೀಯ ನಾಗರಿಕರು ಮಾತ್ರ ವಿದ್ಯಾರ್ಥಿವೇತನಕ್ಕೆ ಅರ್ಹರು. ಹಿಂದಿನ ತರಗತಿಯಲ್ಲಿ ಶೇ 60 ಅಂಕ ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯ ₹ 4 ಲಕ್ಷಕ್ಕೆ ಮೀರಿರಬಾರದು. ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ವಾರ್ಷಿಕ ₹ 6,000 ಅಥವಾ ಅದಕ್ಕಿಂತ ಹೆಚ್ಚಿನ ವಿದ್ಯಾರ್ಥಿವೇತನದ ಪ್ರಯೋಜನಗಳನ್ನು ಪಡೆದಿರಬಾರದು.
- **ಆರ್ಥಿಕ ನೆರವು:** ಒಟ್ಟು ಶುಲ್ಕದ ಮೇಲೆ ಶೇ 50 ಅಥವಾ ವರ್ಷಕ್ಕೆ ₹ 40,000 ಭತ್ಯೆ.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಜೂನ್ 15, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ವಿವರಗಳಿಗೆ:** www.b4s.in/praja/DXC1

ಐಐಟಿ ಇಂದೋರ್ ಡಿಪಾರ್ಟ್‌ಮೆಂಟ್ ಆಫ್ ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್ ಜೂನಿಯರ್ ರಿಸರ್ಚ್ ಫೆಲೋಶಿಪ್ 2021
- **ವಿವರ:** ಇಂದೋರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದವರಿಂದ ಕಂಪ್ಯೂಟರ್ ಸೈನ್ಸ್ ಹಾಗೂ ಎಂಜಿನಿಯರಿಂಗ್ ಜೂನಿಯರ್ ರಿಸರ್ಚ್ ಫೆಲೋಶಿಪ್ 2021ಕ್ಕೆ ಅರ್ಜಿ ಆಹ್ವಾನಿಸಿದೆ.
- **ಅರ್ಹತೆ:** ಕಂಪ್ಯೂಟರ್ ಸೈನ್ಸ್ ಹಾಗೂ ಗಣಿತ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದು ನೆಟ್ ಹಾಗೂ ಗೇಟ್ ಪರೀಕ್ಷೆ ಉತ್ತೀರ್ಣರಾದವರು ಹಾಗೂ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳಿಗೆ ಈ ಫೆಲೋಶಿಪ್ ಮುಕ್ತವಾಗಿದೆ.
- **ಆರ್ಥಿಕ ನೆರವು:** ತಿಂಗಳಿಗೆ ₹ 31,000 ಭತ್ಯೆ ಜೊತೆಗೆ ಎಚ್‌ಆರ್‌ಎ ನೀಡಲಾಗುವುದು
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಮೇ 20, 2021
- **ಅರ್ಜಿ ಸಲ್ಲಿಕೆ ವಿಧಾನ:** ಇಮೇಲ್ ಮೂಲಕ ಮಾತ್ರ
- **ಹೆಚ್ಚಿನ ವಿವರಗಳಿಗೆ:** www.b4s.in/praja/SEF8

ಐಐಎಸ್‌ಇಆರ್ ಬೆಹ್ರಾಂಪುರ್ ಪೋಸ್ಟ್ ಡಾಕ್ಟೊರಲ್ ರಿಸರ್ಚ್ ಫೆಲೋಶಿಪ್ ಇನ್ ಬಯೋಲಾಜಿಕಲ್ ಕೆಮಿಸ್ಟ್ರಿ ಅಂಡ್ ನ್ಯಾನೊಮೆಡಿಸಿನ್ 2021
- **ವಿವರ:** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್ ಐಐಎಸ್‌ಇಆರ್(ಐಐಎಸ್‌ಇಆರ್) ಬೆಹ್ರಾಂಪುರ್ ಪೋಸ್ಟ್ ಡಾಕ್ಟೊರಲ್ ರಿಸರ್ಚ್ ಫೆಲೋಶಿಪ್ 2021ಕ್ಕೆ ಪಿಎಚ್‌ಡಿ ಪದವಿಧರರಿಂದ ಅರ್ಜಿ ಆಹ್ವಾನಿಸಿದೆ.
- **ಅರ್ಹತೆ:** ಪಿಎಚ್‌ಡಿ ಮುಗಿಸಿದ 35ಕ್ಕಿಂತ ಕಡಿಮೆ ವಯಸ್ಸಿನ ಅಭ್ಯರ್ಥಿಗಳು ಈ ಫೆಲೋಶಿಪ್‌ಗೆ ಅರ್ಹರು.
- **ಆರ್ಥಿಕ ನೆರವು:** ತಿಂಗಳಿಗೆ ₹ 54,000 ಭತ್ಯೆ ಜೊತೆಗೆ ಎಚ್‌ಆರ್‌ಎ ನೀಡಲಾಗುವುದು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಜೂನ್ 23, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/BCN8

ಕೃಪೆ - buddy4study.com



ಜೆನೆಟಿಕ್ ಎಂಜಿನಿಯರಿಂಗ್
ಸಂಶೋಧನೆಗೂ ಪೂರಕ

ಶ್ರುತಿ ಸುಬ್ರಹ್ಮಣ್ಯ

ಇತ್ತೀಚೆಗೆ ಜೀನೋಮ್ ತಂತ್ರಜ್ಞಾನ ಅಥವಾ ಜೀನ್ (ವಂಶವಾಹಿ) ಎಂಜಿನಿಯರಿಂಗ್ ಎನ್ನುವುದು ವಿದ್ಯಾರ್ಥಿಗಳಲ್ಲಿ ಅತ್ಯಂತ ಕುತೂಹಲ ಮೂಡಿಸಿದ ಕೋರ್ಸ್. ವಿಜ್ಞಾನದಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಗಳನ್ನು ಇದು ತನ್ನತ್ತ ಸೆಳೆಯುತ್ತಿರುವುದು ಮಾತ್ರವಲ್ಲ, ಮುಂದೆ ಹೆಚ್ಚಿನ ಸಂಶೋಧನೆ ಮಾಡಲು, ವಿದ್ವತ್ಪೂರ್ಣ ಲೇಖನಗಳನ್ನು ಅಂತರರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಿಸಿ ಪ್ರಸಿದ್ಧಿ ಪಡೆಯಲು ಕೂಡ ಪೂರಕವಾದ ವಿಷಯ ಎಂದೇ ವಿಶ್ಲೇಷಿಸಲಾಗುತ್ತಿದೆ. ಅಷ್ಟಕ್ಕೂ ಈ ಜೀನ್ ಎಂಜಿನಿಯರಿಂಗ್ ಎಂದರೇನು ಎನ್ನುವ ಕುತೂಹಲ ಕೆಲವರಲ್ಲಿರಬಹುದು.

ಜೀವಿಗಳ ಕೋಶದ ಡಿಎನ್‌ಎಯನ್ನು ಕೃತಕವಾಗಿ ಬದಲಿಸುವ ವಿಧಾನಕ್ಕೆ ಜೀನ್ ಎಡಿಟಿಂಗ್ ಎಂಬ ವ್ಯಾಖ್ಯಾನವಿದೆ. ಇದನ್ನು ತಂತ್ರಜ್ಞಾನ (ಜೆನೆಟಿಕ್ ಎಂಜಿನಿಯರಿಂಗ್ ಟೆಕ್ನಾಲಜಿ)ಗಳ ಮೂಲಕ ಬದಲಾಯಿಸುವ ವಿಧಾನ ಚಾಲ್ತಿಯಲ್ಲಿದೆ. ಒಂದು ಜೀವಿಯ ವಂಶವಾಹಿಯನ್ನು ತೆಗೆದು ಅದನ್ನು ಇನ್ನೊಂದು ಜೀವಿ, ಅದು ಪ್ರಾಣಿ ಅಥವಾ ಸಸ್ಯ ಅಥವಾ ಸೂಕ್ಷ್ಮಾಣು.. ಹೀಗೆ ಯಾವುದೇ ಜೀವಿಗೆ ಸೇರಿಸಿ ಅವುಗಳ ದೈಹಿಕ ಗುಣಲಕ್ಷಣಗಳಲ್ಲಿ ಬದಲಾವಣೆ ತರಬಹುದು. ಜೆನೆಟಿಕ್ ಎಂಜಿನಿಯರಿಂಗ್ ತಂತ್ರಜ್ಞಾನ ಬಳಸಿ ಬದಲಾವಣೆ ಮಾಡಿದ ಜೀವಿಗಳಿಗೆ 'ಜಿಎಂಒ' ಎಂದು ಕರೆಯಲಾಗುವುದು. ವೇಗವಾಗಿ ಬೆಳೆಯುವಂತಹ ಮರಗಳು, ದೀರ್ಘಕಾಲ ಇರುವಂತಹ ಟೊಮೆಟೊ ಇದಕ್ಕೆ ಕೆಲವು ಉದಾಹರಣೆಗಳು.

ಐಐಟಿ ಖರಗ್‌ಪುರ, ಐಐಎಸ್‌ಸಿ ಬೆಂಗಳೂರು, ಐಐಟಿ ದೆಹಲಿ, ಐಐಟಿ ಮದ್ರಾಸ್, ಎಐಐಎಂಎಸ್ ದೆಹಲಿ ಮೊದಲಾದ ಕಡೆ ಜೆನೆಟಿಕ್ ಎಂಜಿನಿಯರಿಂಗ್‌ನಲ್ಲಿ ವಿವಿಧ ಕೋರ್ಸ್‌ಗಳು ಲಭ್ಯ.

ಔಷಧ ಕ್ಷೇತ್ರದಲ್ಲಿ...

ಹಾಗೆಯೇ ಜೀವಿಗಳನ್ನು ಬಾಧಿಸುವ ಕಾಯಿಲೆಗಳನ್ನು ಈ ತಂತ್ರಜ್ಞಾನದ ಮೂಲಕ ಕಡಿಮೆ ಮಾಡಬಹುದು. ಇಂದಿಗೂ ಕೂಡ ಅಲ್ಝೈಮೇರ್, ಸ್ಕಿರೋಫ್ರೇನಿಯ, ಆಟಿಸಂನಂತಹ ಕಾಯಿಲೆಗಳು, ಕ್ಯಾನ್ಸರ್‌ನ ಕೆಲವು ವಿಧಗಳಿಗೆ ಚಿಕಿತ್ಸೆಯಿಲ್ಲ. ಏಕೆಂದರೆ ಈ ಕಾಯಿಲೆಗಳಿಗೆ ನಿಖರವಾದ ಕಾರಣಗಳು ತಿಳಿದುಬಂದಿಲ್ಲ. ಅಂದರೆ ಈ ಕೋಶಗಳಲ್ಲಿರುವ ವಂಶವಾಹಿಗಳ ಬಗ್ಗೆ ಇನ್ನೂ ಅಧ್ಯಯನ ನಡೆಸಿ ಒಂದು ನಿರ್ಧಾರಕ್ಕೆ ಬರುವುದು ಸವಾಲಿನ ವಿಷಯವಾಗಿದೆ. ಮನುಷ್ಯ ದೇಹದಲ್ಲಿರುವ 6000ಕ್ಕಿಂತ ಅಧಿಕ ವಂಶವಾಹಿಗಳ ಕಾರ್ಯವೈಖರಿ ಬಗ್ಗೆಯೂ ಅಧ್ಯಯನ ನಡೆಸಲು ಇನ್ನೂ ಸಾಧ್ಯವಾಗಿಲ್ಲ. ಕೆಲವು ಕಾಯಿಲೆಗಳಲ್ಲಿ ಜೆನೆಟಿಕ್ ಬದಲಾವಣೆಗಳ ಪಾತ್ರ ಶೇ 90ರಷ್ಟು ಎಂಬ ನಿರ್ಧಾರಕ್ಕೆ ಬರಲಾಗಿದ್ದು, ವಂಶವಾಹಿಗಳ ಸಂಪೂರ್ಣ ಅಧ್ಯಯನದಿಂದ ಇಂತಹ ಕಾಯಿಲೆಗಳು ಬರದಂತೆ ತಡೆಯಬಹುದು ಅಥವಾ ಬಂದ ನಂತರ ಗುಣಪಡಿಸುವಂತಹ ಔಷಧ ತಯಾರಿಸಬಹುದು.

ಸೂಕ್ಷ್ಮಾಣು ಸೇರಿದಂತೆ ವಿವಿಧ ಜೀವಿಗಳಲ್ಲಿ ಕೃತಕವಾಗಿ ವಂಶವಾಹಿ ಬದಲಾವಣೆ ಮಾಡಿ ಅವುಗಳ ರೂಪಾಂತರಕ್ಕೆ ಪ್ರೇರೇಪಿಸುವುದು ಈ ಜೀನ್ ಎಡಿಟಿಂಗ್ ಅಥವಾ ಎಂಜಿನಿಯರಿಂಗ್‌ನ ಮೂಲತತ್ವ. ಇದು ಆರೋಗ್ಯ, ಔಷಧ ಕ್ಷೇತ್ರವಲ್ಲದೇ ಕೃಷಿ ವಲಯದಲ್ಲೂ ಬಹಳಷ್ಟು ಉಪಯುಕ್ತವಾಗಿದೆ. ಹಾಗೆಯೇ ಕೈಗಾರಿಕಾ ಜೈವಿಕ ತಂತ್ರಜ್ಞಾನದಲ್ಲೂ ಇದನ್ನು ಅನ್ವಯಿಸಲಾಗುತ್ತಿದ್ದು, ಇತ್ತೀಚೆಗೆ ಅತ್ಯಂತ ಜನಪ್ರಿಯವಾಗಿದೆ. ಬಯೊಕೆಮೆಸ್ಟ್ರಿ, ಸೆಲ್‌ಬಯಾಲಜಿ, ಮಾಲಿಕ್ಯೂಲರ್ ಬಯಾಲಜಿ, ಎವಲ್ಯೂಶನರಿ ಬಯಾಲಜಿ ಮೊದಲಾದವುಗಳ ಮೇಲೆ ಜೆನೆಟಿಕ್ ಎಂಜಿನಿಯರಿಂಗ್ ಹೆಚ್ಚು ಒತ್ತು ನೀಡುತ್ತದೆ. ಈ ಎಲ್ಲಾ ಕಾರಣಗಳಿಂದ ಈ ಕೋರ್ಸ್‌ಗೆ ಸಹಜವಾಗಿಯೇ ಬೇಡಿಕೆ ಹೆಚ್ಚಿದೆ.

ಕೋರ್ಸ್‌ಗಳು

ಜೈವಿಕ ತಂತ್ರಜ್ಞಾನ ಕೋರ್ಸ್‌ನಲ್ಲಿ ಈ ಜೆನೆಟಿಕ್ ಎಂಜಿನಿಯರಿಂಗ್ ಎಂಬುದು ವಿಶೇಷ ವಿಭಾಗವಾಗಿದೆ. ಹಾಗೆಯೇ ಇದನ್ನು ಪ್ರತ್ಯೇಕವಾಗಿಯೂ ಅಧ್ಯಯನ ಮಾಡಬಹುದು. ಈ ಕ್ಷೇತ್ರದಲ್ಲಿ ಬಹಳಷ್ಟು ಪದವಿ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿವೆ. ಪಿಯುಸಿ ನಂತರ ಬಿಇ, ಬಿಟೆಕ್ ಮಾಡಬಹುದು. ಹಾಗೆಯೇ ಬಿ.ಎಸ್‌ಸಿ. ಕೂಡ ಓದಬಹುದು. ಪದವಿ ಕೋರ್ಸ್ ನಂತರ ಎಂ.ಟೆಕ್., ಎಂ.ಎಸ್‌ಸಿ. ಮಾಡಬಹುದು.

ಇದರಲ್ಲಿ ವಿಶೇಷ ವಿಭಾಗಗಳಿದ್ದು, ಕ್ಲಿನಿಕಲ್ ಜೆನೆಟಿಕ್ಸ್, ಬಿಹೇವಿಯರಲ್, ಕ್ಲಾಸಿಕಲ್, ಜೀನೋಮಿಕ್ಸ್, ಮಾಲಿಕ್ಯೂಲರ್ ಜೆನೆಟಿಕ್ಸ್, ಜೆನೆಟಿಕ್ ಅಲ್ಗಾರ್ಥಮ್ಸ್ ಮೊದಲಾದವುಗಳನ್ನು ಇಲ್ಲಿ ಹೆಸರಿಸಬಹುದು. ಐಐಟಿಯಲ್ಲಿ ಪ್ರವೇಶ ಪಡೆಯಬೇಕಾದರೆ ಪಿಯುಸಿಯಲ್ಲಿ ವಿಜ್ಞಾನ ಓದಿದ ನಂತರ ಜೆಇಇ ಮೇನ್ಸ್‌ನಲ್ಲಿ ಉತ್ತೀರ್ಣರಾಗಬೇಕು. ಕೆಲವು ಸಂಸ್ಥೆಗಳು ಮೆರಿಟ್ ಮೇಲೆ ನೇರವಾಗಿ ಪ್ರವೇಶ ನೀಡುತ್ತವೆ.

ಕೋರ್ಸ್ ಓದಿದವರಿಗೆ ಬೇಕಾದಷ್ಟು ಉದ್ಯೋಗಾವಕಾಶಗಳಿವೆ. ವೈದ್ಯಕೀಯ, ಔಷಧ ಕ್ಷೇತ್ರ, ಸಂಶೋಧನ ಮತ್ತು ಅಭಿವೃದ್ಧಿ ಸಂಸ್ಥೆಗಳು, ಕೃಷಿ ವಲಯ, ರಾಸಾಯನಿಕ ಕಂಪನಿಗಳಲ್ಲಿ ಉದ್ಯೋಗಕ್ಕೆ ಸೇರಬಹುದು. ಭಾರತದಲ್ಲಿ ಮಾತ್ರವಲ್ಲದೇ, ವಿದೇಶಗಳಲ್ಲೂ ಸಾಕಷ್ಟು ಬೇಡಿಕೆಯಿದೆ. ಸಂಶೋಧನ ವಿಜ್ಞಾನಿಯಾಗಿ ಕೆಲಸ ಮಾಡಬಹುದು. ಇದಕ್ಕೆ ಪಿಎಚ್‌ಡಿ ಮಾಡಿರಬೇಕು. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಮ್ಯುನೋಲಜಿ, ಇನ್‌ಸ್ಟಿಟ್ಯೂಟ್ ಆಫ್ ಜೀನೋಮಿಕ್ ಆ್ಯಂಡ್ ಇಂಟಿಗ್ರೇಟಿವ್ ಬಯಾಲಜಿ ಮೊದಲಾದ ಉನ್ನತ ಸಂಸ್ಥೆಗಳಲ್ಲಿ ಉದ್ಯೋಗಕ್ಕೆ ಸೇರಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ

ವಿಜ್ಞಾನ

ಎಸ್ಸೆಸ್ಸೆಲ್ಸಿ

ಪರಿಸರವನ್ನು ರಕ್ಷಿಸಬಹುದಾದ ಐದು 'R' ಗಳು

1. **ನಿರಾಕರಣೆ (Refuse):** ಪರಿಸರಕ್ಕೆ ಹಾನಿಯುಂಟು ಮಾಡುವ ವಸ್ತುಗಳನ್ನು ಕೊಂಡುಕೊಳ್ಳದೇ ಇರುವುದು ಮತ್ತು ಒಮ್ಮೆ ಮಾತ್ರ ಬಳಸಬಹುದಾದ ಪ್ಲಾಸ್ಟಿಕ್ ಚೀಲಗಳನ್ನು ತಿರಸ್ಕರಿಸುವುದು.
2. **ಮಿತಬಳಕೆ (Reduce):** ಅವಶ್ಯವಿಲ್ಲದಿದ್ದಾಗ ಸಂಪನ್ಮೂಲಗಳನ್ನು ಬಳಕೆಯಲ್ಲಿ ಇಡದೇ ಇರುವುದು, ಅಂದರೆ ಉದಾಹರಣೆಗೆ ಅನಾವಶ್ಯವಾಗಿ ಫ್ಯಾನ್ ಅಥವಾ ದೀಪವನ್ನು ಉರಿಸದೇ ಇರುವುದು. ನಲ್ಲಿಯನ್ನು ಅವಶ್ಯವಿಲ್ಲದಿದ್ದಾಗ ನಿಲ್ಲಿಸುವುದು.
3. **ಮರುಬಳಕೆ (Reuse):** ವಸ್ತುಗಳನ್ನು ಮತ್ತೆ ಮತ್ತೆ ಬಳಸುವುದು. ಉದಾ: ಪ್ಲಾಸ್ಟಿಕ್ ಬಾಟಲಿಗಳು, ಕೆಲ ಪ್ಲಾಸ್ಟಿಕ್ ಚೀಲಗಳು ಮುಂತಾದವು.
4. **ಮರು ಉದ್ದೇಶ (Repurpose):** ಒಂದು ವಸ್ತುವನ್ನು ಮೂಲ ಉದ್ದೇಶಕ್ಕೆ ಬಳಸಲು ಸಾಧ್ಯವಾಗದೇ ಇದ್ದಾಗ ಬೇರೆ ಉಪಯುಕ್ತ ಉದ್ದೇಶಕ್ಕೆ ಬಳಸುವುದು.
5. **ಮರುಸಂಸ್ಕರಣೆ (Recycle):** ಒಮ್ಮೆ ಬಳಸಿದ ಪ್ಲಾಸ್ಟಿಕ್, ಕಾಗದ, ಗಾಜು ಮತ್ತು ಲೋಹಗಳನ್ನು ಸಂಗ್ರಹಿಸಿ ಮರುಸಂಸ್ಕರಣೆ ಮಾಡಿ ಅಗತ್ಯ ವಸ್ತುಗಳನ್ನು ತಯಾರಿಸಿ ಮರುಬಳಕೆ ಮಾಡುವುದು.



ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯ ಅಂಶಗಳು

- ಈ ಪರಿಕಲ್ಪನೆಯು ಭವಿಷ್ಯದ ಪೀಳಿಗೆಗಳ ಅಗತ್ಯವನ್ನು ಪೂರೈಸಲು ಸಂಪನ್ಮೂಲಗಳನ್ನು ಸಂರಕ್ಷಿಸುತ್ತಲೇ ಮಾನವನ ಪ್ರಸ್ತುತ ಮೂಲಭೂತ ಅಗತ್ಯಗಳನ್ನು ಪೂರೈಸುವ ವಿಧಾನವನ್ನು ಪ್ರೋತ್ಸಾಹಿಸುತ್ತದೆ.
- ಆರ್ಥಿಕ ಅಭಿವೃದ್ಧಿಯು ಪರಿಸರ ಸಂರಕ್ಷಣೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುವುದರಿಂದ ಜೀವನದ ಎಲ್ಲಾ ಅಂಶಗಳಲ್ಲೂ ಬದಲಾವಣೆಯನ್ನು ಸೂಚಿಸುತ್ತದೆ.
- ಜನರು ತಮ್ಮ ಸುತ್ತಲಿನ ಸಾಮಾಜಿಕ, ಆರ್ಥಿಕ ಮತ್ತು ಪರಿಸರದ ಸ್ಥಿತಿಗಳ ಬಗ್ಗೆ ಅವರ ಗ್ರಹಿಕೆಗಳ ಬದಲಾವಣೆಗೆ ಸಮ್ಮತಿಸುವುದರ ಮೇಲೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ತಮ್ಮ ಪ್ರಸ್ತುತ ಬಳಕೆಯನ್ನು ಪ್ರತಿಯೊಬ್ಬರೂ ಮಾರ್ಪಡಿಸುವ ಸಿದ್ಧತೆಗಳ ಮೇಲೆ ಇದು ಅವಲಂಬಿಸಿರುತ್ತದೆ.

ಸಂಪನ್ಮೂಲಗಳ ನಿರ್ವಹಣೆಯ ಅಗತ್ಯಗಳು

- ನಾವು ಬಳಸುವ ಎಲ್ಲಾ ವಸ್ತುಗಳು ಭೂಮಿಯ ಮೇಲಿನ ಸಂಪನ್ಮೂಲಗಳಿಂದಲೇ ಪಡೆಯುತ್ತಿದ್ದು ಅವುಗಳು ಮಿತಿಯನ್ನು ಹೊಂದಿವೆ.
- ಮಾನವನ ಜನಸಂಖ್ಯೆಯು ಪ್ರಪಂಚದಲ್ಲಿ ವೇಗವಾಗಿ ಹೆಚ್ಚುತ್ತಿದ್ದು ಸಂಪನ್ಮೂಲಗಳ ಬೇಡಿಕೆಯೂ ಅದೇ ರೀತಿ ಹೆಚ್ಚುತ್ತಿದೆ. ಆದ್ದರಿಂದ ದೀರ್ಘಾವಧಿಯ ಮತ್ತು ಮುಂದಿನ ಪೀಳಿಗೆಯ ಅಗತ್ಯಕ್ಕೆ ಸಂಪನ್ಮೂಲಗಳ ನಿರ್ವಹಣೆ ಅತ್ಯವಶ್ಯವಾಗಿದೆ.
- ಸಂಪನ್ಮೂಲಗಳನ್ನು ಹೊರ ತೆಗೆಯುವಾಗ ಉಂಟಾಗುವ ಪರಿಸರ ಹಾನಿಯನ್ನು ಗಮನದಲ್ಲಿಟ್ಟುಕೊಂಡು ಮುಂದುವರೆಯುವುದು ಸಂಪನ್ಮೂಲ ನಿರ್ವಹಣೆಯ ಗುರಿಯಾಗಿದೆ.

(ಮುಂದುವರಿಯುವುದು)

ನ್ಯೂಕಿಯೋಫಿಲಿಕ್ ಆದೇಶಕ್ರಿಯೆಗಳ ಘನರಸಾಯನಶಾಸ್ತ್ರದ ಅಂಶಗಳು

(ಮುಂದುವರಿದ ಭಾಗ)

ದ್ವಿತೀಯ ಪಿಯುಸಿ

ರಸಾಯನಶಾಸ್ತ್ರ

ಎರಡು ಪ್ರತ್ಯಂಗಿಗಳ (Enantionmers) ಸಮ ಪ್ರಮಾಣದ ಮಿಶ್ರಣದಲ್ಲಿ ಒಂದು ಸಮಾಂಗೀಯ ಭ್ರಮಣೆಯನ್ನು ಇನ್ನೊಂದು ಸಮಾಂಗೀಯ ರದ್ದುಪಡಿಸುವುದರಿಂದ ಅವು ಶೂನ್ಯ ದ್ಯುತಿ ಭ್ರಮಣೆಯನ್ನು ಹೊಂದಿರುತ್ತದೆ. ಅಂತಹ ಮಿಶ್ರಣವನ್ನು ರೆಸಿಮಿಕ್ ಮಿಶ್ರಣ (Racemic mixture) ಅಥವಾ ರೆಸಿಮಿಕ್ ಪರಿವರ್ತನೀಕರಣ (Racemic modification) ಎನ್ನುವರು. ರೆಸಿಮಿಕ್ ಮಿಶ್ರಣವನ್ನು ಸಂಯುಕ್ತದ ಹೆಸರಿನ ಮುಂಚೆ (±) ಅಥವಾ dI ಪೂರ್ವ ಸೂಚಿಯಿಂದ ಸೂಚಿಸುತ್ತಾರೆ.


ಉದಾಹರಣೆ: (±) ಬ್ಯೂಟೇನ್-2-ಆಲ್

ಪ್ರತ್ಯಂಗಿಗಳನ್ನು(Enatiomers) ರೆಸಿಮಿಕ್ ಮಿಶ್ರಣವಾಗಿ ಪರಿವರ್ತಿಸುವ ಪ್ರಕ್ರಿಯೆಗೆ ರೆಸಿಮೀಕರಣ (Racemistation) ಎನ್ನುವರು.


- ಧಾರಣ ಒಂದು ರಾಸಾಯನಿಕ ಕ್ರಿಯೆಯಲ್ಲಿ ಅಥವಾ ಬದಲಾವಣೆಯಲ್ಲಿ ಅಸಮ್ಮಿತಿ ಕಾರ್ಬನ್ ಬಂಧಗಳ ಸ್ಥಾನಿಕ ಜೋಡಣೆಯನ್ನು ಸಮಗ್ರವಾಗಿ ಸಂರಕ್ಷಿಸುವುದು ಧಾರಣ ವಿನ್ಯಾಸ. X Cabc ರಾಸಾಯನಿಕ ನಮೂನೆಯನ್ನು Y Cabc ನಮೂನೆಯನ್ನಾಗಿ ಪರಿವರ್ತಿಸಿದಾಗ ಅವು ಒಂದೇ ತರಹದ ಸಾಪೇಕ್ಷ ವಿನ್ಯಾಸವನ್ನು ಹೊಂದಿರುವುದರಿಂದಾಗಿ ಇದು ಕೂಡ ಸಹ ಸಂಬಂಧ ವಿನ್ಯಾಸವಾಗಿದೆ.



ಉದಾಹರಣೆ:




- **ವಿಲೋಮನ, ಧಾರಣ ಮತ್ತು ರೆಸಿಮೀಕರಣ:** ಒಂದು ಅಸಮ್ಮಿತಿ ಕಾರ್ಬನ್ ಪರಮಾಣುವಿನ ರಾಸಾಯನಿಕ ಕ್ರಿಯೆಯಲ್ಲಿ ಮೂರು ಬಗೆಯ ಫಲಿತಾಂಶಗಳು ದೊರೆಯುತ್ತದೆ.



1. ಉತ್ಪನ್ನ (A) ಒಂದೇ ಉಂಟಾದರೆ ಆ ಪ್ರಕ್ರಿಯೆಯನ್ನು ಧಾರಣ ವಿನ್ಯಾಸ ಎನ್ನುವರು.
2. ಉತ್ಪನ್ನ (B) ಒಂದೇ ಉಂಟಾದರೆ ಆ ಪ್ರಕ್ರಿಯೆಯನ್ನು ವಿಲೋಮನ ವಿನ್ಯಾಸ ಎನ್ನುವರು.
3. ಒಮ್ಮೆ ಮೇಲಿನ ಎರಡು ಉತ್ಪನ್ನದ ಮಿಶ್ರಣ 50:50 ಪ್ರಮಾಣದಲ್ಲಿ ಉಂಟಾದರೆ ಅಂತಹ ಪ್ರಕ್ರಿಯೆಯನ್ನು ರೆಸಿಮೀಕರಣ ಎನ್ನುವರು.

ವರ್ಜ್ಯನ ಕ್ರಿಯೆಗಳು

$\beta -$ ಹೈಡ್ರೋಜನ್ ಇರುವ ಹ್ಯಾಲೋ ಆಲ್ಕೇನ್ ಅನ್ನು ಮದ್ಯಸಾರಯುಕ್ತ ಪೊಟಾಷಿಯಂ ಹೈಡ್ರಾಕ್ಸೈಡ್ ದ್ರಾವಣದೊಂದಿಗೆ ಕಾಯಿಸಿದಾಗ $\beta -$ ಕಾರ್ಬನ್‌ನೊಂದಿಗೆ ಇರುವ ಹೈಡ್ರೋಜನ್ ಮತ್ತು $\alpha -$ ಕಾರ್ಬನ್‌ನೊಂದಿಗಿರುವ ಹ್ಯಾಲೋಜನ್ ಪರಮಾಣು ವರ್ಜ್ಯನಗೊಂಡು ಆಲ್ಕೀನ್ ಉತ್ಪನ್ನ ಉಂಟಾಗುತ್ತದೆ. ಈ ವರ್ಜ್ಯನ ಕ್ರಿಯೆಯಲ್ಲಿ $\beta -$ ಹೈಡ್ರೋಜನ್ ಪರಮಾಣುವು ಪಾಲ್ಗೊಳ್ಳುವುದರಿಂದ ಇದನ್ನು ವರ್ಜ್ಯನ ಕ್ರಿಯೆ ಎನ್ನುವರು.




B= ಪ್ರತ್ಯಾಮ್ಲದಿಂದ ಬಂದಿದ್ದು; X= ಬಿಡುಗಡೆ ಹೊಂದುವ ಗುಂಪು

ಉದಾಹರಣೆ:

$$R - CH_2 - CH_2 - X + KOH \xrightarrow[\Delta]{alcoh} R - CH = CH_2 + KX + H_20$$

'ಡಿ-ಹೈಡ್ರೋ ಹ್ಯಾಲೋಜಿನೇಷನ್' ಕ್ರಿಯೆಯಲ್ಲಿ ಪ್ರಧಾನ ಉತ್ಪನ್ನ ಯಾವುದೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ಆಲ್ಕೈಲ್ ಗುಂಪನ್ನು ಹೊಂದಿರುವ ದ್ವಿಬಂಧವುಳ್ಳ ಕಾರ್ಬನ್ ಪರಮಾಣುಗಳಿರುವ ಆಲ್ಕೀಲ್ ಆಗಿರುತ್ತದೆ. ಆದ್ದರಿಂದ 2-ಬ್ರೋಮೋಪೆಂಟೇನ್ ಪ್ರಮುಖವಾಗಿ ಪೆಂಟ್-2-ಇನ್ ಅನ್ನು ಉಂಟು ಮಾಡುತ್ತದೆ.



ಲೋಹಗಳೊಂದಿಗೆ ರಾಸಾಯನಿಕ ಕ್ರಿಯೆ

ಬಹುತೇಕ ಸಾವಯವ ಕ್ಲೋರೈಡ್, ಬ್ರೊಮೈಡ್ ಮತ್ತು ಅಯೋಡೈಡ್‌ಗಳು ಕೆಲವು ಲೋಹಗಳೊಂದಿಗೆ ವರ್ತಿಸಿ ಕಾರ್ಬನ್-ಲೋಹೀಯ ಬಂಧಗಳಿರುವ ಸಂಯುಕ್ತಗಳನ್ನು ಉಂಟು ಮಾಡುತ್ತವೆ. ಅವುಗಳನ್ನು ಸಾವಯವ ಲೋಹೀಯ ಸಂಯುಕ್ತಗಳು ಎನ್ನುವರು.

ಸಾವಯವ ಲೋಹೀಯ ಸಂಯುಕ್ತಗಳ ಪ್ರಮುಖ ವಿಧವಾದ ಆಲ್ಕೈಲ್ ಮೆಗ್ನೇಷಿಯಂ ಹ್ಯಾಲೈಡ್ (RM_gX) ಅನ್ನು 1900ರಲ್ಲಿ ವಿಕ್ಟರ್ ಗ್ರಿಗ್ನಾಡ್ ಕಂಡು ಹಿಡಿದರು. $R - MgX$ ಅನ್ನು $\overset{S-}{R} - \overset{S+}{Mg} - \overset{S-}{X}$ ಗ್ರಿಗ್ನಾರ್ಡ್ ಕಾರಕಗಳು ಎಂದು ಹೆಸರಿಸುತ್ತಾರೆ. ಈ ಕಾರಕಗಳನ್ನು ಹ್ಯಾಲೋ ಆಲ್ಕೇನ್‌ಗಳು ಮೆಗ್ನೀಷಿಯಂ ಲೋಹದೊಂದಿಗೆ ಶುಷ್ಕ ಈಥರ್‌ನಲ್ಲಿ ವರ್ತಿಸಿ ಪಡೆಯುತ್ತಾರೆ.

$$CH_3CH_2Br + Mg \xrightarrow{dry\ ethe} CH_3CH_2MgBr$$

ಗ್ರಿಗ್ನಾರ್ಡ್ ಕಾರಕ

ಗ್ರಿಗ್ನಾರ್ಡ್ ಕಾರಕ

ಗ್ರಿಗ್ನಾರ್ಡ್ ಕಾರಕಗಳು ಅತ್ಯಂತ ಕ್ರಿಯಾಶೀಲವಾಗಿದ್ದು ಇವು ಯಾವುದೇ ಪ್ರೋಟಾನ್ ಆಕರಗಳೊಂದಿಗೆ ವರ್ತಿಸಿ ಹೈಡ್ರೋಕಾರ್ಬನ್‌ಗಳನ್ನು ಉಂಟುಮಾಡುತ್ತವೆ. ಇವು ನೀರು, ಮದ್ಯಸಾರ, ಅಮೈನ್‌ಗಳಂತಹ ಆಮ್ಲೀಯಕಾರಕಗಳೊಂದಿಗೆ ವರ್ತಿಸಿ ಸಂಬಂಧಿಸಿದ ಹೈಡ್ರೋಕಾರ್ಬನ್‌ಗಳಾಗಿ ಪರಿವರ್ತಿಸುತ್ತವೆ.

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜೀವನದ ಪ್ರತೀ ಕ್ಷಣವೂ ಅದ್ಭುತ ಮತ್ತು ನಿಗೂಢ ಎಂಬ ವಾಸ್ತವ ಸಂಗತಿಯತ್ತ ನಾವು ಕುರುಡಾಗುವಂತೆ ಮಾಡಲು ಗಡಿಯಾರ ಹಾಗೂ ಕ್ಯಾಲೆಂಡರ್‌ಗೆ ನಾವು ಅವಕಾಶ ಕೊಡಬಾರದು.

-ಎಚ್.ಜಿ.ವೇಲ್ಸ್

ಮರಾಠಾ ಮೀಸಲಾತಿ ಅಸಿಂಧು ದೂರಗಾಮಿ ಪರಿಣಾಮದ ತೀರ್ಪು

ಮಹಾರಾಷ್ಟ್ರ ಸರ್ಕಾರವು ಉದ್ಯೋಗ ಮತ್ತು ಶಿಕ್ಷಣದಲ್ಲಿ ಮರಾಠಾ ಸಮುದಾಯಕ್ಕೆ ಪ್ರತ್ಯೇಕವಾಗಿ ಕಲ್ಪಿಸಿದ್ದ ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿರುವುದು ನಿರೀಕ್ಷಿತವೇ ಆಗಿದೆ. 2018ರಲ್ಲಿ ಮರಾಠಾ ಸಮುದಾಯಕ್ಕೆ ಶೇಕಡ 16ರಷ್ಟು ಮೀಸಲಾತಿಗೆ ಅನುವಾಗಿಸುವ ಕಾಯ್ದೆಯನ್ನು ಮಹಾರಾಷ್ಟ್ರ ಸರ್ಕಾರ ಅನುಷ್ಠಾನಗೊಳಿಸಿತ್ತು. ಇದನ್ನು ಪ್ರಶ್ನಿಸಿ ಕೆಲವರು ಬಾಂಬೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದಾಗ, ಈ ಕಾಯ್ದೆಯನ್ನು ಹೈಕೋರ್ಟ್ ಎತ್ತಿಹಿಡಿದಿತ್ತು. ಆದರೆ, ಮೀಸಲಾತಿ ಪ್ರಮಾಣವನ್ನು ಶಿಕ್ಷಣ ಕ್ಷೇತ್ರದಲ್ಲಿ ಶೇಕಡ 12ಕ್ಕೆ ಮತ್ತು ಉದ್ಯೋಗದಲ್ಲಿ ಶೇಕಡ 13ಕ್ಕೆ ಇಳಿಸಿತ್ತು. ಈಗ ಸುಪ್ರೀಂ ಕೋರ್ಟ್ ಈ ಮೀಸಲಾತಿಯನ್ನು ಅಸಿಂಧುಗೊಳಿಸಿದೆ. ಒಟ್ಟು ಮೀಸಲಾತಿಯು ಶೇಕಡ 50ರ ಮಿತಿಯನ್ನು ಮೀರಬಾರದು ಎನ್ನುವ 1992ರ ಇಂದಿರಾ ಸಾಹ್ನಿ ಪ್ರಕರಣದಲ್ಲಿ ತಾನು ನೀಡಿರುವ ತೀರ್ಪನ್ನು ಉಲ್ಲೇಖಿಸಿರುವ ಸುಪ್ರೀಂ ಕೋರ್ಟ್, 'ಮರಾಠಾ ಸಮುದಾಯವು ಉದ್ಯೋಗ, ಶಿಕ್ಷಣ ಮತ್ತು ಸಾರ್ವಜನಿಕ ಜೀವನದಲ್ಲಿ ಗಣನೀಯ ಪ್ರಾತಿನಿಧ್ಯ ಹೊಂದಿದೆ. ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಹಿಂದುಳಿದಿದೆ ಎಂಬ ಆ ಸಮುದಾಯದ ವಾದ ಸಮರ್ಥನೀಯವಲ್ಲ' ಎಂದಿದೆ. ಹಿಂದೆಯೂ ಹಲವು ಪ್ರಕರಣಗಳಲ್ಲಿ ಒಟ್ಟು ಮೀಸಲಾತಿಯ ಪ್ರಮಾಣ ಶೇ 50ರ ಮಿತಿಯನ್ನು ಮೀರುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಇದು ಅಚ್ಚರಿಯ ಸಂಗತಿಯೇನೂ ಅಲ್ಲ. ಇಂದಿರಾ ಸಾಹ್ನಿ ಪ್ರಕರಣದಲ್ಲಿ ನೀಡಿದ ತೀರ್ಪಿನ ಮರುಪರಿಶೀಲನೆ ಇಲ್ಲ ಎಂದೂ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.



ಮೀಸಲಾತಿ ಸೌಲಭ್ಯವು ವೋಟು ಗಿಟ್ಟಿಸಿಕೊಳ್ಳುವ ಅಸ್ತ್ರವಾಗಬಾರದು. ಅವಕಾಶವಂಚಿತ ಸಮುದಾಯಗಳನ್ನು ಸಬಲೀಕರಿಸುವ ಸಾಧನ ಎಂಬುದನ್ನು ಅಧಿಕಾರಸ್ಥ ರಾಜಕಾರಣಿಗಳು ಅರಿಯಬೇಕು

ಸುಪ್ರೀಂ ಕೋರ್ಟ್‌ನ ಈ ತೀರ್ಪು ದೂರಗಾಮಿ ಪರಿಣಾಮಗಳನ್ನು ಹೊಂದಿದೆ. ಮಹಾರಾಷ್ಟ್ರ ಮಾದರಿಯಲ್ಲಿ ಹಲವು ರಾಜ್ಯಗಳು ಈಗಾಗಲೇ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಪ್ರಯತ್ನ ನಡೆಸಿವೆ. ಕರ್ನಾಟಕದಲ್ಲಿ ಲಿಂಗಾಯತ ಪಂಚಮಸಾಲಿ ಸಮುದಾಯದವರು ತಮ್ಮನ್ನು ಹಿಂದುಳಿದ ವರ್ಗಗಳ 2ಎ ಪ್ರವರ್ಗಕ್ಕೆ ಸೇರಿಸಬೇಕೆಂದು ಆಗ್ರಹಿಸಿ ಇತ್ತೀಚೆಗೆ ಬೃಹತ್ ರ‍್ಯಾಲಿ ನಡೆಸಿದ್ದರು. ಕರ್ನಾಟಕ ಸರ್ಕಾರವೂ ಮೀಸಲಾತಿ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚು ಮಾಡಬೇಕು ಎಂದು ಕೋರ್ಟ್‌ಗೆ ತನ್ನ ನಿಲುವು ತಿಳಿಸಿತ್ತು. ಛತ್ತೀಸಗಡ ಸರ್ಕಾರವು ಹಿಂದೆ ಸುಗ್ರೀವಾಜ್ಞೆ ಹೊರಡಿಸಿ ಒಟ್ಟು ಮೀಸಲಾತಿಯ ಪ್ರಮಾಣವನ್ನು ಶೇ 82ಕ್ಕೆ ಹೆಚ್ಚಿಸಿತ್ತು. ಆದರೆ ಅಲ್ಲಿನ ಹೈಕೋರ್ಟ್ ಅದನ್ನು ರದ್ದುಗೊಳಿಸಿತು. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇನ್ನಷ್ಟು ಜಾತಿ, ಸಮುದಾಯಗಳನ್ನು ಸೇರಿಸಿದರೆ ಆಯಾ ರಾಜ್ಯಗಳು ತಮ್ಮಲ್ಲಿರುವ ಒಟ್ಟು ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸುವುದು ಅನಿವಾರ್ಯ. ಆದರೆ, ಅತ್ಯಂತ ಅಸಾಮಾನ್ಯವಾದ ಪರಿಸ್ಥಿತಿಯಲ್ಲಿ ಮೀಸಲಾತಿಯ ಮಿತಿಯನ್ನು ಜಾಸ್ತಿ ಮಾಡಬಹುದು ಎಂದು ಇಂದಿರಾ ಸಾಹ್ನಿ ಪ್ರಕರಣದ ತೀರ್ಪಿನಲ್ಲಿ ಸ್ಪಷ್ಟಪಡಿಸಲಾಗಿದೆ. ಮರಾಠಾ ಮೀಸಲಾತಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಲ್ಲಿ 'ಮರಾಠಾ ಸಮುದಾಯದ ಬೇಡಿಕೆಯನ್ನು ಅಸಾಮಾನ್ಯ ಸಂದರ್ಭದ ಬೇಡಿಕೆಯೆಂದು ಪರಿಗಣಿಸಲು ಸೂಕ್ತ ಕಾರಣಗಳಿಲ್ಲ' ಎಂದು ಹೇಳಿದೆ. ಇದೇ ಸಂದರ್ಭದಲ್ಲಿ ಸಂವಿಧಾನದ 102ನೇ ತಿದ್ದುಪಡಿಯನ್ನು ಪ್ರಶ್ನಿಸಿದ ಅರ್ಜಿಯನ್ನೂ ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. ಮರಾಠಾ ಮೀಸಲಾತಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್, ಇಂದಿರಾ ಸಾಹ್ನಿ ಪ್ರಕರಣದ ತೀರ್ಪನ್ನು ಮತ್ತೆ ಎತ್ತಿ ಹಿಡಿದಿದ್ದರೂ 'ಅಸಾಮಾನ್ಯ ಸಂದರ್ಭದ ಬೇಡಿಕೆ' ಎನ್ನುವ ವಿನಾಯಿತಿಯು ಮೀಸಲಾತಿಯ ಈ ವಿಷಯವನ್ನು ಮುಂದೆಯೂ ಚರ್ಚೆಯ ವಸ್ತುವಾಗಿ ಇರಿಸಲಿದೆ. ಆಯಾ ರಾಜ್ಯಗಳಲ್ಲಿನ ಪ್ರಬಲ ಜಾತಿಗಳ ರಾಜಕೀಯ ಒತ್ತಡವನ್ನು ನಿಭಾಯಿಸಲು ಹಲವು ರಾಜ್ಯ ಸರ್ಕಾರಗಳು ಮೀಸಲಾತಿ ಪ್ರಮಾಣದ ಹೆಚ್ಚಳಕ್ಕೆ ಕೋರ್ಟ್ ಮೊರೆ ಹೋಗುವ ಸಾಧ್ಯತೆ ಇರುವುದರಿಂದ, ಈ ವಿಷಯವು ಮುಕ್ತ ಚರ್ಚೆಯ ಸಂಗತಿಯಾಗಿ ಮುಂದೆಯೂ ಉಳಿದುಕೊಳ್ಳಲಿದೆ.

ದಿನದ ಟ್ವೀಟ್

ವಿನಾಯಿತಿ ಇರಲಿ



ಒಂದು ಬೆಂಕಿಪೊಟ್ಟಣ ತರಲಿಕ್ಕೂ ಐದಾರು ಕಿ.ಮೀ ದೂರ ಹೋಗಬೇಕಾದ ಹಳ್ಳಿಗಳು ಮಲೆನಾಡಿನಲ್ಲಿವೆ. ನಮ್ಮ ಮನೆಯಲ್ಲೇ ನಂದಿನಿ ಹಾಲು ತರಲು 2 ಕಿ.ಮೀ ಹೋಗಬೇಕು. ವಯಸ್ಸಾದವರೇ ಇರುವ ಮನೆಗಳಿವೆ. ನಡೆದುಕೊಂಡೇ ಹೋಗಬೇಕೆಂಬ ನಿಮ್ಮ ನಿಯಮದಿಂದ ಮಲೆನಾಡಿಗರಿಗೆ ವಿನಾಯಿತಿ ಕೊಡಿ.

ಗಿರೀಶ್ ಕಾರ್ಗದ್ದೆ, ನಾಗರಿಕ

25 ವರ್ಷಗಳ ಹಿಂದೆ

ಶುಕ್ರವಾರ, 10-5-1996

• ಆಮೆಗತಿಯಲ್ಲಿ ಕಾಂಗ್ರೆ- ಅತಂತ್ರ ಲೋಕಸಭೆ ಖಚಿತ

ನವದೆಹಲಿ, ಮೇ 9 (ಪಿಟಿಐ, ಯುಎನ್‌ಐ)- ಪ್ರಧಾನಿ ಪಿ.ವಿ.ನರಸಿಂಹ ರಾವ್ ಅವರು ತಾವು ಸ್ಪರ್ಧಿಸಿರುವ ಬರ್ಹಾಂಪುರ ಮತ್ತು ನಂದ್ಯಾಲ ಕ್ಷೇತ್ರಗಳೆರಡರಲ್ಲೂ ಜಯ ಗಳಿಸಿದ್ದರೂ ಅವರ ನಾಯಕತ್ವದ ಕಾಂಗ್ರೆಸ್ ಪಕ್ಷ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿ ಮತ್ತು ರಾಷ್ಟ್ರೀಯ ರಂಗ- ಎಡ ಪಕ್ಷಗಳಿಂದ ಹಿಂದೆಂದೂ ಇಲ್ಲದಷ್ಟು ಭಾರಿ ಪರಾಜಯ ಅನುಭವಿಸಿದೆ.
ಅತಂತ್ರ ಸಂಸತ್ತಿನಲ್ಲಿ ಬಿಜೆಪಿಗೆ ನಿಚ್ಚಳ ಬಹುಮತ ದೊರೆಯದಿದ್ದರೂ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮುವ ಖಚಿತ ಸೂಚನೆಗಳಿವೆ.

ಇದುವರೆಗಿನ ಫಲಿತಾಂಶ ಮತ್ತು ಮುನ್ನಡೆಯ ಕಂಪ್ಯೂಟರ್ ಲೆಕ್ಕಾಚಾರದ ಪ್ರಕಾರ, ಬಿಜೆಪಿಗೆ 175-185, ರಾಷ್ಟ್ರೀಯ ರಂಗ- ಎಡಪಕ್ಷ ಮೈತ್ರಿಕೂಟಕ್ಕೆ 140-150 ಸ್ಥಾನಗಳು ದೊರೆಯಲಿದ್ದು ಕಾಂಗ್ರೆ 3ನೇ ಸ್ಥಾನಕ್ಕೆ ಇಳಿಯಲಿದೆ.

• ಅಣ್ಣಾಡಿಎಂಕೆ ಧೂಳೀಪಟ: ಜಯಲಲಿತಾ ರಾಜೀನಾಮೆ

ಮದ್ರಾಸು, ಮೇ 9 (ಯುಎನ್‌ಐ)- ಲೋಕಸಭೆ ಮತ್ತು ವಿಧಾನಸಭೆಯ ಎರಡೂ ಚುನಾವಣೆಗಳಲ್ಲಿ ಪೂರ್ಣ ನೆಲಕಚ್ಚಿದ ಅಣ್ಣಾಡಿಎಂಕೆ ಪಕ್ಷದ ನಾಯಕಿ ಜೆ.ಜಯಲಲಿತಾ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಬರಗೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಜಯಾ ಅವರನ್ನು ಡಿಎಂಕೆಯ ಇ.ಸಿ.ಸುಗವನಂ 8,866 ಮತಗಳಿಂದ ಸೋಲಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 10-5-1971

• ಕಾಳಿ ನದಿ ಯೋಜನೆ ಪ್ರಥಮ ಹಂತ ನಿರ್ಮಾಣ ಘಟ್ಟಕ್ಕೆ

ಹುಬ್ಬಳ್ಳಿ, ಮೇ 9- ದಕ್ಷಿಣದ ವಿದ್ಯುತ್ ಕ್ಷಾಮಕ್ಕೆ ಸಂಜೀವಿನಿ ಎನಿಸಲಿರುವ ರಾಷ್ಟ್ರದ ಅತ್ಯಂತ ದೊಡ್ಡ ಜಲವಿದ್ಯುತ್ ಉತ್ಪಾದನಾ ಜಾಲ, 120 ಕೋಟಿ ರೂಪಾಯಿ ವೆಚ್ಚದ ಕಾಳಿ ನದಿ ಯೋಜನೆಯ ಪ್ರಥಮ ಹಂತ ಇಂದು ಬೆಳಿಗ್ಗೆ ವಿಧ್ಯುಕ್ತವಾಗಿ ನಿರ್ಮಾಣಘಟ್ಟ ಮುಟ್ಟಿತು.

ಇಲ್ಲಿಂದ 50 ಮೈಲಿ ದೂರದಲ್ಲಿರುವ ಪಶ್ಚಿಮಘಟ್ಟದ ಶಿಖರದ ತೇಗ-ಬೀಟೆಗಳ ಅರಣ್ಯಮಧ್ಯದ ಬೊಮ್ಮೇನಹಳ್ಳಿಯಲ್ಲಿ ರಾಜ್ಯಪಾಲರು ಗುಂಡಿ ಒತ್ತಿದಾಗ, ನದಿಗರ್ಭದಿಂದ ಸಿಡಿದು ಒಡೆದ ಬಂಡೆಗಳು ಕಾಡಿನಲ್ಲಿ ಪ್ರತಿಧ್ವನಿಸಿ ಶಂಕುಸ್ಥಾಪನೆಯನ್ನು ಸಾರಿದವು.

ಐದು ವರ್ಷಗಳಲ್ಲಿ ಪೂರ್ಣಗೊಳ್ಳಲಿರುವ ಮೂವತ್ತೆರಡು ಕೋಟಿ ರೂಪಾಯಿ ವೆಚ್ಚದ ಪ್ರಥಮ ಹಂತವು ಎಂಬತ್ತು ಕೋಟಿ ಯುನಿಟ್ ಅನ್ನು ಉತ್ಪಾದಿಸಿ, ರಾಜ್ಯದಲ್ಲಿ ಆಗತಾನೇ ಉಲ್ಬಣವಾಗತೊಡಗುವ ವಿದ್ಯುತ್ ಕ್ಷಾಮಕ್ಕೆ ಶಮನ ನೀಡುವುದು.

• ಶಕ್ತಿ ಬೆಳಕಿನ ಆಗರ

ಹುಬ್ಬಳ್ಳಿ, ಮೇ 9- ಒಂದು ಹಿಡಿ ಸಿಡಿಮದ್ದಿನ ಸ್ಫೋಟನದೊಂದಿಗೆ, ಕಾಲಗರ್ಭದಲ್ಲಿ ಜಡ ನಿದ್ದೆಯಲ್ಲಿದ್ದ ಬೊಮ್ಮೇನಹಳ್ಳಿ ಆಧುನಿಕ ಯುಗಕ್ಕೆ ಚಿಮ್ಮಿತು.

ಕಾಡನ್ನು ಒಂದು ಕ್ಷಣದಲ್ಲಿ ಕಂಪಿಸಿ ಮೂರು ಮಾರುಗಳೆತ್ತರಕ್ಕೆ ಚಿಮ್ಮಿಸಿದ ಈ ಗುಡುಗು ಕಾಳಿ ನದಿಯನ್ನು ಶಕ್ತಿ ಬೆಳಕಿನ ಆಗರವಾಗಿ ಪರಿವರ್ತಿಸುವಲ್ಲಿ ಸಾಂಕೇತಿಕ ಪಾತ್ರ ವಹಿಸಿತು.

ಎಲ್ಲೋ ಅಲ್ಲಲ್ಲಿ ಕುಳಿತು ನೋಡುತ್ತಿದ್ದ ಪಕ್ಷಿಗಳು ಹಾರಿ ಹೋದ ನೋಟ ಸ್ಮರಣೀಯ. ಇನ್ನು ಮುಂದೆ ಈ ಸ್ಥಳ ಆ ಪಕ್ಷಿ ಪ್ರಾಣಿಗಳಿಗೆ ಸುರಕ್ಷಿತ ನೆಲೆಯಲ್ಲ. ಜನ ಬರುತ್ತಾರೆ, ಯಂತ್ರ ತರುತ್ತಾರೆ. ಅಣೆಕಟ್ಟಿನ ಅಣೆ ಏರಿಸಿ ಊರು ಬೆಳೆಸುತ್ತಾರೆ.

ದೊಡ್ಡ ಯೋಜನೆಗಳು, ಮುಖ್ಯವಾಗಿ ಜಲ ವಿದ್ಯುತ್ ಯೋಜನೆಗಳು ಏಳುವ ಸ್ಥಳಗಳಲ್ಲೆಲ್ಲಾ ಇದು ಅನಿವಾರ್ಯ. ಶರಾವತಿಯಲ್ಲಿ ಆಗಿತ್ತು, ಕಾಳಿಯಲ್ಲೂ ಆಗಲಿದೆ.

ಪೇಟೆಂಟ್ ಸಡಿಲಗೊಳಿಸುವ ವಿಷಯ ಬಂದಾಗ ಔಷಧ ಕಂಪನಿಗಳು ವಿಭಿನ್ನವಾಗಿ ವರ್ತಿಸುವುದೇಕೆ?

ಪೇಟೆಂಟ್ ವ್ಯೂಹದಲ್ಲಿ ಕೋವಿಡ್ ಲಸಿಕೆ



ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಕೋವಿಡ್ ಎರಡನೇ ಅಲೆಗೆ ತತ್ತರಿಸಿರುವ ಭಾರತ, ಚಿಕಿತ್ಸೆಗೆ ತನ್ನಲ್ಲಿರುವ ಎಲ್ಲ ಅಸ್ತ್ರಗಳನ್ನೂ ಬಳಸುತ್ತಿದೆ. ಆದರೆ ಈಗಿರುವ ಗಂಭೀರ ಪರಿಸ್ಥಿತಿ ಮತ್ತು ಮೂರನೇ ಅಲೆಯ ಸಾಧ್ಯತೆ ಬಗ್ಗೆ ಈಗಾಗಲೇ ತಜ್ಞರ ಅನಿಸಿಕೆ ವ್ಯಕ್ತವಾಗುತ್ತಿರುವುದರಿಂದ, ಕೋವಿಡ್ ನಿಯಂತ್ರಿಸಲು ಲಸಿಕೆಯ ಉತ್ಪಾದನೆ ಮತ್ತು ವಿತರಣೆಯತ್ತ ಹೆಚ್ಚು ಗಮನ ಹರಿಸಬೇಕಿದೆ. ಆದರೆ ಭಾರತ ತಕ್ಷಣ ಲಸಿಕೆಯ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿಲ್ಲ.

ವರದಿಯೊಂದರ ಪ್ರಕಾರ, ಸುಮಾರು 16 ಕೋಟಿ ಜನರು (ಜನಸಂಖ್ಯೆಯಲ್ಲಿ ಶೇ 2.4ರಷ್ಟು ಮಂದಿ ಎರಡು ಡೋಸ್ ಹಾಗೂ ಶೇ 9.7ರಷ್ಟು ಮಂದಿ ಒಂದು ಡೋಸ್) ಲಸಿಕೆ ತೆಗೆದುಕೊಂಡಿದ್ದಾರೆ. ದೇಶದ ಒಟ್ಟು ಜನಸಂಖ್ಯೆಯನ್ನು ಪರಿಗಣಿಸಿದರೆ ಈ ಸಾಧನೆ ತೃಪ್ತಿಕರವಲ್ಲ.

ವಿಶ್ವದಾದ್ಯಂತ ಕೋವಿಡ್ ಲಸಿಕೆ ಉತ್ಪಾದನೆಯ ಸ್ಥಿತಿಯೂ ಆಶಾದಾಯಕವಾಗಿಲ್ಲ. ಲಸಿಕೆಯ ಉತ್ಪಾದನೆ ಕೆಲವೇ ಬಹುರಾಷ್ಟ್ರೀಯ ಔಷಧ ಕಂಪನಿಗಳ ವಶದಲ್ಲಿದ್ದು, ಇತರ ಕಂಪನಿಗಳಿಗೆ ಅನುಮತಿ ನೀಡದಿದ್ದಲ್ಲಿ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುವ ಸಾಧ್ಯತೆ ಇದೆ.

ಕಳೆದ ಅಕ್ಟೋಬರ್‌ನಲ್ಲಿ ಭಾರತ ಮತ್ತು ಆಫ್ರಿಕಾ ಕೋವಿಡ್ ಔಷಧ ಹಾಗೂ ಲಸಿಕೆಯ ಕೊರತೆ ನೀಗಿಸಲು ಅವುಗಳ ಮೇಲಿನ ಬೌದ್ಧಿಕ ಆಸ್ತಿ ಹಕ್ಕು (ಪೇಟೆಂಟ್) ರದ್ದುಪಡಿಸುವಂತೆ ವಿಶ್ವ ವ್ಯಾಪಾರ ಸಂಘಟನೆಯಲ್ಲಿ (ಡಬ್ಲ್ಯುಟಿಒ) ಪ್ರಸ್ತಾವ ಸಲ್ಲಿಸಿದವು. ಬಹುತೇಕ ಶ್ರೀಮಂತ ರಾಷ್ಟ್ರಗಳು ಪ್ರಸ್ತಾವವನ್ನು ವಿರೋಧಿಸಿದ್ದರೂ ನೂರಕ್ಕೂ ಹೆಚ್ಚು ಬಡ ರಾಷ್ಟ್ರಗಳು ಭಾರತದ ನಿಲುವನ್ನು ಸ್ವಾಗತಿಸಿದವು.

ಆರಂಭದಲ್ಲಿ ಪೇಟೆಂಟ್ ರದ್ದುಪಡಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಅಮೆರಿಕ ಈಗ ತನ್ನ ನಿಲುವನ್ನು ಬದಲಾಯಿಸಿದೆ. ಅಧ್ಯಕ್ಷ ಜೋ ಬೈಡನ್ ಅವರ ಇತ್ತೀಚಿನ ಹೇಳಿಕೆಯು ಪ್ರಸ್ತಾವಕ್ಕೆ ಜೀವ ತಂದಿದೆ. ಅಮೆರಿಕವು ಕೋವಿಡ್ ಲಸಿಕೆಗೆ ಮಾತ್ರ ಸೀಮಿತ ಅವಧಿಗೆ ಪೇಟೆಂಟ್ ರದ್ದುಗೊಳಿಸಲು ಅವಕಾಶ ದೊರಕಿಸಿಕೊಡುವ ಸಂಭವ ಕಾಣುತ್ತಿದೆ. ಪೇಟೆಂಟ್ ವಿಷಯದಲ್ಲಿ ಬಹುರಾಷ್ಟ್ರೀಯ ಔಷಧ ಕಂಪನಿಗಳು ಮತ್ತು ಬಡರಾಷ್ಟ್ರಗಳ ನಡುವೆ ಸಮರ ಆರಂಭವಾಗುವ ಎಲ್ಲ ಸೂಚನೆಗಳೂ ಕಂಡು ಬರುತ್ತಿವೆ.

ಡಬ್ಲ್ಯುಟಿಒ ಒಪ್ಪಂದಗಳಲ್ಲಿ ಬೌದ್ಧಿಕ ಆಸ್ತಿ ಹಕ್ಕು (ಟ್ರಿಪ್ಸ್) ಮುಖ್ಯವಾದದ್ದು. ಟ್ರಿಪ್ಸ್ ಪ್ರಕಾರ ಔಷಧ, ಲಸಿಕೆ ಇತ್ಯಾದಿ ತಯಾರಿಸುವ ಮೂಲ ಕಂಪನಿಗಳಿಗೆ ರಕ್ಷಣೆ ನೀಡಲಾಗಿದೆ. ಸಂಶೋಧನೆ, ಉತ್ಪಾದನೆ ಇತ್ಯಾದಿಗೆ ಕಂಪನಿಗಳು ಕೋಟ್ಯಂತರ ಡಾಲರ್ ವೆಚ್ಚ ಮಾಡಿ ಹೊಸ ಮಾಲಿಕ್ಯೂಲ್ (ಔಷಧ) ತಯಾರಿಸುತ್ತವೆ. ಅದಕ್ಕಾಗಿ ಅವು ವರಮಾನ ಅಪೇಕ್ಷಿಸುವುದು ತಪ್ಪಲ್ಲ. ಆದ್ದರಿಂದ ಆ ಕಂಪನಿಗಳಿಗೆ ಪೇಟೆಂಟ್ ನೀಡಲಾಗುತ್ತದೆ. ಇನ್ಯಾವುದೇ ಕಂಪನಿ ಈ ಔಷಧವನ್ನು ಉತ್ಪಾದನೆ ಮಾಡುವಂತಿಲ್ಲ. ಹಾಗೊಮ್ಮೆ ಮಾಡಬೇಕಾದರೆ ಮೂಲ ಕಂಪನಿ ಜೊತೆ ಒಪ್ಪಂದ ಮಾಡಿಕೊಂಡು ಅದಕ್ಕೆ ಸೂಕ್ತ ಗೌರವಧನ ನೀಡಬೇಕಾಗುತ್ತದೆ. ಪ್ರಸ್ತುತ ಈ ರೀತಿಯ ಒಪ್ಪಂದಗಳು ಬಹಳಷ್ಟಿವೆ.

ಕೋವಿಡ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಬ್ರಿಟನ್ ಮೂಲದ ಆಸ್ಟ್ರಾಜನಿಕಾ ಕಂಪನಿಯೊಂದಿಗೆ ಪುಣೆಯಲ್ಲಿರುವ ಸೀರಂ ಇನ್‌ಸ್ಟಿಟ್ಯೂಟ್ ಒಪ್ಪಂದ ಮಾಡಿಕೊಂಡು ಲಸಿಕೆ ಉತ್ಪಾದಿಸುತ್ತಿದೆ. ಆದರೆ ಅತ್ಯಂತ ಪರಿಣಾಮಕಾರಿ ಲಸಿಕೆ ತಯಾರಿಸುತ್ತಿರುವ ಫೈಜರ್ ಮತ್ತು ಮೊಡೆರ್ನಾ ಕಂಪನಿಗಳು ಒಪ್ಪಂದ ಮಾಡಿಕೊಳ್ಳುವುದಕ್ಕೆ ಸಿದ್ಧವಿಲ್ಲ. ನೊವಾವ್ಯಾಕ್ಸ್ ಸೇರಿದಂತೆ ಬಲಿಷ್ಠ ಔಷಧ ಸಂಸ್ಥೆಗಳು ಭಾರತದ ಈ ನಿಲುವನ್ನು ವಿರೋಧಿಸಿವೆ. ನೊವಾವ್ಯಾಕ್ಸ್ ಕಂಪನಿಯು ಹೇಳಿಕೆಯೊಂದನ್ನು ನೀಡಿ, ಭಾರತದ ಈ ಪ್ರಸ್ತಾವವನ್ನು ಒಪ್ಪಿಕೊಂಡಲ್ಲಿ ಲಸಿಕೆ ಉತ್ಪಾದನೆಗೆ ಧಕ್ಕೆ ಉಂಟಾಗುತ್ತದೆ ಎಂದು ಹೇಳಿದೆ.

ಲಸಿಕೆ ಉತ್ಪಾದಿಸುವ ಕಂಪನಿಗಳು ಉದಾರ ನೀತಿಯನ್ನು ಅನುಸರಿಸಿ ಇತರ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಲ್ಲಿ ಲಸಿಕೆಯ ಅಭಾವ ಕೊನೆಗೊಳ್ಳುತ್ತದೆ. ಆದರೆ ಔಷಧ ಕಂಪನಿಗಳು, ಅದರಲ್ಲಿ ಆಸಕ್ತಿ ಇರುವ ರಾಜಕೀಯ ಪಕ್ಷಗಳು ಡಬ್ಲ್ಯುಟಿಒದಲ್ಲಿ ತಮ್ಮ ಹಿತ ರಕ್ಷಿಸಿಕೊಳ್ಳುವಲ್ಲಿ ಅಮೆರಿಕದ ಮೇಲೆ ಪ್ರಭಾವ ಉಂಟು ಮಾಡುತ್ತಿವೆ. ಈ ಮಧ್ಯೆ 'ಕೋವಿಡ್-19 ವ್ಯಾಕ್ಸಿನ್ಸ್ ಗ್ಲೋಬಲ್ ಆ್ಯಕ್ಸೆಸ್' (ಕೋವ್ಯಾಕ್ಸ್) ಎಂಬ ಸಂಸ್ಥೆಯು ಎಲ್ಲ ಕಂಪನಿಗಳಿಂದ ಲಸಿಕೆ ಪಡೆದು, ಅವಶ್ಯಕತೆ ಇರುವ ಸ್ಥಳಗಳಿಗೆ ಆದ್ಯತೆಯ ಮೇರೆಗೆ ಪೂರೈಸುತ್ತಿದೆ. ಔಷಧ ಕಂಪನಿಗಳು ಕೋವ್ಯಾಕ್ಸ್‌ಗೆ ಒಂದಿಷ್ಟು ಲಸಿಕೆಯನ್ನು ನೀಡಿ, ತಮ್ಮ ಸಾಮಾಜಿಕ ಜವಾಬ್ದಾರಿ ಮುಗಿಯಿತೆಂದು ಹೇಳಿಕೊಳ್ಳುತ್ತಿವೆ.

ಆದರೆ ಒಪ್ಪಂದದ ಅನ್ವಯ, ಸಾಂಕ್ರಾಮಿಕ ರೋಗದಂಥ ತುರ್ತು ಪರಿಸ್ಥಿತಿಯಲ್ಲಿ ಔಷಧ ತಯಾರಿಕೆಗೆ ಇತರ ಕಂಪನಿಗಳಿಗೆ ಕಡ್ಡಾಯವಾಗಿ ಅವಕಾಶ ನೀಡಲು, ಪೇಟೆಂಟ್ ಪಡೆದ ಕಂಪನಿಗಳಿಗೆ ನಿರ್ದೇಶಿಸುವುದೊಂದೇ ಭಾರತಕ್ಕೆ ಈಗ ಇರುವ ದಾರಿ. ಡಬ್ಲ್ಯುಟಿಒ ಪೇಟೆಂಟ್ಸ್ ನಿಯಮದಲ್ಲಿ ಹೀಗೆ ಕಡ್ಡಾಯ ಪರವಾನಗಿ ನೀಡುವುದಕ್ಕೆ ಅವಕಾಶವಿದೆ. ಭಾರತದ ಪೇಟೆಂಟ್ ಕಾಯ್ದೆಯಲ್ಲೂ ಇದಕ್ಕೆ ಅವಕಾಶವಿದೆ. ಸುಪ್ರೀಂ ಕೋರ್ಟ್ ಸಹ ಕಡ್ಡಾಯ ಪರವಾನಗಿ ನೀಡುವುದರ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಇತ್ತೀಚೆಗೆ ಸೂಚಿಸಿದೆ.

ಕೆಲವು ವರ್ಷಗಳ ಹಿಂದೆ ಕಡ್ಡಾಯ ಪರವಾನಗಿ ನೀಡುವ ಅವಕಾಶವನ್ನು ಭಾರತ ಸರ್ಕಾರ ಉಪಯೋಗಿಸಿಕೊಂಡಿತ್ತು. ಜರ್ಮನಿಯ ಬೇಯರ್ ಕಂಪನಿಯು ನಕ್ಸಾವರ್ ಎಂಬ ಔಷಧಿಗೆ ಪೇಟೆಂಟ್ ಹೊಂದಿತ್ತು. ಕಿಡ್ನಿ ಕ್ಯಾನ್ಸರ್‌ನಿಂದ ಬಳಲುತ್ತಿರುವವರಿಗೆ ಈ ಔಷಧ ನೀಡಲಾಗುತ್ತದೆ. ಸರ್ಕಾರವು ಸ್ಥಳೀಯ ನಾಟ್ಕೊ ಕಂಪನಿಗೆ ಕಡ್ಡಾಯ ಪರವಾನಗಿ ನೀಡಿತ್ತು.

ಕೆಲವು ವರ್ಷಗಳ ಹಿಂದೆ ಎಚ್‌ಐವಿ ಸೋಂಕಿನಿಂದ ಬಳಲುತ್ತಿದ್ದ ಲಕ್ಷಾಂತರ ಬಡ ರೋಗಿಗಳ ಜೀವ ಉಳಿಸಿದ್ದು ಈ ಕಡ್ಡಾಯ ಪರವಾನಗಿ. ಆ ಸಂದರ್ಭದಲ್ಲಿ ಡಬ್ಲ್ಯುಟಿಒದ ಎಲ್ಲ ರಾಷ್ಟ್ರಗಳು ಕಡ್ಡಾಯ ಪರವಾನಗಿ ನೀಡಲು ಒಪ್ಪಿಗೆ ಸೂಚಿಸಿದ್ದವು.

ಲಸಿಕೆ ಅಥವಾ ಇನ್ಯಾವುದೇ ಅಧಿಕ ಬೆಲೆಯ ಔಷಧ ತಯಾರಿಸಲು ಕಡ್ಡಾಯ ಪರವಾನಗಿ ನೀಡಲು ಔಷಧ ಕಂಪನಿಗಳು ಸಿದ್ಧವಿಲ್ಲ. ಈ ಔಷಧ ತಯಾರಕರಿಗೆ ತಮ್ಮ ಕಂಪನಿಯ ಲೆಕ್ಕಪತ್ರದ ಆರೋಗ್ಯ ಮುಖ್ಯವೇ ವಿನಾ ಜನರ ಆರೋಗ್ಯವಲ್ಲ. ಪರವಾನಗಿ ನೀಡಿದಲ್ಲಿ ತಮ್ಮ ಆದಾಯ ಕಡಿಮೆಯಾಗಿ, ಅದರಿಂದ ಮುಂದಿನ ಸಂಶೋಧನೆಗೆ ಪೆಟ್ಟು ಬೀಳುತ್ತದೆ ಎಂಬುದು ಕಂಪನಿಗಳ ವಾದ. ಇತರ ಕಂಪನಿಗಳಿಗೆ ಗುಣಮಟ್ಟದ ಲಸಿಕೆ ಅಥವಾ ಔಷಧ ಉತ್ಪಾದಿಸುವಷ್ಟು ತಾಂತ್ರಿಕ ಸಾಮರ್ಥ್ಯವಿಲ್ಲ ಎಂಬುದು ಮತ್ತೊಂದು ವಾದ. ಆದರೆ ಇದು ಆಧಾರವಿಲ್ಲದ್ದು.

ಏಕಸ್ವಾಮ್ಯ ಹೊಂದಿರುವ ಔಷಧ ಕಂಪನಿಗಳು ಇತರ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡರೂ ಗೌರವಧನ ನೀಡಬೇಕಾಗುತ್ತದೆ. ಮೂಲ ಕಂಪನಿಗೆ ದೊಡ್ಡ ಮಟ್ಟದಲ್ಲಿ ನಷ್ಟವಾಗುವುದಿಲ್ಲ. ಬಡ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶ್ರೇಷ್ಠ ಮಟ್ಟದ ಲಸಿಕೆ ಅಥವಾ ಔಷಧ ತಯಾರಿಸುವಷ್ಟು ಅನುಕೂಲ ಮತ್ತು ಸಂಪನ್ಮೂಲ ಇದೆ ಎಂಬುದನ್ನು ಸೀರಂ ಸಂಸ್ಥೆ ತೋರಿಸಿಕೊಟ್ಟಿದೆ. ಜೊತೆಗೆ ಬಲಿಷ್ಠ ಔಷಧ ಕಂಪನಿಗಳು ಪೇಟೆಂಟ್ ರಕ್ಷಿತ ಔಷಧಗಳನ್ನು ತಯಾರಿಸಲು ಹಿಂದುಳಿದ ರಾಷ್ಟ್ರಗಳೊಂದಿಗೆ ಈಗಾಗಲೇ ಒಪ್ಪಂದ ಮಾಡಿಕೊಂಡಿವೆ. ಈ ರಾಷ್ಟ್ರಗಳಲ್ಲಿ ಉತ್ಪಾದನಾ ವೆಚ್ಚ, ಕೆಲಸಗಾರರ ಸಂಬಳ ಇತ್ಯಾದಿ ಕಡಿಮೆ ಇದ್ದು, ಇದರ ಲಾಭವನ್ನು ಮೂಲ ಕಂಪನಿಗಳು ಪಡೆದುಕೊಳ್ಳುತ್ತಿವೆ. ಪೇಟೆಂಟ್ ಸಡಿಲಗೊಳಿಸುವ ವಿಷಯ ಬಂದಾಗ ಔಷಧ ಕಂಪನಿಗಳು ವಿಭಿನ್ನವಾಗಿ ವರ್ತಿಸುತ್ತವೆ.

ಕಡ್ಡಾಯ ಪರವಾನಗಿ ನೀಡಿದಲ್ಲಿ ಚೀನಾ ದೇಶವು ತಂತ್ರಜ್ಞಾನವನ್ನು ಕದ್ದು ಅದರ ಲಾಭವನ್ನು ಪಡೆದುಕೊಳ್ಳುತ್ತದೆ ಎಂಬುದು ಅಮೆರಿಕದ ಬಹುರಾಷ್ಟ್ರೀಯ ಔಷಧ ಕಂಪನಿಗಳ ಮತ್ತೊಂದು ವಾದ. ಆದರೆ ಲಸಿಕೆಯು ಅಮೆರಿಕದ ಕಂಪನಿಗಳ ಕೊಡುಗೆಯಲ್ಲ. ಇದರಲ್ಲಿ ಅನೇಕ ರಾಷ್ಟ್ರಗಳ ವಿಜ್ಞಾನಿಗಳ ಪಾತ್ರವಿದೆ. ಬಹುತೇಕ ಲಸಿಕೆಗಳ ಅಭಿವೃದ್ಧಿಗೆ ಸಾರ್ವಜನಿಕ ಹಣ ಖರ್ಚು ಮಾಡಲಾಗಿದೆ. ಅಲ್ಲದೆ ಈಗಾಗಲೇ ಪ್ರಸಿದ್ಧ ಔಷಧ ಕಂಪನಿಯೊಂದು ಚೀನಾ ದೇಶದ ಕಂಪನಿಯೊಂದಿಗೆ ಲಸಿಕೆ ಉತ್ಪಾದಿಸಲು ಒಪ್ಪಂದ ಮಾಡಿಕೊಂಡಿದೆ.

ಈಗಿರುವ ಗಂಭೀರ ಪರಿಸ್ಥಿತಿ ಮತ್ತು ಮುಂದಿನ ಜನಾಂಗದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಭಾರತವು ಇತರ ರಾಷ್ಟ್ರಗಳ ಸಹಾಯದಿಂದ ಕಡ್ಡಾಯ ಪರವಾನಗಿ ನೀಡುವ ಪ್ರಸ್ತಾವವನ್ನು ಡಬ್ಲ್ಯುಟಿಒದಲ್ಲಿ ಬಲವಾಗಿ ಪ್ರತಿಪಾದಿಸಬೇಕು. ಕಡ್ಡಾಯ ಪರವಾನಗಿ ನೀಡಬೇಕಾದಲ್ಲಿ ಮೂಲ ಪೇಟೆಂಟ್ ಹೊಂದಿರುವ ಕಂಪನಿಯೊಂದಿಗೆ ದೀರ್ಘ ಚರ್ಚೆ, ವಿಚಾರ ವಿನಿಮಯ ಅಗತ್ಯ. ಆದರೆ ಕೋವಿಡ್ ಅದಕ್ಕೆ ಆಸ್ಪದ ಕೊಡುತ್ತಿಲ್ಲ. ಆದಷ್ಟು ಶೀಘ್ರವಾಗಿ ಈ ಕೆಲಸ ಆಗಬೇಕಿದೆ.



ಚುರುಮುರಿ



ಕೊರೊನಾ ಸಮತೆ

• ಸುಮಂಗಲಾ

ಕೊರೊನಾ ಹಿರಿಯಣ್ಣ ಎಲ್ಲಾ ದೇಶಗಳಲ್ಲಿ ತನ್ನ ಪ್ರಗತಿಯ ಲೆಕ್ಕ ತೆಗೆದುಕೊಳ್ಳಲು ಕಿರಿಯ ಚೇಲಾಗಳ ಸಭೆ ಕರೆದಿದ್ದ. ಚೀನಾದ ಕೊರೊನಾ-ಚೇಲಾನನ್ನು ಮೊದಲು ಕರೆದ.

'ಅಲ್ಲಿ ಒಟ್ಟು ಕೇಸುಗಳ ಸಂಖ್ಯೆ ಲಕ್ಷವನ್ನೂ ದಾಟಿಲ್ಲ, ಸತ್ತವರಂತೂ ಐದು ಸಾವಿರವೂ ಇಲ್ಲ, ಯಾರಿಗೂ ಈಗ ನನ್ನ ಭಯವೇ ಇಲ್ಲ' ಎಂದವನು ಅಲವತ್ತುಕೊಂಡ.

'ಅದ್ಹೆಂಗೆ ಸಾಧ್ಯ? ನಾವು ಹರಡಿದ್ದೇ ಅಲ್ಲಿಂದ ತಾನೆ' ಹಿರಿಯಣ್ಣ ಅಚ್ಚರಿಗೊಂಡ.

'ಕೊರೊನಾಪೀಡಿತರನ್ನೆಲ್ಲ ಹಿಡಿದು ಬೇರೆ ಆಸ್ಪತ್ರೆಗೆ ಹಾಕಿದರು. ನಾವು ಹರಡುವ ಸರಪಳಿ ಕಡಿದರು' ಎಂದು ಚೀನಾಚೇಲ ವಿವರಿಸಿದ. 'ಎಲ್ಲ ಸುಳ್ಳು, ಅವ್ರು ಮುಚ್ಚಿಡ್ತಿದಾರೆ, ಬಾಯಿಬಿಡಬೇಡ ಅಂತ ಇವನಿಗೂ ಹೆದರಿಸಿದ್ದಾರೆ' ಎಂದು ಇನ್ನುಳಿದ ಚೇಲಾಗಳು ದೂರಿದರು.

'ಹೋದವರ್ಷ ನಮ್ಮನ್ನು ಓಡಿಸೇಬಿಟ್ವಿ ಅಂತ ಜನ ಕುಣಿದ್ರು, ಈಗ ಆಸ್ಪತ್ರೇಲಿ ಬೆಡ್, ಆಮ್ಲಜನಕ, ಔಷಧ ಏನೂ ಸರಿಯಾಗಿ ಸಿಕ್ತಿಲ್ಲ ಅಂತ ಗೋಳಾಡ್ತಿದಾರೆ. ಭಾರತವೀಗ ಕೊರೊನಾಪಟ್ಟಿಯಲ್ಲಿ 2ನೇ ಸ್ಥಾನಕ್ಕೇರಿದೆ... ' ಎಂದ ಹಿರಿಯಣ್ಣ, ಭಾರತದ ಚೇಲಾನಿಗೆ ಸದ್ಯದ ಲೆಕ್ಕ ಕೇಳಿದ.

'ಐಸಿಯುನಲ್ಲಿ ಆಮ್ಲಜನಕ ಸಿಗದೇ ಸತ್ತವರನ್ನು, ಐಸಿಯು ಅವಘಡ ಆಗಿ ಸತ್ತವರನ್ನು ಯಾವ ಪಟ್ಟಿಗೆ ಸೇರಿಸೋದು?' ಭಾರತದ ಚೇಲಾ ತಲೆ ಕೆರೆದುಕೊಂಡ.

'ಅದನ್ನು ಅಲ್ಲಿಯ ಅಧಿಕಾರಿಗಳ, ರಾಜಕಾರಣಿಗಳ ತಲೆಗೆ ಕಟ್ಟು, ಅವು ನಮ್ಮ ಪಟ್ಟಿಗೆ ಬೇಡ'.

'ನಮಗಿಂತ ಭಾಳಾ ದೊಡ್ಡ ವೈರಸ್ ಭಾರತದಲ್ಲಿ ಹರಡಿದೆ'.

'ನಮ್ಮನ್ನೂ ಮೀರಿಸುವ ವೈರಸ್ಸೇ...?' ಹಿರಿಯಣ್ಣ ಗಾಬರಿಯಾದ.

'ಜಾತಿ, ಧರ್ಮದ ವೈರಸ್, ಎಲ್ಲಾ ಕಡೆ ಭ್ರಷ್ಟಾಚಾರದ ವೈರಸ್'.

'ಆ ವೈರಸ್ ಭಾರತೀಯರಿಗೇ ಇರಲಿ, ನೀವು ಆ ವೈರಸ್ ಅಂಟಿಸಿಕೊಳ್ಳಬೇಡಿ! ಜಾತಿ, ಧರ್ಮದ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಂಡು, ತಬ್ಬಿಕೊಳ್ಳಿ. ಸಮತೆಯೇ ನಮ್ಮ ಮಂತ್ರ' ಎಂದು ಕೊರೊನಾ ಹಿರಿಯಣ್ಣ ಭಾರತದ ಚೇಲಾಗೆ ಉಪದೇಶಿಸಿದ!

ಸಂಗತ

ದತ್ತು: ಎಚ್ಚರ... ಕಾನೂನುಬಾಹಿರವಾದೀತು

ಕೋವಿಡ್ ಕಾರಣದಿಂದ ಅನಾಥರಾಗುವ ಅಥವಾ ತೊಂದರೆಗೊಳಗಾಗುವ ಮಕ್ಕಳನ್ನು ಏಕಾಏಕಿ ದತ್ತು ಕೊಡುವ ಅಥವಾ ಯಾವುದೋ ಸಂಸ್ಥೆಗೆ ಸೇರಿಸಿಬಿಡುವ ಯೋಚನೆ ಸಲ್ಲದು

• ಎನ್.ವಿ.ವಾಸುದೇವ ಶರ್ಮಾ

'ಕೋವಿಡ್‌ನಿಂದ ಮೃತಪಟ್ಟ ಪೋಷಕರ ಮಕ್ಕಳನ್ನು ದತ್ತು ತೆಗೆದುಕೊಳ್ಳುವವರು ಬೇಕಾಗಿದ್ದಾರೆ', 'ಕೋವಿಡ್ ಅನಾಥರಿಗೆ ನೆಲೆ ಕೊಡುವವರು ಮುಂದೆ ಬಂದಲ್ಲಿ ನೀಡಲಾಗುವುದು'- ಇಂತಹ ಸಂದೇಶಗಳು ಎರಡು ವಾರಗಳಿಂದ ವಾಟ್ಸ್‌ಆ್ಯಪ್, ಫೇಸ್‌ಬುಕ್ ಮೊದಲಾದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಇಂತಹ ಸಂದೇಶ ಹೊರಡಿಸಿರುವವರದ್ದು ಸದುದ್ದೇಶವಾಗಿದ್ದರೂ ದತ್ತು ಕಾಯ್ದೆಯ ನಿಯಮಗಳಾಚೆ ಹೀಗೆ ಮಾಡುವುದು ಕಾನೂನುಬಾಹಿರ. ಸ್ವಂತ ಪೋಷಕರೊಡನೆ ಇರಬೇಕು ಇಲ್ಲವೇ ಪರ್ಯಾಯ ಕುಟುಂಬಗಳಲ್ಲಿ ನೆಲೆ ಕಂಡುಕೊಳ್ಳಬೇಕು ಎನ್ನುವುದು ಮಕ್ಕಳ ಹಕ್ಕು. ಹೀಗಾಗಿ ಮಕ್ಕಳು ಅನಾಥರಾದರೆ, ನೆಲೆ ಕಳೆದುಕೊಂಡರೆ ಅಥವಾ ತೊಂದರೆಯಲ್ಲಿದ್ದರೆ ಅಂತಹ ಪರಿಸ್ಥಿತಿಗಳತ್ತ ಗಮನಹರಿಸಲು 'ರಾಷ್ಟ್ರೀಯ ಮಕ್ಕಳ ನೀತಿ- 2013' ಮತ್ತು 'ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ- 2015' ಸ್ಪಷ್ಟವಾದ ವಿಧಿವಿಧಾನಗಳನ್ನು ಸೂಚಿಸಿವೆ. ಇವನ್ನು ಜಾರಿ ಮಾಡಲು ರಾಜ್ಯದಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯ ಮತ್ತು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳು ನಿರತವಾಗಿವೆ.

'ಮಕ್ಕಳು ಕೋವಿಡ್‌ನಿಂದ ನೇರವಾಗಿ ಹಾನಿಗೊಳಗಾಗುತ್ತಿಲ್ಲ, ಬದಲಿಗೆ ಅವರು ಕೋವಿಡ್‌ನ ಪರಿಣಾಮಗಳಿಗೆ ತುತ್ತಾಗಿದ್ದಾರೆ' ಎಂದು ಕಳೆದ ವರ್ಷ ಕೋವಿಡ್- 19ರ ದಾಳಿ ಸಂದರ್ಭದಲ್ಲಿ ವಿಶ್ವಸಂಸ್ಥೆ ಹೇಳಿತ್ತು. ಕೋವಿಡ್ ಸೋಂಕು ಹೆಚ್ಚು ಮಕ್ಕಳನ್ನು ಬಾಧಿಸಿರಲಿಲ್ಲ. ಆದರೆ ಶಾಲೆಗಳು ಮುಚ್ಚಿದ್ದವು, ಆನ್‌ಲೈನ್ ಶಿಕ್ಷಣ ಎಲ್ಲ ಮಕ್ಕಳಿಗೆ ಸಮಾನವಾಗಿ ದೊರಕಿರಲಿಲ್ಲ, ಉದ್ಯೋಗ ಕಳೆದುಕೊಂಡು ಅಥವಾ ವ್ಯಾಪಾರವಿಲ್ಲದೆ ನಲುಗಿದ ಬಡ ಮತ್ತು ಅಸಂಘಟಿತ ಕಾರ್ಮಿಕರ ಕುಟುಂಬಗಳ ಮಕ್ಕಳ ಬದುಕು ಅತಂತ್ರವಾಗಿತ್ತು. ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ವಾಪಸ್ ಹೊರಟಾಗ ಮಕ್ಕಳ ಆರೋಗ್ಯ, ಪೌಷ್ಟಿಕಾಂಶ, ರಕ್ಷಣೆ ದೊಡ್ಡ ಪ್ರಶ್ನೆಯಾಗಿ ಕಾಡಿತ್ತು. ಇವೆಲ್ಲದರ ಜೊತೆಯಲ್ಲಿ ಬಾಲ್ಯವಿವಾಹದ ಪ್ರಕರಣಗಳು, ಮಕ್ಕಳ ದುಡಿಮೆ, ವ್ಯಾಪಾರದಲ್ಲಿ ತೊಡಗಿಕೊಂಡದ್ದು ಸುದ್ದಿಯಾಗಿದ್ದವು.

ಈ ಕಾರಣದಿಂದ ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ನಡೆಸುವ ಮಕ್ಕಳ ನಿಲಯಗಳಲ್ಲಿದ್ದ ಸಾವಿರಾರು ಮಕ್ಕಳ ಆರೋಗ್ಯ, ಬದುಕು, ರಕ್ಷಣೆಗಾಗಿ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ನಿರ್ದೇಶನಗಳನ್ನು ನೀಡಿತ್ತು. ತೊಂದರೆಗೀಡಾದ ಮಕ್ಕಳಿಗೆ ನೆರವಾಗಲು ಅನೇಕ ಸ್ವಯಂಸೇವಾ ಸಂಸ್ಥೆಗಳು ಮತ್ತು ಸರ್ಕಾರದ ಅಂಗಸಂಸ್ಥೆಗಳು ಮುಂದಾಗಿದ್ದವು. ಯುನಿಸೆಫ್, ಚೈಲ್ಡ್‌ಲೈನ್ 1098 ಮತ್ತು ನಿಮ್ಹಾನ್ಸ್ ಜೊತೆಗೂಡಿ, ಕೊರೊನಾದಿಂದ ಭಯಭೀತರಾದ ಮಕ್ಕಳಿಗೆ ಸಾಂತ್ವನ ಹೇಳಲು ಬೇಕಾದ ವಿಧಿವಿಧಾನಗಳ ಮಾಹಿತಿಯ ಕೈಪಿಡಿಗಳನ್ನು ಪೋಷಕರು ಮತ್ತು ಪಾಲಕರಿಗಾಗಿ ಹೊರತಂದಿದ್ದವು. ಅವು ಈಗಲೂ ಬಳಸಲು ಯೋಗ್ಯವಾಗಿವೆ.

ಈಗ ಮತ್ತೊಮ್ಮೆ ನಾವು ಕೋವಿಡ್‌ನ ಪಿಡುಗನ್ನು ಮಕ್ಕಳ ಹಿತದ ದೃಷ್ಟಿಕೋನದಿಂದ ಎದುರಿಸಲು ಸಜ್ಜಾಗಬೇಕಿದೆ. ಈ ಬಾರಿ ಮಕ್ಕಳಿಗೂ ಕೋವಿಡ್ ಸೋಂಕುಂಟಾಗಿದೆ ಮತ್ತು ಮಕ್ಕಳ ಸಾವಿನ ಪ್ರಕರಣಗಳು ವರದಿಯಾಗುತ್ತಿವೆ. ಜೊತೆಗೆ ಕೋವಿಡ್‌ನಿಂದಾಗಿ ಪೋಷಕರ ಸಾವು ಅಥವಾ ಪೋಷಕರು ಆಸ್ಪತ್ರೆಯಲ್ಲಿದ್ದು ಮಕ್ಕಳನ್ನು ನೋಡಿಕೊಳ್ಳಲು ಯಾರೂ ಇಲ್ಲದಂತಹ ಪರಿಸ್ಥಿತಿಗಳು ಹೆಚ್ಚಾಗುತ್ತಿವೆ.

ಯಾರಿಗೇ ಆಗಲಿ ಪೋಷಣೆ ಮತ್ತು ರಕ್ಷಣೆ ಅವಶ್ಯಕತೆಯಿರುವ ಮಕ್ಕಳ ಪರಿಸ್ಥಿತಿ ಕುರಿತು ತಿಳಿದಲ್ಲಿ, ಅವರು ತಕ್ಷಣ ಚೈಲ್ಡ್‌ಲೈನ್ 1098ಕ್ಕೆ ಕರೆ ಮಾಡಿ ತಿಳಿಸಬೇಕು. ಚೈಲ್ಡ್‌ಲೈನ್ ಸಿಬ್ಬಂದಿಯು ಮಕ್ಕಳ ವಯೋಮಾನ, ಅವರ ಸ್ಥಿತಿಗತಿ ಎಲ್ಲವನ್ನೂ ಗಮನಿಸಿ, ಅವರಿಗೆ ಬೇಕಿರುವ ಸಹಾಯದ ಕುರಿತು ವರದಿ ಮಾಡುತ್ತಾರೆ. ಆ ಮಕ್ಕಳಿಗೆ ಶೀಘ್ರವಾಗಿ ಸೂಕ್ತ ವ್ಯವಸ್ಥೆ ಮಾಡಲು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯುಸಿ) ಮತ್ತು ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕಗಳು (ಡಿಸಿಪಿಯು) ಮುಂದಾಗುತ್ತವೆ.



ಬಹಳಷ್ಟು ಬಾರಿ ಚಿಕ್ಕಪುಟ್ಟ ಸಹಾಯ, ಆಪ್ತ ಸಮಾಲೋಚನೆ ನೀಡಿ ಮಕ್ಕಳ ಸಮಸ್ಯೆ ಬಗೆಹರಿಸಬಹುದು. ಎಲ್ಲ ಮಕ್ಕಳನ್ನೂ ದತ್ತು ನೀಡಬೇಕಿಲ್ಲ ಅಥವಾ ಸಂಸ್ಥೆಗಳಲ್ಲಿ ಇರಿಸಬೇಕಿಲ್ಲ. ಇಂತಹ ಪರಿಸ್ಥಿತಿಯಲ್ಲಿರುವ ಮಕ್ಕಳು ಕೇವಲ ಆಹಾರ, ಶಿಕ್ಷಣ, ಆಟೋಟಗಳಿಂದ ವಂಚಿತರಾಗಿಲ್ಲ. ಮೊದಮೊದಲು ಬಹಳಷ್ಟು ಮಕ್ಕಳು ದೀರ್ಘವಾದ ರಜೆ ಎಂದುಕೊಂಡರೂ ಸಹವರ್ತಿಗಳು, ಸ್ನೇಹಿತರು ಇಲ್ಲದ ಒಂಟಿತನ ಎದುರಿಸಲಾರಂಭಿಸಿದರು. ಪಾಠದ ಸಮಯ, ಅಧ್ಯಯನ ಮತ್ತು ಪರೀಕ್ಷೆಗಳ ಆವರ್ತನಗಳ ಪ್ರಾಮುಖ್ಯವನ್ನು ಕಳೆದುಕೊಂಡ ಒತ್ತಡವನ್ನು ಅನುಭವಿಸಲಾರಂಭಿಸಿದರು.

ಕಳೆದ ಒಂದು ವರ್ಷದಲ್ಲಿ ಬಹಳಷ್ಟು ಪೋಷಕರು ದುಡಿಮೆ, ಸಂಪಾದನೆ ಕಳೆದುಕೊಂಡಿದ್ದಾರೆ. ಒಂದಷ್ಟು ಕುಟುಂಬಗಳಲ್ಲಿ ಮನಸ್ತಾಪ, ಜಗಳ, ಹೊಡೆದಾಟಗಳು, ಕೆಲವು ಕುಟುಂಬಗಳಲ್ಲಿ ತಂದೆಯೋ ತಾಯಿಯೋ ಕುಟುಂಬ ತೊರೆದು ಹೋಗಿರಬಹುದು, ಇಲ್ಲವೇ ಮಕ್ಕಳನ್ನೇ ಎಲ್ಲಿಯೋ ಬಿಟ್ಟು ಹೋಗಿರಬಹುದು. ಇವೆಲ್ಲ ಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ. ಇಂತಹ ಸಂದರ್ಭಗಳಲ್ಲಿ ಮಕ್ಕಳನ್ನು ಹಿಂದೆ ಮುಂದೆ ನೋಡದೆ ಸಂಬಂಧವಿಲ್ಲದ ವ್ಯಕ್ತಿಗಳಿಗೆ, ಕುಟುಂಬಗಳಿಗೆ ಅಥವಾ ಯಾವುದೋ ಸಂಸ್ಥೆಗೆ ಸೇರಿಸಿಬಿಡುವುದು ಸೂಕ್ತವಲ್ಲ. ಅದು ಮಕ್ಕಳನ್ನು ಇನ್ನಷ್ಟು ಸಂಕಷ್ಟಗಳಿಗೆ ದೂಡುವ ಅಪಾಯವಿರುತ್ತದೆ. ಬದಲಿಗೆ ಚೈಲ್ಡ್‌ಲೈನ್ 1098 ಮತ್ತು ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕಗಳನ್ನು ಸಂಪರ್ಕಿಸುವುದು ವಿಹಿತ.

ಲೇಖಕ: ಕಾರ್ಯಕಾರಿ ನಿರ್ದೇಶಕ, ಚೈಲ್ಡ್‌ರೈಟ್ಸ್‌ಟ್ರಸ್ಟ್ (ಸಿಆರ್‌ಟಿ)

ವಾಚಕರ ವಾಣಿ

ಸುತ್ತೋಲೆ ಇಂಗ್ಲಿಷ್‌ನಲ್ಲೇ ಯಾಕೆ?

ತಾನು ಹೊರಡಿಸುವ ನಿರ್ದೇಶನಗಳು, ಮಾರ್ಗಸೂಚಿಗಳನ್ನು ರಾಜ್ಯದ ಅಧಿಕೃತ ಭಾಷೆಯಾದ ಕನ್ನಡದಲ್ಲಿ ಹೊರಡಿಸಲು ಸರ್ಕಾರಕ್ಕೆ ಆಗುವುದಿಲ್ಲವೇ? ಯಾವುದೇ ವಿಚಾರ ಅಥವಾ ಪ್ರಮುಖ ಪ್ರಕಟಣೆಯ ಸುತ್ತೋಲೆಯನ್ನು ಪ್ರತೀ ಬಾರಿಯೂ ಇಂಗ್ಲಿಷ್‌ನಲ್ಲಿ ಪ್ರಕಟಿಸುವುದು ಎಷ್ಟು ಸರಿ? ಜನಸಾಮಾನ್ಯರಿಗೆ ಇಂಗ್ಲಿಷ್ ಭಾಷೆಯು ಕನ್ನಡದಷ್ಟು ಸರಳವಾಗಿ ಅರ್ಥವಾಗುವುದೇ? ಜವಾಬ್ದಾರಿಯುತ ಸ್ಥಾನದಲ್ಲಿರುವ ಆಡಳಿತಾಧಿಕಾರಿಗಳು ಜನರ ಸೂಕ್ಷ್ಮ ಸಂವೇದನೆಗಳು ಹಾಗೂ ಕುಂದುಕೊರತೆಗಳಿಗೆ ಸಂಬಂಧಿಸಿದ ಸುತ್ತೋಲೆಗಳನ್ನು ಇನ್ನಾದರೂ ಕನ್ನಡದಲ್ಲಿ ಪ್ರಕಟಿಸಿ ಜನಸ್ನೇಹಿಯಾಗಿ ಕಾರ್ಯ ನಿರ್ವಹಿಸಬೇಕಿದೆ.

ಅನಿಲ್ ಕುಮಾರ್, ನಂಜನಗೂಡು

ಕ್ಯೂ ಎನ್ನುವ ಸಂಸ್ಕೃತಿ

ಲಸಿಕೆಗಾಗಿ ಜನರು ಗುಂಪಾಗಿ ನಿಂತ ಚಿತ್ರ (ಪ್ರ.ವಾ., ಮೇ 8) ಪ್ರಕಟವಾಗಿದೆ. ನಮಗೆ ನಾಲ್ಕನೇ ತರಗತಿಯಲ್ಲಿ 'ಸರತಿಯ ಸಾಲು' ಎನ್ನುವ ಒಂದು ಪಾಠ ಇತ್ತು. ನಮ್ಮ ದೇಶದಲ್ಲಿ ಕ್ಯೂ ಅಂದರೆ ಒಬ್ಬರ ಹಿಂದೆ ಒಬ್ಬರು ನಿಲ್ಲದೆ ಒಂದು ಗುಂಪಾಗಿ ನಿಂತಿರುತ್ತಾರೆ. ಬ್ಯಾಂಕುಗಳಲ್ಲಿ ಟೋಕನ್ ವ್ಯವಸ್ಥೆ ಇತ್ತು. ಆನಂತರ ಕೆಲವು ಬ್ಯಾಂಕುಗಳಲ್ಲಿ ಅದು ಏಕೋ ಮಾಯವಾಯಿತು.

ನಾನು ಕೆಲವು ತಿಂಗಳ ಹಿಂದೆ ಕೋವಿಡ್ ಪರೀಕ್ಷೆಗಾಗಿ ಜಿಲ್ಲಾ ಆಸ್ಪತ್ರೆಗೆ ಹೋಗಿದ್ದೆ. ಮುಂದಿನವರಿಂದ ಅಂತರ ಕಾಯ್ದುಕೊಂಡು ದೂರ ನಿಂತೆ. ನಡುವೆ ಇದ್ದ ಜಾಗದಲ್ಲಿ ಬೇರೆಯವರು ಬಂದು ತೂರಿಕೊಳ್ಳುತ್ತಿದ್ದರು. ಹಿಂದೆ ಇದ್ದವರು ಕೆಲವರು ನಿಮ್ಮನ್ನು ಮುಂದಕ್ಕೆ ತಳ್ಳುತ್ತಾರೆ ಇಲ್ಲವೇ ಪಕ್ಕಕ್ಕೆ ಬಂದು ನಿಲ್ಲುತ್ತಾರೆ. ಕೆಲವು ಸಂಸ್ಕೃತಿಗಳನ್ನು ನಮ್ಮ ಜನ ಕಲಿಯಲೇ ಇಲ್ಲ.

ಪ್ರೊ. ಶಶಿಧರ್ ಪಾಟೀಲ್, ಬಾಗಲಕೋಟೆ

ಮನೆ ಬಾಗಿಲಿಗೆ ದಿನಸಿ ವಿತರಿಸಿ

ಹಿಂದೆ ವಾರಾಂತ್ಯ ಕರ್ಫ್ಯೂ ವಿಧಿಸಿದ್ದಕ್ಕೂ ಈಗ ವಿಧಿಸಿರುವ ಲಾಕ್‌ಡೌನ್‌ಗೂ ಅಂತಹ ವ್ಯತ್ಯಾಸಗಳೇನೂ ಕಾಣಿಸುತ್ತಿಲ್ಲ. ತಳ್ಳುಗಾಡಿಗಳಲ್ಲಿ ತರಕಾರಿ, ಹಣ್ಣು ಮಾರಾಟ ಮಾಡಲು ಅವಕಾಶ ಮಾಡಿರುವುದೇನೊ ಸರಿಯಾಗಿದೆ. ಅದರಂತೆಯೇ ಆಯಾ ವಾರ್ಡ್‌ಗಳಿಗೆ ತಕ್ಕಂತೆ ಕಿರಾಣಿ ಸಾಮಾನುಗಳನ್ನೂ ಲಾರಿ ಅಥವಾ ಸರ್ಕಾರಿ ಬಸ್ಸುಗಳ ಮುಖಾಂತರ ಮನೆ ಬಾಗಿಲಿಗೆ ತಂದು ಮಾರಲು ಅವಕಾಶ ಕಲ್ಪಿಸಿದರೆ ಅದರಿಂದ ಜನ ತಮ್ಮ ತಮ್ಮ ಮನೆಯ ಮುಂದೆಯೇ ದಿನಸಿ ಸಾಮಾನುಗಳನ್ನು ಖರೀದಿಸಬಹುದು. ಇದರಿಂದ ಬೆಳಿಗ್ಗೆ 6ರಿಂದ 10 ಗಂಟೆಯವರೆಗಿನ ಅವಧಿಯಲ್ಲಿ ಸಾರ್ವಜನಿಕರು ವಸ್ತುಗಳನ್ನು ಖರೀದಿಸಲು ಗುಂಪುಗೂಡುವುದು ತಪ್ಪುತ್ತದೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚಿಸಲಿ.

ಇಂದಿರಾ ಶ್ರೀಧರ್, ಮಳಲಕೆರೆ

ಡಬಲ್ ಎಂಜಿನ್ ಎಂಬ ಡಬಲ್ ಟ್ರಬಲ್

ಪಶ್ಚಿಮ ಬಂಗಾಳದ ಚುನಾವಣಾ ಭಾಷಣಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಹೋದಲ್ಲೆಲ್ಲ 'ಡಬಲ್ ಎಂಜಿನ್ ಆಡಳಿತ ಬರಲಿದೆ' ಎಂದು ಪದೇ ಪದೇ ಹೇಳುತ್ತಿದ್ದರು. ಅಂದರೆ, ಕೇಂದ್ರದಲ್ಲೂ ಬಿಜೆಪಿ, ರಾಜ್ಯದಲ್ಲೂ ಬಿಜೆಪಿ ನೇತೃತ್ವದ ಸರ್ಕಾರವೇ ಬಂದರೆ ಅಭಿವೃದ್ಧಿಯ ವೇಗ ಇಮ್ಮಡಿ ಆಗುತ್ತದೆ ಎಂಬ ಅರ್ಥ ಅವರ ಮಾತಿನಲ್ಲಿತ್ತು. ನಮ್ಮ ಕರ್ನಾಟಕದಲ್ಲಿ 'ಡಬಲ್ ಎಂಜಿನ್' ಆಡಳಿತದ ವೈಖರಿಯನ್ನು ನಾವು ನೋಡುತ್ತಿದ್ದೇವೆ. ನೆರೆ ಪರಿಹಾರಕ್ಕೆ ಹಣ ಬೇಕೆಂದು ಕೋರಿದರೆ ಅಥವಾ ಜಿಎಸ್‌ಟಿಯಲ್ಲಿ ನ್ಯಾಯಯುತ ಪಾಲು ಕೊಡಿ ಎಂದು ಗೋಗರೆದರೆ ಕೇಳಿದ್ದರ ಕಾಲು ಪಾಲೂ ಸಿಗುತ್ತಿಲ್ಲ. ಈಗ ಆಮ್ಲಜನಕದ ಸರದಿ. ಇವನ್ನೆಲ್ಲ ನೋಡಿದರೆ, ರಾಜ್ಯದ ಅಭಿವೃದ್ಧಿಯ ರೈಲನ್ನು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಈ ಎರಡು ಎಂಜಿನ್‌ಗಳು ಎಳೆಯುತ್ತಿವೆಯೋ ಅನ್ನಿಸುತ್ತದೆ.

ಎನ್.ಪಿ.ನಾಗೇಂದ್ರ ಪ್ರಸಾದ್, ಬಿಡದಿ

ಕಿವಿ ಪಾವನಗೊಳಿಸುವ ಸಚಿವರ ನುಡಿಮುತ್ತು!

'ಜಗವೆಲ್ಲ ನಗುತಿರಬೇಕು, ಆಗ ನಾ ನಗಬೇಕು'- ಯಾವ ಪುಣ್ಯಾತ್ಮನೋ ಆಡಿದ ಈ ನುಡಿಯು ಸಚಿವ ಉಮೇಶ ಕತ್ತಿ ಅವರು ರಬಕವಿ/ ಬನಹಟ್ಟಿಯಲ್ಲಿ ಖಾಸಗಿ ವೈದ್ಯರ ಸಭೆಯಲ್ಲಿ ಈಗ ಉದುರಿಸಿರುವ ನುಡಿಮುತ್ತುಗಳನ್ನು ಓದಿದಾಗ (ಪ್ರ.ವಾ. ಮೇ 9) ನೆನಪಿಗೆ ಬರುತ್ತಿದೆ. ಆಮ್ಲಜನಕ ಸಾಂದ್ರಕ ಯಂತ್ರವನ್ನು ಸರ್ಕಾರಿ ಆಸ್ಪತ್ರೆಗೆ ಕೊಡುಗೆಯಾಗಿ ನೀಡಿರುವುದನ್ನು ಪ್ರಸ್ತಾಪಿಸಿ ಸ್ಥಳೀಯ ವೈದ್ಯ ರವಿ ಜಮಖಂಡಿ ಅವರು, 'ಇಂತಹ ಇನ್ನಷ್ಟು ಯಂತ್ರಗಳನ್ನು ಸರ್ಕಾರವು ತಾಲ್ಲೂಕಿಗೆ ನೀಡಿದರೆ ಈ ಭಾಗದ ರೋಗಿಗಳಿಗೆ ಅನುಕೂಲವಾಗುತ್ತದೆ' ಎಂದು ಮನವಿ ಮಾಡಿದ್ದರು. ಇದಕ್ಕೆ ನಮ್ಮ ಸಚಿವರು 'ಕೋವಿಡ್ ಮೂರನೆಯ ಅಲೆ ಬಂದಾಗ ನೋಡೋಣ' ಎಂದು ತಣ್ಣನೆ ಪ್ರತಿಕ್ರಿಯಿಸಿದರು.

ಎರಡನೇ ಅಲೆಯ ಹೊಡೆತವನ್ನು ತಡೆಯಲು ಸರ್ಕಾರ ಎಷ್ಟು ವಿಚಕ್ಷಣೆಯಿಂದ ಸಿದ್ಧತೆ ಮಾಡಿಕೊಂಡಿತ್ತು ಎನ್ನುವುದಕ್ಕೆ ರಾಜ್ಯದಲ್ಲಿ ಜನರನ್ನು ದಿಕ್ಕೆಡಿಸುತ್ತ ಏರುತ್ತಿರುವ ಕೋವಿಡ್ ಪೀಡಿತರ ಸಂಖ್ಯೆ ಮತ್ತು ಸಾವಿನ ಸಂಖ್ಯೆಗಳೇ ವಿಶ್ವಾಸಾರ್ಹ ಮಾಪಕಗಳಾಗಿವೆ. ಮೂರನೆಯ ಅಲೆ ಅಪ್ಪಳಿಸುವುದೂ ನಿಶ್ಚಿತವೆಂದು ತಜ್ಞರು ಈಗಾಗಲೇ ಎಚ್ಚರಿಸಿದ್ದಾರೆ. ಹೀಗಿರುವಾಗ, ಮುಂಜಾಗ್ರತಾ ಕ್ರಮವಾಗಿ ಇನ್ನಷ್ಟು ಯಂತ್ರಗಳ ಸಂಗ್ರಹದ ಅಗತ್ಯವನ್ನು ವೈದ್ಯರೊಬ್ಬರು ಹೇಳಿದಾಗ, ಸಚಿವರ ನಿಷ್ಕಾಳಜಿ ಖಂಡನಾರ್ಹ. ಇಷ್ಟೇ ಸಾಲದೆಂಬಂತೆ ಸಚಿವರ ಮಾತನ್ನು ಕೇಳಿ ಡಾಕ್ಟರ್ ರವಿ, 'ಆಗ ನಾವು ಉಳಿದಿರುತ್ತೇವೋ ಇಲ್ಲವೋ' ಎಂದು ಉದ್ಗರಿಸಿದ್ದಕ್ಕೆ ಸಚಿವ ಕತ್ತಿ, 'ನೀವು ಉಳಿಯುವಿರೋ ಇಲ್ಲವೋ ಗೊತ್ತಿಲ್ಲ, ನಾನಂತೂ ಉಳಿಯಬೇಕು' ಎಂದು ವಿವೇಕವಿಲ್ಲದ ಉದ್ಧಟತನದ ಮಾತನ್ನಾಡಿದ್ದಾರೆ. ಇಂತಹ ಸ್ವಾರ್ಥಿಗಳು ನಮ್ಮ ನಾಯಕರಾಗಿ ಬಂದಾಗ, ಜನರು ದುರ್ಗತಿಯನ್ನಲ್ಲದೆ ಇನ್ನೇನನ್ನು ಅನುಭವಿಸಿಯಾರು?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಮುಂಬೈನಲ್ಲಿ ಧೂಮೀಕರಣದ ಮೂಲಕ ಸೋಂಕು ನಿರ್ಮೂಲನೆ ಯತ್ನ

ದಾರಿ ತೋರಿದ ಮಾದರಿ

ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯು ದೇಶವೇ ತತ್ತರಗೊಳ್ಳುವಂತೆ ಮಾಡಿದೆ. ಹಲವೆಡೆ ಪರಿಸ್ಥಿತಿ ಕೈಮೀರಿ ಹೋಗಿದೆ. ಆದರೆ, ಕೆಲವೆಡೆ ಅಧಿಕಾರಿಗಳು ಮತ್ತು ರಾಜಕೀಯ ಮುಖಂಡರ ದಕ್ಷ ಕಾರ್ಯನಿರ್ವಹಣೆಯಿಂದಾಗಿ ಬೇರೆಡೆಯೂ ಅನುಸರಿಸಬಹುದಾದ ಕೋವಿಡ್ ನಿರ್ವಹಣೆಯ ಉತ್ತಮ ಮಾದರಿಗಳು ಸೃಷ್ಟಿ ಆಗಿವೆ. ಅಂತಹ ಕೆಲವು ಮಾದರಿಗಳು ಇಲ್ಲಿವೆ

ಮುಂಬೈ ಮಹಾನಗರದಲ್ಲಿ ಕಳೆದ 20 ದಿನಗಳಲ್ಲಿ ಕೋವಿಡ್ ರೋಗಿಗಳ ಪ್ರಮಾಣ ಶೇ 50ರಷ್ಟು ಕಡಿಮೆಯಾಗಿದೆ. ಇದಕ್ಕೆ ಕಾರಣ ಮುಂಬೈ ಮಹಾನಗರಪಾಲಿಕೆಯ ಆಯುಕ್ತ ಇಕ್ಬಾಲ್‌ಸಿಂಗ್ ಚಹಲ್ ಅವರ ವ್ಯವಸ್ಥಿತ ನಿರ್ವಹಣೆ ಹಾಗೂ ಅವರಿಗೆ ಅಲ್ಲಿನ ರಾಜಕೀಯ ವ್ಯವಸ್ಥೆಯು ನೀಡಿದ ಬೆಂಬಲ ಎಂದು ವಿಶ್ಲೇಷಿಸಲಾಗಿದೆ.


ಇಕ್ಬಾಲ್‌ಸಿಂಗ್ ಚಹಲ್

ಮುಂಬೈಯ ಆಸ್ಪತ್ರೆಗಳಿಗೆ, ವಿಶೇಷವಾಗಿ ಸರ್ಕಾರಿ ಆಸ್ಪತ್ರೆಗಳಿಗೆ ರೆಮ್‌ಡಿಸಿವಿರ್‌ನಂಥ ಔಷಧಗಳು ಹಾಗೂ ಸಾಕಷ್ಟು ಪ್ರಮಾಣದಲ್ಲಿ ಆಮ್ಲಜನಕ ಸರಬರಾಜಾಗುವಂತೆ ನೋಡಿಕೊಳ್ಳಲು ಚಹಲ್ ಅವರು ಕೆಲವು ಕಠಿಣ ನಿರ್ಧಾರಗಳನ್ನು ಕೈಗೊಳ್ಳಬೇಕಾಗಿ ಬಂದಿತ್ತು, ಅಂಥ ಸಂದರ್ಭದಲ್ಲಿ ಅಲ್ಲಿನ ರಾಜಕೀಯ ವ್ಯವಸ್ಥೆಯು ಅವರ ಬೆನ್ನಿಗೆ ನಿಂತಿತು. ಇದರಿಂದಾಗಿ ಮುಂಬೈಯ ಜನರು ಹಾಸಿಗೆ ಅಥವಾ ಆಮ್ಲಜನಕದ ಸಿಲಿಂಡರ್‌ಗಾಗಿ ಅಲೆದಾಡುವುದು ತಪ್ಪಿದೆ. ಮುಂಬೈ ಮಾದರಿಯನ್ನು ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು ಶ್ಲಾಘಿಸಿದೆ.

ಮುಂಬೈಯಲ್ಲಿ ಮಾಡಿದ್ದೇನು?: ಕೋವಿಡ್ ವಿರುದ್ಧದ ಹೋರಾಟವನ್ನು ವಿಕೇಂದ್ರೀಕರಣಗೊಳಿಸಿದ್ದೇ ಕೋವಿಡ್ ವಿರುದ್ಧದ ಹೋರಾಟದಲ್ಲಿ ಗೆಲುವು ಸಾಧಿಸಲು ಕಾರಣ ಎನ್ನುತ್ತಾರೆ ಚಹಲ್. ಸೇನಾ ಹಿನ್ನೆಲೆಯಿಂದ ಬಂದ ಚಹಲ್ ಅವರು ವೃತ್ತಿಯಿಂದ ಎಂಜಿನಿಯರ್. ಮ್ಯಾರಥಾನ್ ಓಟಗಾರರೂ ಹೌದು. ಕೋವಿಡ್ ವಿರುದ್ಧದ ಅವರ ಹೋರಾಟಕ್ಕೆ 'ವಾರ್ ರೂಮ್' ಕೇಂದ್ರವಾಗಿತ್ತು.

ಆತಂಕ ನಿವಾರಣೆ, ವಾರ್ ರೂಮ್‌ಗಳ ವಿಕೇಂದ್ರೀಕರಣ ಹಾಗೂ ಮೂಲ ಸೌಲಭ್ಯ ಸೃಷ್ಟಿ... ಈ ಮೂರು ಗುರಿಗಳನ್ನಿಟ್ಟುಕೊಂಡು ಅವರು ಹೋರಾಟ ಆರಂಭಿಸಿದರು.

ಆತಂಕ ನಿವಾರಣೆ: ಮುಂಬೈಯ ಪ್ರಯೋಗಾಲಯಗಳು ಕೋವಿಡ್ ಪರೀಕ್ಷೆಗಳ ಫಲಿತಾಂಶವನ್ನು ನೇರವಾಗಿ ರೋಗಿಗಳಿಗೆ ನೀಡುತ್ತಿದ್ದವು. ಬೆಳಿಗ್ಗೆ ಮಾದರಿಗಳನ್ನು ನೀಡಿದರೆ, ಸಂಜೆಯ ವೇಳೆಗೆ ಫಲಿತಾಂಶ ಬರುತ್ತಿತ್ತು, ಅದು ರೋಗಿಗಳ ಕೈ ಸೇರುತ್ತಿದ್ದಂತೆ ರಾತ್ರಿ 8 ಗಂಟೆಯ ವೇಳೆಗೆ ನಗರಪಾಲಿಕೆಯ ನಿಯಂತ್ರಣ ಕೊಠಡಿಗೆ ದೂರವಾಣಿ ಕರೆಗಳ ಸುರಿಮಳೆಯಾಗುತ್ತಿತ್ತು. ಪ್ರತಿನಿತ್ಯ ಸುಮಾರು 10 ಸಾವಿರ ಜನರು ಹಾಸಿಗೆಗಾಗಿ ಓಡಾಡುತ್ತಿದ್ದರು. ಇದನ್ನು ಗಮನಿಸಿದ ಚಹಲ್, ಈ ವ್ಯವಸ್ಥೆಯನ್ನು ಬದಲಿಸಿದರು.

ಕೋವಿಡ್ ಪರೀಕ್ಷೆಯ ಫಲಿತಾಂಶವನ್ನು ನೇರವಾಗಿ ರೋಗಿಗಳಿಗೆ ನೀಡುವಂತಿಲ್ಲ. ಕಡ್ಡಾಯವಾಗಿ ಅದನ್ನು ಬಿಎಂಸಿ ಜತೆ ಮಾತ್ರ ಹಂಚಿಕೊಳ್ಳಬೇಕು ಎಂದು ಪ್ರಯೋಗಾಲಯಗಳಿಗೆ ಸೂಚನೆ ನೀಡಲಾಯಿತು. ಜತೆಗೆ ಕೇಂದ್ರೀಯ ನಿಯಂತ್ರಣ ಕೊಠಡಿಯನ್ನು ಮುಚ್ಚಿ, 24 ಗಂಟೆಯೂ ಕೆಲಸ ಮಾಡುವ 'ವಾರ್ ರೂಮ್' ಆರಂಭಿಸಲಾಯಿತು.

ವಾರ್ಡ್‌ಗೆ ಒಂದರಂತೆ ವಾರ್ ರೂಮ್ ಸ್ಥಾಪನೆಯಾಯಿತು. ಪ್ರತಿ ವಾರ್‌ರೂಮ್‌ಗೆ 30 ದೂರವಾಣಿ ಸಂಪರ್ಕ, 10 ಮಂದಿ ದೂರವಾಣಿ ಕರೆ ನಿರ್ವಾಹಕರು, 10 ಮಂದಿ ವೈದ್ಯರು, ಅಗತ್ಯವಿರುವಷ್ಟು ವೈದ್ಯಕೀಯ ಸಿಬ್ಬಂದಿ ಹಾಗೂ 10 ಆಂಬುಲೆನ್ಸ್‌ಗಳನ್ನು ಒದಗಿಸಲಾಯಿತು. ರೋಗಿಗಳ ಪರೀಕ್ಷಾ ಫಲಿತಾಂಶವನ್ನು ಮರುದಿನ ಬೆಳಿಗ್ಗೆ 6 ಗಂಟೆಯ ವೇಳೆಗೆ ಅಯಾ ವಾರ್ಡ್‌ನ ವಾರ್ ರೂಮ್‌ಗಳಿಗೆ ರವಾನಿಸುವ ವ್ಯವಸ್ಥೆಯಾಯಿತು. ಪ್ರತಿ ವಾರ್ಡ್‌ನಲ್ಲಿ ಲಭ್ಯವಿರುವ ಹಾಸಿಗೆಗಳು ಹಾಗೂ ಇತರ ಮಾಹಿತಿಯನ್ನು ನೀಡುವಂಥ ತಲಾ 10 ಡ್ಯಾಶ್‌ಬೋರ್ಡ್ ನಿರ್ಮಿಸಲಾಯಿತು.

ವಾರ್‌ರೂಮ್‌ಗಳ ನಿರ್ವಹಣೆಗೆ ಮಾಸಿಕ ಕನಿಷ್ಠ ₹50,000 ವೇತನ ನೀಡಿ ವೈದ್ಯರು ಹಾಗೂ ಇತರ ಸಿಬ್ಬಂದಿಯನ್ನು ನೇಮಕ ಮಾಡಲಾಯಿತು. ಅವರಿಗೆ ಸಮೀಪದ ಹೋಟೆಲ್‌ನಲ್ಲಿ ವಸತಿ ವ್ಯವಸ್ಥೆಯನ್ನೂ ಮಾಡಲಾಯಿತು.

800 ಎಸ್‌ಯುವಿಗಳನ್ನು ಪಡೆದು, ಆಂಬುಲೆನ್ಸ್ ಆಗಿ ಪರಿವರ್ತಿಸಲಾಯಿತು. ಈ ಆಂಬುಲೆನ್ಸ್‌ಗಳ ಟ್ರ್ಯಾಕಿಂಗ್ ಹಾಗೂ ನಿರ್ವಹಣೆಗಾಗಿ ಸಾಫ್ಟ್‌ವೇರ್‌ನ ನೆರವು ನೀಡುವಂತೆ ಉಬರ್ ಸಂಸ್ಥೆಯನ್ನು ವಿನಂತಿಸಲಾಯಿತು.

ಎರಡನೇ ಅಲೆಯು ತೀವ್ರ ಸ್ವರೂಪ ಪಡೆಯಲು ಆರಂಭಿಸುತ್ತಿದ್ದಂತೆಯೇ ಎಲ್ಲಾ ಖಾಸಗಿ ಆಸ್ಪತ್ರೆಗಳಿಗೆ ನಿಯಮಗಳನ್ನು ಜಾರಿ ಮಾಡಿದ ಸರ್ಕಾರವು ಕೋವಿಡ್ ಚಿಕಿತ್ಸೆಯ ಗರಿಷ್ಠ ದರವನ್ನು ನಿಗದಿ ಮಾಡಿತ್ತು. 172 ಖಾಸಗಿ ಆಸ್ಪತ್ರೆಗಳು ಹಾಗೂ ಬಿಎಂಸಿ ರೂಪಿಸಿದ ವಿಶೇಷ ಕೋವಿಡ್ ಚಿಕಿತ್ಸಾ ಸೌಲಭ್ಯಗಳ ಸಮಗ್ರ ಮಾಹಿತಿ ನೀಡುವ ಡ್ಯಾಶ್‌ಬೋರ್ಡ್ ಚಹಲ್ ಅವರ ಬಳಿ ಇತ್ತು. ಬಿಎಂಸಿಯ ವಾರ್‌ರೂಮ್ ಮೂಲಕವೇ ಎಲ್ಲಾ ಆಸ್ಪತ್ರೆಗಳಿಗೆ ದಾಖಲಾತಿಗಳನ್ನು ಮಾಡಬೇಕು ಎಂಬ ಸೂಚನೆ ನೀಡಲಾಯಿತು.

ಏಳು ಕಡೆಗಳಲ್ಲಿ ಬಿಎಂಸಿ ಸ್ಥಾಪಿಸಿದ್ದ ಜಂಬೊ ಕೇಂದ್ರಗಳಿಗೆ ರೋಗಿಗಳು ನೇರವಾಗಿ ಬಂದು ದಾಖಲಾಗುವಂಥ ಸೌಲಭ್ಯವನ್ನೂ ನೀಡಲಾಯಿತು. ಸುಮಾರು 20,000 ರೋಗಿಗಳು ಹೀಗೆ ನೇರವಾಗಿ ಬಂದು ಚಿಕಿತ್ಸೆ ಪಡೆದಿದ್ದಾರೆ ಎಂದು ಚಹಲ್ ತಿಳಿಸಿದ್ದಾರೆ.

ಈಗ ಮುಂಬೈ ನಗರದಲ್ಲಿ ಕೋವಿಡ್‌ನ ಮೂರನೇ ಅಲೆಯನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಜುಲೈ ಅಂತ್ಯದ ವೇಳೆಗೆ ಮೂರನೇ ಅಲೆ ಕಾಣಿಸುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

'ಪ್ರಸಕ್ತ ನಮ್ಮಲ್ಲಿ ವೆಂಟಿಲೇಟರ್, ಆಮ್ಲಜನಕ ಸಹಿತವಾದ 2000 ಐಸಿಯು ಹಾಸಿಗೆಗಳೂ ಸೇರಿದಂತೆ ಸುಮಾರು 5,500 ಹಾಸಿಗೆಗಳು ಲಭ್ಯ ಇವೆ. ಇನ್ನೂ ನಾಲ್ಕು ಜಂಬೊ ಚಿಕಿತ್ಸಾ ಕೇಂದ್ರಗಳನ್ನು ತೆರೆಯಲಾಗುತ್ತಿದೆ' ಎಂದು ಚಹಲ್ ತಿಳಿಸಿದ್ದಾರೆ.

ಆಧಾರ: ಪಿಟಿಐ, ರಾಯಿಟರ್ಸ್

ನಂದೂರ್‌ಬಾರ್‌ನ ಆಮ್ಲಜನಕ ನರ್ಸ್

ವೈದ್ಯಕೀಯ ಆಮ್ಲಜನಕದ ತೀವ್ರ ಕೊರತೆಯು ಹಲವು ರಾಜ್ಯಗಳಲ್ಲಿ ಕಳವಳಕಾರಿ ಸ್ಥಿತಿಯನ್ನು ನಿರ್ಮಿಸಿದೆ. ಆದರೆ, ಮಹಾರಾಷ್ಟ್ರದ ನಂದೂರ್‌ಬಾರ್ ಜಿಲ್ಲೆಯಲ್ಲಿ ಇಂತಹ ಬಿಕ್ಕಟ್ಟು ತಲೆದೋರಿಲ್ಲ. ಇದಕ್ಕೆ ಮುಖ್ಯ ಕಾರಣ ಅಲ್ಲಿ ಅನುಷ್ಠಾನಗೊಳಿಸಲಾದ 'ಆಮ್ಲಜನಕ ನರ್ಸ್' ಎಂಬ ಪರಿಕಲ್ಪನೆ.

ನಂದೂರ್‌ಬಾರ್‌ನ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕದ ಅಗತ್ಯ ಇರುವ ರೋಗಿಗಳ ಮೇಲೆ ನಿಗಾ ಇರಿಸಲು ನರ್ಸ್‌ಗಳನ್ನು ನೇಮಿಸಲಾಗಿದೆ. ಪ್ರತಿ 15-20 ರೋಗಿಗಳಿಗೆ ಒಬ್ಬ ನರ್ಸ್ ಅನ್ನು ನೇಮಿಸಲಾಗುತ್ತದೆ. ಆಮ್ಲಜನಕದ ಮೇಲೆ ನಿಗಾ ಇರಿಸುವುದು ಮಾತ್ರ ಈ ನರ್ಸ್‌ಗಳ ಕೆಲಸ. ಅವರು ಒಂದರಿಂದ ಎರಡು ತಾಸಿಗೊಮ್ಮೆ ರೋಗಿಗಳ ಆಮ್ಲಜನಕ ಮಟ್ಟ ಪರೀಕ್ಷಿಸುತ್ತಾರೆ. ಆಮ್ಲಜನಕ ಮಟ್ಟವು ಶೇ 95ಕ್ಕಿಂತ ಮೇಲೆ ಹೋದ ಕೂಡಲೇ ಆಮ್ಲಜನಕದ ಪೂರೈಕೆಯನ್ನು ಅವರು ಕಡಿಮೆ ಮಾಡುತ್ತಾರೆ. ಅದೇ ರೀತಿಯಲ್ಲಿ ಆಮ್ಲಜನಕ ಬೆಂಬಲದಲ್ಲಿ ಇರುವ ರೋಗಿಯ ಆಮ್ಲಜನಕ ಮಟ್ಟವು ಕೆಳಕ್ಕೆ ಇಳಿದರೆ ಅವರ ಪೂರೈಕೆಯನ್ನು ಹೆಚ್ಚಿಸುತ್ತಾರೆ. ಹೀಗೆ ಆಮ್ಲಜನಕ ಪೋಲು ತಡೆಯುವುದರ ಜತೆಗೆ, ಅಗತ್ಯ ಇರುವವರಿಗೆ ಹೆಚ್ಚಿನ ಪ್ರಮಾಣದ ಆಮ್ಲಜನಕ ಪೂರೈಕೆಯೂ ಸಾಧ್ಯವಾಗುತ್ತದೆ.

ರೋಗಿಗಳು ಶೌಚಾಲಯಕ್ಕೆ ಹೋಗುವಾಗ, ಆಹಾರ ಸೇವಿಸುವಾಗ ಆಮ್ಲಜನಕದ ಮಾಸ್ಕ್ ಅನ್ನು ತೆಗೆದಿರಿಸುತ್ತಾರೆ. ಆಗ ಆಮ್ಲಜನಕ ಪೋಲಾಗುತ್ತದೆ. ಆದರೆ, ನರ್ಸ್‌ಗಳು ಅದರ ಮೇಲೆಯೂ ನಿಗಾ ಇರಿಸುತ್ತಾರೆ. ಅಂತಹ ಸಂದರ್ಭದಲ್ಲಿ ಆಮ್ಲಜನಕ ಪೂರೈಕೆಯನ್ನು ನಿಲ್ಲಿಸುತ್ತಾರೆ.

ಈ ವಿಶಿಷ್ಟ ಯೋಜನೆಯನ್ನು ಕಳೆದ ವರ್ಷವೇ ಆರಂಭಿಸಲಾಗಿತ್ತು. ಆದರೆ, ನರ್ಸ್‌ಗಳ ಕೊರತೆಯ ಕಾರಣ ಪೂರ್ಣ ಪ್ರಮಾಣದಲ್ಲಿ ಜಾರಿ ಸಾಧ್ಯವಾಗಿರಲಿಲ್ಲ. ಈ ವರ್ಷ ಇದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿದೆ. ಈ ಕಾರ್ಯತಂತ್ರಕ್ಕೆ ಶ್ಲಾಘನೆ ವ್ಯಕ್ತವಾಗಿದೆ. ಜತೆಗೆ, ಮಹಾರಾಷ್ಟ್ರದ ಎಲ್ಲ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಇದರ ಅನುಷ್ಠಾನಕ್ಕೆ ಆದೇಶ ನೀಡಲಾಗಿದೆ.

ಎರ್ನಾಕುಲಂನ ಆಸ್ಪತ್ರೆ ಹಾಸಿಗೆ ನಿರ್ವಹಣೆ

ದೇಶದ ಹೆಚ್ಚಿನ ಪ್ರಮುಖ ನಗರಗಳಲ್ಲಿ ಕೋವಿಡ್ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಹಾಸಿಗೆಯ ತೀವ್ರ ಕೊರತೆಯಾಗಿದೆ ಮತ್ತು ರೋಗಿಗಳು ಮತ್ತು ಅವರ ಸಂಬಂಧಿಕರು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವುದು ಸಾಮಾನ್ಯ ದೃಶ್ಯವಾಗಿದೆ. ಆಸ್ಪತ್ರೆಯಲ್ಲಿ ಹಾಸಿಗೆ ಸಿಗದೆ ರೋಗಿಗಳು ಮೃತಪಟ್ಟಿರುವುದೂ ವರದಿಯಾಗಿದೆ. ಜತೆಗೆ, ಆಸ್ಪತ್ರೆಯಲ್ಲಿ ಹಾಸಿಗೆ ಕಾಯ್ದಿರಿಸಿ, ಅದನ್ನು ಹೆಚ್ಚಿನ ಶುಲ್ಕಕ್ಕೆ ಮಾರಾಟ ಮಾಡುವ ದಂಧೆ ನಡೆಯುತ್ತಿದೆ ಎಂಬ ಆರೋಪವೂ ಕೇಳಿ ಬಂದಿದೆ.

ಆದರೆ, ಕೇರಳದ ಎರ್ನಾಕುಲಂ ಜಿಲ್ಲೆಯಲ್ಲಿ ಆಸ್ಪತ್ರೆ ಹಾಸಿಗೆಗಾಗಿ ರೋಗಿಗಳು ಅಲೆದಾಡುತ್ತಿರುವ ದೃಶ್ಯ ಕಾಣ ಸಿಗದು. ಹಾಸಿಗೆ ಹಂಚಿಕೆಗೆ ಅಲ್ಲಿ ಅಚ್ಚುಕಟ್ಟು ವ್ಯವಸ್ಥೆ ಮಾಡಲಾಗಿದೆ. ಕೇಂದ್ರೀಕೃತ ವಾರ್‌ರೂಮ್ ಮತ್ತು ವಿಕೇಂದ್ರೀಕೃತ ಆರೋಗ್ಯ ವ್ಯವಸ್ಥೆ ಮೂಲಕ ಇದು ಸಾಧ್ಯವಾಗಿದೆ.

ಕೇಂದ್ರೀಕೃತ ವಾರ್‌ರೂಮ್‌ನಲ್ಲಿ ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸುವುದು, ಅವರ ಮೇಲೆ ನಿಗಾ, ಆಮ್ಲಜನಕ ಪೂರೈಕೆ ಇತ್ಯಾದಿ ವಿಭಾಗಗಳಿವೆ. ಮನೆ ಪ್ರತ್ಯೇಕವಾಸ, ಪ್ರಾಥಮಿಕ ಮತ್ತು ದ್ವಿತೀಯ ಹಂತದ ಆರೋಗ್ಯ ಸೇವಾ ವ್ಯವಸ್ಥೆಗಳ ಜತೆಗೆ ವಾರ್‌ರೂಮ್ ಅನ್ನು ಜೋಡಿಸಲಾಗಿದೆ. ಕೋವಿಡ್ ದೃಢಪಟ್ಟ ಕೂಡಲೇ ರೋಗಿಯು ವಾರ್‌ರೂಮ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಇಂತಹ ರೋಗಿಗಳಿಗೆ ತಳಮಟ್ಟದ ಆರೋಗ್ಯ ಕಾರ್ಯಕರ್ತರು ದೂರವಾಣಿ ಮೂಲಕ ವೈದ್ಯರ ಸಮಾಲೋಚನಾ ಸೇವೆಯನ್ನು ವ್ಯವಸ್ಥೆ ಮಾಡುತ್ತಾರೆ. ರೋಗಿಯನ್ನು ಆಸ್ಪತ್ರೆಗೆ ದಾಖಲಿಸಬೇಕು ಎಂಬುದು ಸಮಾಲೋಚನೆಯಲ್ಲಿ ತಿಳಿದರೆ ಈ ಮಾಹಿತಿಯನ್ನು ವಾರ್‌ರೂಮ್‌ಗೆ ರವಾನಿಸಲಾಗುತ್ತದೆ. ಆಸ್ಪತ್ರೆಗಳಲ್ಲಿನ ಹಾಸಿಗೆ ಲಭ್ಯತೆಯನ್ನು ಪರಿಶೀಲಿಸಿ, ರೋಗಿಯನ್ನು ಯಾವ ಆಸ್ಪತ್ರೆಗೆ ದಾಖಲಿಸಬೇಕು ಎಂಬುದು ವಾರ್‌ರೂಮ್‌ನಲ್ಲಿ ನಿರ್ಧಾರವಾಗುತ್ತದೆ.

ಹಾಸಿಗೆ, ಐಸಿಯು, ವೆಂಟಿಲೇಟರ್‌ಗಳು ಎಷ್ಟು ಲಭ್ಯ ಇವೆ ಮತ್ತು ಎಷ್ಟರಲ್ಲಿ ರೋಗಿಗಳು ಇದ್ದಾರೆ ಎಂಬ ಮಾಹಿತಿಯನ್ನು ಪೋರ್ಟಲ್‌ನಲ್ಲಿ ಪರಿಷ್ಕರಿಸುವ ಹೊಣೆಯನ್ನು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಕೋವಿಡ್ ನೋಡಲ್ ಅಧಿಕಾರಿಗಳಿಗೆ ವಹಿಸಲಾಗಿದೆ.

ಆಮ್ಲಜನಕ ಪೂರೈಕೆಯನ್ನು ಕೂಡ ಕೇಂದ್ರೀಕೃತ ವಾರ್‌ರೂಮ್ ನಿರ್ವಹಿಸುತ್ತಿದೆ.

ಗೌರವಯುತ ಅಂತ್ಯಸಂಸ್ಕಾರ

ಸ್ಮಶಾನಗಳ ಮುಂದೆ ಜನರು ತಮ್ಮ ಬಂಧುಗಳ ಶವಗಳನ್ನಿಟ್ಟುಕೊಂಡು ಸಾಲುಗಟ್ಟಿ ನಿಂತಿರುವ ಚಿತ್ರಗಳು ಮುಂಬೈಯಲ್ಲಿ ಕಾಣಿಸಲಿಲ್ಲ. ಸಾವುಗಳ ಸಂಖ್ಯೆ ಏರಿಕೆಯಾಗುತ್ತಿದ್ದಾಗ ಅದಕ್ಕೆ ಅನುಗುಣವಾಗಿ ವ್ಯವಸ್ಥೆಗಳನ್ನು ರೂಪಿಸಿದ್ದೇ ಇದಕ್ಕೆ ಕಾರಣ.

ಐಐಟಿಯ ನೆರವು ಪಡೆದು ಮುಂಬೈಯ 47 ಸ್ಮಶಾನಗಳ ಆನ್‌ಲೈನ್ ಡ್ಯಾಶ್‌ಬೋರ್ಡ್‌ಅನ್ನು ಮೊದಲೇ ತಯಾರಿಸಲಾಗಿತ್ತು. ಮೃತಪಟ್ಟವರ ಕುಟುಂಬದವರಿಗೆ ಈ ವ್ಯವಸ್ಥೆಯ ಮೂಲಕ ಸ್ಲಾಟ್‌ಗಳನ್ನು ವಿತರಿಸಿ, ತಮ್ಮ ಬಂಧುಗಳಿಗೆ ಗೌರವಯುತವಾಗಿ ಮತ್ತು ಖಾಸಗಿತನದೊಂದಿಗೆ ಅಂತಿಮ ವಿದಾಯ ನೀಡಲು ವ್ಯವಸ್ಥೆ ಮಾಡಿಕೊಡಲಾಗಿತ್ತು.

ಈಶಾನ್ಯದಲ್ಲಿ ಬಿಜೆಪಿ ಕಟ್ಟಿದ ಹಿಮಂತ

• ಸುಮೀರ್ ಕರ್ಮಾಕರ್

ಗುವಾಹಟಿ: ದೀರ್ಘ ಕಾಲದವರೆಗೆ ಕಾಂಗ್ರೆಸ್‌ನಲ್ಲಿದ್ದ ಹಿಮಂತ ಬಿಸ್ವ ಶರ್ಮಾ, ತರುಣ್ ಗೊಗೊಯಿ ಅವರ ವಿಶ್ವಾಸಾರ್ಹ ಸಾಥಿಯೂ ಆಗಿದ್ದರು. ಆದರೆ, ಕೆಲವು ವರ್ಷಗಳ ಹಿಂದೆ ಗೊಗೊಯಿ ವಿರುದ್ಧವೇ ಬಂಡಾಯ ಸಾರಿದರು. ಒಂದು ವರ್ಷಕ್ಕೂ ಹೆಚ್ಚು ಕಾಲ ಬಂಡಾಯವನ್ನು ನಡೆಸಿ, 2015ರ ಆಗಸ್ಟ್‌ನಲ್ಲಿ ಪಕ್ಷ ತ್ಯಜಿಸಿ ಬಿಜೆಪಿ ಸೇರಿದರು.

'2016ರ ಚುನಾವಣೆಗೂ ಮುನ್ನ ತಮ್ಮನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಬೇಕು ಎಂಬುದು ಶರ್ಮಾ ಅವರ ಬೇಡಿಕೆಯಾಗಿತ್ತು' ಎಂದು ಗೊಗೊಯಿ ಅವರು ಆಗ ಆರೋಪಿಸಿದ್ದರು. ಆದರೆ, ಆ ಆಸೆ ಈಡೇರಲಿಲ್ಲ. ಕೊನೆಗೆ ತಮ್ಮ ಕೆಲವು ವಿಶ್ವಾಸಾರ್ಹ ಶಾಸಕರ ಜತೆಗೆ ಅವರು ಬಿಜೆಪಿ ಸೇರ್ಪಡೆಯಾಗಿದ್ದರು. ಇದಾಗಿ ನಾಲ್ಕು ತಿಂಗಳ ನಂತರ 'ಸರ್ವಾನಂದ ಸೋನೊವಾಲ್ ಅವರೇ ನಮ್ಮ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ' ಎಂದು ಬಿಜೆಪಿ ಘೋಷಿಸಿತು. ಅದರೊಂದಿಗೆ 'ಮುಖ್ಯಮಂತ್ರಿ ಆಗಬೇಕು' ಎಂಬ ಶರ್ಮಾ ಅವರ ಆಸೆಗೆ ತಣ್ಣೀರು ಎರಚಿದಂತಾಯಿತು. 2016ರಲ್ಲಿ ಕಾಂಗ್ರೆಸ್‌ನಿಂದ ಅಧಿಕಾರವನ್ನು ಕಸಿದುಕೊಂಡ ಬಿಜೆಪಿ, ಅಸ್ಸಾಂನಲ್ಲಿ ತನ್ನ ಮೊದಲ ಸರ್ಕಾರವನ್ನು ರಚಿಸಿತು. ಸೋನೊವಾಲ್ ಅವರು ಮುಖ್ಯಮಂತ್ರಿಯಾದರು.

ಮುಖ್ಯಮಂತ್ರಿಯಾಗಬೇಕು ಎಂಬ ಶರ್ಮಾ ಅವರ ಕನಸು ಈಗ ಸಾಕಾರಗೊಳ್ಳಲಿದೆ. ಬಿಜೆಪಿಯ ನೂತನ ಶಾಸಕರ ಸಭೆಯಲ್ಲಿ ಅವರನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಲಾಗಿದೆ.

2016ರ ನಂತರ ಅಸ್ಸಾಂನಲ್ಲಿ ನಡೆದ ಎಲ್ಲಾ ಚುನಾವಣೆಗಳಲ್ಲಿ ಬಿಜೆಪಿಯು ಗೆಲುವು ಸಾಧಿಸಿರುವುದರ ಹಿಂದೆ ಶರ್ಮಾ ಅವರ ಶ್ರಮ ಇದೆ. ಚುನಾವಣಾ ಕಾರ್ಯತಂತ್ರದಲ್ಲಿ ಉತ್ತಮ ಸಾಧನೆ ತೋರಿಸಿರುವ ಶರ್ಮಾ ಅವರು, ಸಹಜವಾಗಿಯೇ ಈಶಾನ್ಯ ರಾಜ್ಯಗಳಲ್ಲಿ ಬಿಜೆಪಿಯ ಅತಿ ಪ್ರಭಾವಿ ನಾಯಕನಾಗಿ ಹೊರ ಹೊಮ್ಮಿದ್ದಾರೆ.

1969ರಲ್ಲಿ ಜನಿಸಿದ ಹಿಮಂತ ಅವರು ಕಾಂಗ್ರೆಸ್ ಸೇರುವುದಕ್ಕೂ ಮುನ್ನ, ಆಲ್ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್‌ನ ಕಾರ್ಯಕರ್ತರಾಗಿದ್ದರು. 1996ರಲ್ಲಿ ಜಾಲುಕ್‌ಬರಿ ಕ್ಷೇತ್ರದಿಂದ ಮೊದಲಬಾರಿಗೆ ಎಜಿಪಿಯ ಬಲಿಷ್ಠ ಸ್ಪರ್ಧಿ ಭೃಗುಕುಮಾರ್ ಫುಕನ್ ವಿರುದ್ಧ ಸ್ಪರ್ಧಿಸಿ ಸೋತಿದ್ದರು. 2001ರಲ್ಲಿ ಅದೇ ಕ್ಷೇತ್ರದಲ್ಲಿ ಫುಕನ್ ಅವರನ್ನು ಸೋಲಿಸಿದರು. ಅಲ್ಲಿಂದ ಸತತವಾಗಿ ಐದನೇ ಬಾರಿಗೆ ಅದೇ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.


2002ರಲ್ಲಿ ತರುಣ್ ಗೊಗೊಯಿ ನೇತೃತ್ವದ ಸರ್ಕಾರದಲ್ಲಿ ಅವರು ಮೊದಲ ಬಾರಿಗೆ ಮಂತ್ರಿಯಾದರು. ಆನಂತರ ಆರೋಗ್ಯ, ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಗುವಾಹಟಿ ಅಭಿವೃದ್ಧಿ ಮತ್ತು ಅಸ್ಸಾಂ ಒಪ್ಪಂದ ಮುಂತಾದ ಸಚಿವಾಲಯಗಳನ್ನು ನಿರ್ವಹಿಸಿದರು. ಸೋನೊವಾಲ್ ನೇತೃತ್ವದ ಸರ್ಕಾರದಲ್ಲಿ ಶರ್ಮಾ ಅವರು ಹಣಕಾಸು , ಶಿಕ್ಷಣ, ಆರೋಗ್ಯ ಹಾಗೂ ಲೋಕೋಪಯೋಗಿ ಖಾತೆಗಳನ್ನು ನಿರ್ವಹಿಸಿದ್ದರು. ಪಿಎಚ್.ಡಿ ಮಾಡಿರುವ ಶರ್ಮಾ ಅವರು, ಅಸ್ಸಾಂ ಭಾಷೆಯಲ್ಲಿ ನಾಲ್ಕು ಕೃತಿಗಳನ್ನು ಸಹ ರಚಿಸಿದ್ದಾರೆ.

ಹಿಂದುತ್ವದ ಮುಖ

ಬಿಜೆಪಿ ವಿರುದ್ಧ ಸೆಣಸಲು ಕಾಂಗ್ರೆಸ್ ಪಕ್ಷವು ಏಳು ಪ್ರಾದೇಶಿಕ ಪಕ್ಷಗಳ ಜತೆಗೆ ಮೈತ್ರಿ ಹೆಣೆದುಕೊಂಡಿತ್ತು. ಬಿಜೆಪಿಯ ಚುನಾವಣಾ ಪ್ರಚಾರದ ನೇತೃತ್ವ ವಹಿಸಿದ್ದ ಶರ್ಮಾ ಅವರು ಹಿಂದುತ್ವದ ಕಾರ್ಯಸೂಚಿಯನ್ನು ಮುಂದಿಟ್ಟುಕೊಂಡೇ ಮತಗಳ ಧ್ರುವೀಕರಣ ಮಾಡಿ ಯಶಸ್ಸು ಕಂಡಿದ್ದರು. ಇದರಿಂದ ಸಹಜವಾಗಿ ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನ ಹೊಗಳಿಕೆಗೆ ಪಾತ್ರರಾಗಿದ್ದಾರೆ.

ಭ್ರಷ್ಟಾಚಾರದ ಆರೋಪ

2015ರಲ್ಲಿ ಶರ್ಮಾ ಅವರು ಬಿಜೆಪಿ ಸೇರುವುದಕ್ಕೂ ಕೆಲವೇ ತಿಂಗಳುಗಳ ಹಿಂದೆ, ಅಮೆರಿಕ ಮೂಲದ ಒಂದು ಸಂಸ್ಥೆಯೂ ಒಳಗೊಂಡ ನೀರು ಸರಬರಾಜು ಯೋಜನೆ ಹಾಗೂ ಶಾರದಾ ಹಗರಣದಲ್ಲಿ ಕಾಂಗ್ರೆಸ್ ನಾಯಕರ ವಿರುದ್ಧ ಕೆಲವು ಆರೋಪಗಳನ್ನು ಬಿಜೆಪಿಯು ಮಾಡಿತ್ತು. ಆ ನಾಯಕರ ಪಟ್ಟಿಯಲ್ಲಿ ಶರ್ಮಾ ಅವರ ಹೆಸರೂ ಇತ್ತು. ಗೊಗೊಯಿ ಅವಧಿಯಲ್ಲಿ ಭಾರಿ ಸದ್ದು ಮಾಡಿದ್ದ ₹ 1000 ಕೋಟಿ ಮೌಲ್ಯದ ಹಗರಣವೊಂದರಲ್ಲೂ ಶರ್ಮಾ ಅವರ ಹೆಸರೂ ಇತ್ತು. ಆದರೆ ಬಿಜೆಪಿಯಲ್ಲಿ ಶರ್ಮಾ ಅವರ ಪ್ರಭಾವ ಹೆಚ್ಚುತ್ತಿದ್ದಂತೆ ಆರೋಪಗಳು ಧ್ವನಿ ಕಡಿಮೆಯಾಗುತ್ತಾ ಬಂದಿದೆ.


ಹಿಮಂತ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕೊರೊನಾ ತಡೆಗೆ ಅದನ್ನು ತಿನ್ನಿ, ಇದನ್ನು ತಿನ್ನಿ, ಹಾಗೆ ಮಾಡಿ, ಹೀಗೆ ಮಾಡಿ ಎಂಬ ಸಲಹೆಗಳು ಸಾಮಾಜಿಕ ಜಾಲತಾಣಗಳಲ್ಲಿ ದಿನನಿತ್ಯ ಬರುತ್ತಲೇ ಇವೆ. 'ಹೆಚ್ಚು ಹೆಚ್ಚು ಚಹಾ ಸೇವಿಸುವವರಿಗೆ ಕೊರೊನಾ ಬರುವುದಿಲ್ಲ' ಎಂದು ಉತ್ತರ ಭಾರತದ ಪತ್ರಿಕೆಯೊಂದು ಇತ್ತೀಚೆಗೆ ವರದಿ ಮಾಡಿದೆ. ಇನ್ನೊಂದು ಪತ್ರಿಕೆಯು 'ವೀಳ್ಯದೆಲೆಗಳ ಸೇವನೆಯಿಂದ ಕೊರೊನಾ ತಡೆಯಬಹುದು' ಎಂಬ ಲೇಖನವನ್ನು ಪ್ರಕಟಿಸಿದೆ. ಈ ಲೇಖನದ ಪ್ರತಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.



ಆದರೆ, ಇದು ಯಾವುದೂ ವೈಜ್ಞಾನಿಕವಾಗಿ ಸಾಬೀತಾಗಿಲ್ಲ. ಚಹಾ ಅಥವಾ ವೀಳ್ಯದೆಲೆ ಸೇವನೆಯಿಂದ ಕೊರೊನಾ ಕಡಿಮೆಯಾಗುತ್ತದೆ ಅಥವಾ ರೋಗ ಬರುವುದನ್ನು ತಡೆಯಬಹುದು ಎಂಬುದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಸ್ಪಷ್ಟಪಡಿಸಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ

ವಿಧಿಯ ಆಟ

ಎಲ್ಲಿಯದನೋ ಅದೆಲ್ಲಿಯದಕೋ ಹೆಣೆಯುವನು |
ಒಲ್ಲೆವೆನೆ ನೀವೆ ಕಿತ್ತಾಡಿಕೊಳಿರೆನುವನ್ ||
ಬೆಲ್ಲದಡುಗೆಯಲಿ ಹಿಡಿ ಮರಳನೆರಚಿಸುವನು |
ಒಳ್ಳೆಯುಪಕಾರಿ ವಿಧಿ – ಮಂಕುತಿಮ್ಮ || 415 ||

ಪದ-ಅರ್ಥ: ಒಲ್ಲೆವೆನೆ = ಒಲ್ಲೆವು + ಎನೆ, ಕಿತ್ತಾಡಿಕೊಳಿರೆನುವನ್ = ಕಿತ್ತಾಡಿಕೊಳಿರಿ + ಎನುವನ್ (ಎನ್ನುವನು), ಮರಳನೆರಚಿಸುವನು = - ಮರಳನು + ಎರಚಿಸುವನು


ವಾಚ್ಯಾರ್ಥ: ಎಲ್ಲಿಯೋ ಇರುವುದನ್ನು ಮತ್ತೆಲ್ಲಿಯದಕೋ ಜೋಡಿಸುವನು. ಬೇಡವೆಂದರೆ, ನೀವೇ ಹೊಡೆದಾಡಿಕೊಳ್ಳಿ ಎನ್ನುವನು. ಬೆಲ್ಲದ ಅಡುಗೆಯಲ್ಲಿ ಹಿಡಿ ಮರಳನ್ನು ಹಾಕಿಸುವನು. ಹೀಗೆ ಒಳ್ಳೆಯ ಉಪಕಾರಿ ವಿಧಿ.

ವಿವರಣೆ: ವಿಧಿ ಎಂಬುದೊಂದು ವಿಶೇಷ ಚಿಂತನೆ. ಅದನ್ನು ಅದೃಷ್ಟ, ನಿಯತಿ, ದೈವವೆಂದೆಲ್ಲ ಹೆಸರುಗಳಿಂದ ಕರೆಯಲಾಗುತ್ತದೆ. ಇದೊಂದು ಪೂರ್ವನಿರ್ಧಾರಿತವಾದ ಪಥ. ಈ ನಂಬಿಕೆಯಲ್ಲಿ ಸಂಗತಿಗಳು ಪೂರ್ವನಿರ್ಧಾರದಂತೆ ನಡೆಯುತ್ತವೆ. ನಮಗೆ ಅವುಗಳ ಮುನ್ಸೂಚನೆ ಇಲ್ಲದಿರುವುದರಿಂದ ಅವು ವಿಚಿತ್ರ ಅಥವಾ ಅನೂಹ್ಯವಾದದ್ದು ಎನ್ನುತ್ತೇವೆ. ಯುರೋಪಿನಲ್ಲಿ ಮತ್ತು ಗ್ರೀಕ್ ಸಂಪ್ರದಾಯಗಳಲ್ಲಿ ಈ ವಿಧಿ ಎಂಬ ಅದೃಷ್ಟದ ನಂಬಿಕೆ ಇದೆ. ಅದು ಏನನ್ನಾದರೂ, ಯಾರಿಗಾದರೂ ಮಾಡಿಬಿಡಬಹುದು ಎಂದು ನಂಬಿದ್ದರು.

ಕೆಲವು ಘಟನೆಗಳು ನಡೆದಿರುವುದನ್ನು ಕಂಡರೆ ವಿಧಿಯ ಆಟ ಅತ್ಯಂತ ನಿಗೂಢವಾದದ್ದು ಎನಿಸುತ್ತದೆ. ಒಂದಷ್ಟು ಜನ ಹೆಣ್ಣು ಮಕ್ಕಳು, ಶಾಲೆಯಲ್ಲಿ ಜೊತೆಯಾಗಿದ್ದವರು, ತಮ್ಮ ಶಾಲಾ ಜೀವನದ ನೆನಪುಗಳನ್ನು ತಾಜಾ ಮಾಡಿಕೊಳ್ಳಲೆಂದು ಮೋಜಿನ ಪ್ರವಾಸವನ್ನು ಯೋಜಿಸಿದರು. ಅವರು ಈಗ ತುಂಬ ದೊಡ್ಡ ದೊಡ್ಡ ಸ್ಥಾನಗಳಲ್ಲಿರುವವರು. ಒಂದು ವಾಹನವನ್ನು ಗೊತ್ತು ಮಾಡಿಕೊಂಡು ಹೊರಟರು. ಹೊರಟದ್ದು ಸಂತೋಷದಾಯಕ ಪ್ರವಾಸಕ್ಕೆ. ಆದರೆ ಬೆಳಗಿನ ಹೊತ್ತಿಗೆ, ಅವರು ಹೊರಟ ವಾಹನ, ಮರಳು ತುಂಬಿದ ಲಾರಿಗೆ ಡಿಕ್ಕಿ ಹೊಡೆದು, ಈ ವಾಹನದಲ್ಲಿದ್ದ ಹತ್ತು-ಹನ್ನೊಂದು ಮಹಿಳೆಯರು ಪ್ರಾಣ ಕಳೆದುಕೊಂಡರು. ಅಪೇಕ್ಷಿಸಿದ್ದು ಸಂತೋಷ, ದೊರೆತದ್ದು ಸಾವು. ಇದನ್ನೇ ವಿಧಿಯ ಆಟ ಎಂದು ಜನ ಕರೆದರು.

ಒಬ್ಬ ತರುಣ ಪದವೀಧರ, ಬುದ್ಧಿವಂತ ಯಾವುದೋ ಕಾರಣಕ್ಕೆ ಅವನ ಕೆಲಸ ಹೋಯಿತು. ಮನೆಯಲ್ಲಿ ಒಲೆ ಹೊತ್ತುವುದು ಅವನ ಗಳಿಕೆಯಿಂದ. ತರುಣ ನಿರಾಶನಾದ, ಸಾಯಬೇಕೆಂದು ತೀರ್ಮಾನಿಸಿ ಊರ ಹೊರಗೆ ರೇಲ್ವೆ ಹಳಿಗುಂಟ ನಡೆದ. ರೈಲು ಬರುವಾಗ ಅದಕ್ಕೆ ತಲೆಕೊಡಬೇಕೆಂಬುದು ಅವನ ಉದ್ದೇಶ. ಅರೆ! ಅದೇನದು? ಹಳಿಯ ಪಕ್ಕದಲ್ಲಿ ಬಿದ್ದಿದ್ದ ಏನನ್ನೋ ಕಂಡು ಓಡಿದ. ಅಲ್ಲೊಬ್ಬ ತರುಣಿ ಬಿದ್ದು ಒದ್ದಾಡುತ್ತಿದ್ದಾಳೆ. ಆಗ ತಾನೇ ಹೋದ ರೈಲಿನಿಂದ ಹೊರಗೆ ಬಿದ್ದವಳು ಅವಳು. ಅವನಿಗೆ ತನ್ನ ಸಾವಿನ ವಿಚಾರ ಮರೆಯಿತು. ಆಕೆಯನ್ನು ಹೊತ್ತು ಆಸ್ಪತ್ರೆ ಸೇರಿಸಿದ. ಆಕೆಗೆ ಸ್ಮೃತಿ ಬಂದ ಮೇಲೆ ಅವಳ ಮನೆಮಂದಿಯನ್ನು ಕರೆಸಿದ. ಆಕೆಯ ತಂದೆ ಭೋಪಾಲದ ಬಹುದೊಡ್ಡ ವ್ಯಾಪಾರಸ್ಥರು. ಈಕೆ ಒಬ್ಬಳೇ ಮಗಳು, ಕಲಿಯಲು ಇಲ್ಲಿಗೆ ಬಂದಿದ್ದಾಳೆ. ಒಬ್ಬಳೇ ಪ್ರವಾಸಕ್ಕೆ ರೈಲಿನಲ್ಲಿ ಹೊರಟಾಗ ಜಾರಿ ಹೊರಗೆ ಬಿದ್ದಿದ್ದಾಳೆ. ತಂದೆಗೆ ತರುಣನ ಸೇವೆ ಇಷ್ಟವಾದರೆ, ಹುಡುಗಿಗೆ ಹುಡುಗನೇ ಇಷ್ಟವಾದ. ಇಂದು ಆತ ಆಕೆಯನ್ನು ಮದುವೆಯಾಗಿ ದೊಡ್ಡ ವ್ಯಾಪಾರಿಯಾಗಿದ್ದಾನೆ. ಅವನು ಅಪೇಕ್ಷೆ ಪಟ್ಟದ್ದು ಸಾವು, ದೊರೆತದ್ದು ಸಂತೋಷದ ಬದುಕು. ಅದಕ್ಕೇ ಕಗ್ಗ ಹೇಳುತ್ತದೆ, ವಿಧಿ ಎಲ್ಲಿಯದನ್ನು ಎಲ್ಲಿಯೋ ಹೆಣೆಯುತ್ತದೆ, ಜಗಳ ಹುಟ್ಟಿಸುತ್ತದೆ, ಸಂಭ್ರಮಕ್ಕೆ ತಣ್ಣೀರೆರೆಯುತ್ತದೆ, ದುಃಖಕ್ಕೆ ಸಂತೋಷವನ್ನು ಸಿಂಪಡಿಸುತ್ತದೆ. ಅದೊಂದು ಉಪಕಾರಿಯೇ ನಮಗೆ.

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ಮೇ 10, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಭರಣಿ ಚತುರ್ದಶಿ ಗಂ. 37-35 (ರಾ. 9-05) ಸೋಮವಾರ ನಿತ್ಯ ನಕ್ಷತ್ರ ಅಶ್ವಿನಿ ಗಂ. 34-41 (ರಾ. 7-55) ಆಯುಃ ನಾಮ ಯೋಗ ಗಂ 38-20 ಭದ್ರೆ ಕರಣ ಗಂ. 5-28 ವಿಷ ಗಂ. 24-7 ಅಮೃತ ಗಂ. 15-17 : ರಾಹುಕಾಲ: ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 5-59 ಸೂರ್ಯಾಸ್ತ: 6-33 ಅದೃಷ್ಟ ಸಂಖ್ಯೆ 3, 7, 8

ಮೇಷ: ಅಪೇಕ್ಷಿತ ಗುರಿಯನ್ನು ಯಶಸ್ವಿಯಾಗಿ ತಲುಪಬಹುದು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಚಿಂತೆ ನಡೆಸಲಿದ್ದೀರಿ. ನೇರ ಹಾಗೂ ದಿಟ್ಟ ನಡವಳಿಕೆ ಅವಶ್ಯ. ಹೊಸ ಹೊಸ ಮಾರ್ಗಗಳ ಮೂಲಕ ಕಾರ್ಯಕ್ಷೇತ್ರದಲ್ಲಿ ಯಶಸ್ಸನ್ನು ಕಾಣುವಿರಿ.

ವೃಷಭ: ವಿದ್ಯಾರ್ಥಿಗಳಿಗೆ ಸಿಹಿ ಸುದ್ದಿ. ಒತ್ತಡ ಎದುರಿಸಬೇಕಾದೀತು. ಮಿತ್ರರ ಸಹಕಾರ ದೊರೆತು ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿ ಉತ್ತಮ ಫಲಗಳನ್ನು ಪಡೆಯುವಿರಿ. ದಿನವಿಡೀ ಒತ್ತಡಗಳು ಕಾಣಿಸಿಕೊಳ್ಳುವವು.

ಮಿಥುನ: ವಿದ್ಯಾರ್ಥಿಗಳಿಗೆ, ತಾಂತ್ರಿಕ ತರಬೇತಿ ಪಡೆಯುತ್ತಿರುವವರಿಗೆ ಅತ್ಯಂತ ಮಹತ್ವದ ಕಾಲ. ಕಚೇರಿ ಕೆಲಸಗಳಲ್ಲಿ ಹೆಚ್ಚಿನ ನೈಪುಣ್ಯತೆ ಗಳಿಸುವ ಅವಕಾಶ. ವಾಸ್ತವವನ್ನು ಅರಿತು ನಡೆಯುವುದು ಉತ್ತಮ.

ಕರ್ಕಾಟಕ: ಸೃಜನಶೀಲ ಕಾರ್ಯಗಳಲ್ಲಿ ಮಗ್ನರಾಗಿ ಯಶಸ್ಸು ಗಳಿಸುವಿರಿ. ವಿದ್ಯಾರ್ಥಿಗಳಿಗೆ ಮುಂದಿನ ವ್ಯಾಸಂಗಕ್ಕೆ ಅನುಕೂಲ. ನಿಮ್ಮ ಕ್ಷಮತೆಯಿಂದ ಒತ್ತಡಗಳು ದೂರವಾಗಲಿವೆ. ಉನ್ನತ ಅಧಿಕಾರಿಗಳ ಮೆಚ್ಚುಗೆ ಗಳಿಸುವಿರಿ.

ಸಿಂಹ: ದೊಡ್ಡ ದೊಡ್ಡ ಯೋಜನೆಗಳನ್ನು ಯೋಚಿಸುವಿರಿ. ಸಾಕಾರಗೊಳಿಸುವಲ್ಲಿ ನಿಮ್ಮ ನಿರ್ಲಕ್ಷ ಸಲ್ಲದು. ಕಠಿಣ ಪರಿಶ್ರಮದಿಂದ ಮಾತ್ರ ಯಶಸ್ಸು ಸಾಧ್ಯ. ಫಲಿತಾಂಶಗಳ ಬಗ್ಗೆ ಚಿಂತಿಸದೇ ಪ್ರಯತ್ನಶೀಲರಾಗಿ. ಯಶಸ್ಸು ಖಂಡಿತ.

ಕನ್ಯಾ: ಹಣಕಾಸಿನ ವಿಚಾರದಲ್ಲಿ ಹೆಚ್ಚಿನ ಚಿಂತನೆ ನಡೆಸುವಿರಿ. ನಿವೃತ್ತರು ತಮ್ಮ ಮುಂದಿನ ಭವಿಷ್ಯಕ್ಕಾಗಿ ಆದಾಯದ ಮೂಲಗಳನ್ನು ಕಂಡುಕೊಳ್ಳುವಿರಿ. ಮಕ್ಕಳ ನಡೆಯ ಬಗ್ಗೆ ಗಮನ ಅಗತ್ಯ. ದೇವತಾ ಆರಾಧನೆಯಿಂದ ಯಶಸ್ಸು.

ತುಲಾ: ಬರುವ ಎಲ್ಲ ಅವಕಾಶಗಳನ್ನು ತ್ಯಜಿಸುವುದು ಉತ್ತಮವಲ್ಲ. ಸನ್ನಿಹಿತವಾದ ಬದಲಾವಣೆಗಳಿಗೆ ನಿಮ್ಮನ್ನು ಮುಕ್ತ ಮನಸ್ಸಿನಿಂದ ತೆರೆದುಕೊಳ್ಳುವುದು ಅತ್ಯವಶ್ಯ. ಉದ್ಯೋಗದಲ್ಲಿ ಬದಲಾವಣೆ ಸಾಧ್ಯತೆ ಕಂಡುಬರುತ್ತಿದೆ.

ವೃಶ್ಚಿಕ: ಬಯಕೆಗಳು ಮತ್ತು ವಾಸ್ತವಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಲು ಕಷ್ಟವಾಗಬಹುದು. ತಾಳ್ಮೆಯಿಂದ ಯೋಚಿಸಿ ನಿರ್ಧಾರ ತೆಗೆದುಕೊಳ್ಳಿ. ದುಡುಕಿನ ನಡೆ ಕೆಡುಕು. ಗುರುವಿನ ಆರಾಧನೆ ಮಾಡಿ.

ಧನು: ಅವಸರದಿಂದ ಅವಘಡಗಳನ್ನು ತಂದುಕೊಳ್ಳುವ ಸಾಧ್ಯತೆ. ವ್ಯವಧಾನವಿರಲಿ. ವಾರಾಂತ್ಯದ ಸಂತೋಷ ಕೂಟಗಳಲ್ಲಿ ಭಾಗವಹಿಸುವಿರಿ. ವಾಹನ ಚಲಾವಣೆಯಲ್ಲಿ ಜಾಗೃತೆ ಇರಲಿ.

ಮಕರ: ಸೋಲು ಗೆಲುವಿನ ಬಗೆಗೆ ಚಿಂತಿಸಬೇಡಿ. ಮುಂದಿನ ದಿನಗಳು ಉತ್ತಮವಿದೆ. ಅವಿವಾಹಿತರಿಗೆ ಉತ್ತಮ ಅವಕಾಶ. ಪ್ರೇಮಿಗಳ ವಿಚಾರದಲ್ಲಿ ಹಿರಿಯರ ಸಮ್ಮತಿ ದೊರಕುವುದು. ಬಂಧುಬಾಂಧವರ ಸಹಕಾರ.

ಕುಂಭ: ಏಕಕಾಲದಲ್ಲಿ ಅನೇಕ ಕಾರ್ಯಗಳಲ್ಲಿ ಮಗ್ನರಾಗಲು ಯೋಚಿಸಬೇಡಿ. ಸಂಪನ್ಮೂಲಕ್ಕೆ ಅನುಗುಣವಾಗಿ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಿ. ಧೃತಿಗೆಡದೆ ಬಂದ ಸವಾಲುಗಳನ್ನು ಎದುರಿಸಿ.


ಮೀನ: ಕಾರ್ಯ ವೈಫಲ್ಯಗಳನ್ನು ಕಂಡರೂ ಧೃತಿಗೆಡಬೇಕಾಗಿಲ್ಲ. ಕಾರಣಗಳನ್ನು ಹುಡುಕಿ ಮುನ್ನಡೆದಲ್ಲಿ ಯಶಸ್ಸು. ಆತುರದ ನಿರ್ಧಾರದಿಂದ ಅವಘಡ. ತಾಳ್ಮೆಯಿಂದ ವ್ಯವಹರಿಸಿ. ಆರೋಗ್ಯದ ಬಗ್ಗೆ ಎಚ್ಚರ ವಹಿಸುವುದು ಉತ್ತಮ.

ನಿಮ್ಮ ಜನ್ಮದಿನ 10-ಮೇ: ಈ ದಿನ ಅತ್ಯಂತ ಶುಭಕರ. ಉತ್ತಮ ಕಾರ್ಯಯೋಜನೆ ರೂಪಿಸುವಲ್ಲಿ ಯಶಸ್ಸು. ದೃಢ ನಿರ್ಧಾರದೊಂದಿಗೆ ತೊಡಗಿರುವ ಕೆಲಸಗಳಲ್ಲಿ ಯಶಸ್ಸನ್ನು ಸಾಧಿಸುವಿರಿ. ಆರಂಭದಲ್ಲಿ ಅನೇಕ ಏರುಪೇರುಗಳು ಕಂಡುಬಂದರೂ ನಂತರದ ದಿನಗಳಲ್ಲಿ ಅಡಚಣೆ ಉಂಟಾಗಲಾರದು.

ಪದಬಂಧ 4592 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹಿತ್ತಿಲಲ್ಲಿರುವ ತೆಳುವಾದ ಸೀರೆ (3)
3.ಮುಂದೆ ಬರಲಿರುವ ಕಾಲ (3)
5.ಪುಣ್ಯ ಸ್ಥಳವಿದು (2)
6.ಧಮಕಿ ಹಾಕುತ್ತಿರುವ ಈ ನೀಚ ವ್ಯಕ್ತಿ! (3)
7.ವಿರಾಜಮಾನವಾಗಿರುವ ಸಾಮ್ರಾಟ! (4)
8.ಸತಿ ಸಾವಿತ್ರಿಯ ಪತಿ (4)
10.ಕರಡಿಗಳ ಒಡೆಯನಿಲ್ಲಿ ತಿರುಗಿಹನಲ್ಲಾ? (4)
11.ಚಾವಡಿ ಏರಿದಾಗ ಕಾಣಿಸಿದ ಪಿಸುಣ! (4)
13.ಈ ತರ ಬಂದಿದ್ದಾನಿಲ್ಲಿ ಕಳ್ಳ! (3)
14.ಯಾವಾಗಲೂ ಇರುವಂಥದ್ದು (2)
15.ಆ ಗಸಗಸೆ ಚೆಲ್ಲಿದ್ದು ಈ ಹೆಬ್ಬಾಗಿಲ ಹತ್ತಿರ! (3)
17.ದೇವತೆಗಳ ಜನನಿ (3)

ಮೇಲಿಂದ ಕೆಳಕ್ಕೆ
1.ಖರ್ಚು ಕಳೆದು ಉಳಿದುದು (2)
2.ತಾಪತ್ರಯ ತೋಡಿಕೊಂಡು ಬರೆದ ಓಲೆ! (2)
4.ಪ್ರೇಮಿಗಳ ಅಗಲಿಕೆಯ ನೋವು ದೀರ್ಘವಾಗಿದೆಯಲ್ಲಾ? (3)
5.ಚಾರ ತಿಳಿಸಿರುವ ಸುಖದ ಸುದ್ದಿ (6)
6.ಆನೆಗೂ ಆಡಿಗೂ ಇರುವ ವ್ಯತ್ಯಾಸ (6)
7.ಚೆನ್ನಾಗಿ ಕಡೆಯಲ್ಪಟ್ಟಿದ್ದು (3)
9.ಶಾಶ್ವತವಿರದೆ ನಾಶವಾಗುವಂಥದ್ದು (3)
12.ಕೋತಿ ಇಲ್ಲಿಗೆ ಬಂದಿದೆ (3)
14.ಪರಿಸ್ಥಿತಿಯಲ್ಲಿರುವ ಅಸ್ತಿತ್ವ! (2)
16.ನೀರು ಒಸರುವ ಜಾಗ (2)



4591ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಪರೂಪ 3.ಸನಾತನ 5.ವಿಪುಲ 7.ದಟ್ಟ 8.ಮರ್ಮ 9.ಗುರಿ 10.ಉತ್ತರಾಯಣ 12.ಭಾಷೆ 13.ಶವ 14.ಜಾಗ 15.ಮೃತ್ತಿಕೆ 17.ಅಂತರಂಗ 18.ಸನ್ನಿಧಾನ

ಮೇಲಿಂದ ಕೆಳಕ್ಕೆ:
1.ಅಪಧಮನಿ 2.ಪಲ್ಲವಿ 3.ಸಕಾಲ 4.ತಲೋದರಿ 6.ಪುನರಾವೃತ್ತಿ 9.ಗುಣ 10.ಉಷೆ 11.ಅವಲೋಕನ 12.ಭಗವಂತ 15.ಮೃದಂಗ 16.ಕೆಲಸ

ಸುಡೊಕು 4978

					7		1	
8		7	6		4			
	2	9		8			5	6
	4			1		9		
		1	8	4	5		7	
7	5			9		3		
	8			7		4		3
			4		8		9	
9		4			2		6	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4977 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಲಸಿಕೆ: ಜಿಎಸ್‌ಟಿ ವಿನಾಯಿತಿ ಇಲ್ಲ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ, ಔಷಧ ಹಾಗೂ ಆಮ್ಲಜನಕದ ಕಾನ್ಸನ್‌ಟ್ರೇಟರ್‌ಗಳಿಗೆ ಜಿಎಸ್‌ಟಿ ವಿನಾಯಿತಿ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಈ ಲಸಿಕೆಗೆ ಶೇ 5ರಷ್ಟು ತೆರಿಗೆ ಇದೆ. ಕೋವಿಡ್‌ಗೆ ಸಂಬಂಧಿಸಿದ ಔಷಧಿಗಳಿಗೆ, ಆಮ್ಲಜನಕದ ಕಾನ್ಸನ್‌ಟ್ರೇಟರ್‌ಗಳಿಗೆ ಶೇ 12ರಷ್ಟು ತೆರಿಗೆ ಇದೆ. 'ವಿನಾಯಿತಿ ನೀಡಿದರೆ, ಲಸಿಕೆ ತಯಾರಕರು ಕಚ್ಚಾ ವಸ್ತುಗಳಿಗೆ ಪಾವತಿಸಿರುವ ತೆರಿಗೆ ಸರಿದೂಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದಿದ್ದಾರೆ.

ಕೋವಿಡ್: ರಾಜ್ಯದಲ್ಲಿ ಸೋಂಕು ದೃಢಪ್ರಮಾಣ ಶೇ 32.71ಕ್ಕೆ ಏರಿಕೆ

ಸಕ್ರಿಯ ಪ್ರಕರಣ 5.64 ಲಕ್ಷಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 47,930 ಮಂದಿ ಸೋಂಕಿತರಾಗಿರುವುದು ದೃಢ ಪಟ್ಟಿದ್ದು, ಸೋಂಕು ದೃಢ ಪ್ರಮಾಣ ಶೇ 32.71ಕ್ಕೆ ತಲುಪಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 5.64 ಲಕ್ಷಕ್ಕೆ ಏರಿಕೆಯಾಗಿದೆ.

ಕಳೆದ ಮಾರ್ಚ್ ಅಂತ್ಯಕ್ಕೆ 28 ಸಾವಿರ ಸಕ್ರಿಯ ಪ್ರಕರಣಗಳಿದ್ದವು. ಬಳಿಕ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. 48 ಗಂಟೆಗಳಲ್ಲಿಯೇ 95,493 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಈ ತಿಂಗಳು 9 ದಿನಗಳಲ್ಲಿ 4.11 ಲಕ್ಷ ಪ್ರಕರಣಗಳು ವರದಿಯಾಗಿವೆ. ಇದರಿಂದಾಗಿ ಈವರೆಗೆ ಸೋಂಕಿತರಾದವರ ಸಂಖ್ಯೆ 19.34 ಲಕ್ಷಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ ಬೆಂಗಳೂರಿನಲ್ಲಿ 281 ಮಂದಿ ಸೇರಿದಂತೆ ರಾಜ್ಯದಲ್ಲಿ 490 ಮಂದಿ ಸಾವಿಗೀಡಾಗಿದ್ದಾರೆ. ಬಳ್ಳಾರಿಯಲ್ಲಿ 21 ಮಂದಿ, ತುಮಕೂರು ಹಾಗೂ ಶಿವಮೊಗ್ಗದಲ್ಲಿ ತಲಾ 17 ಮಂದಿ, ಚಾಮರಾಜನಗರದಲ್ಲಿ 15 ಮಂದಿ, ಮೈಸೂರು ಹಾಗೂ ರಾಮನಗರದಲ್ಲಿ ತಲಾ 13 ಮಂದಿ, ಕಲಬುರ್ಗಿಯಲ್ಲಿ 12 ಮಂದಿ ಮೃತಪಟ್ಟಿದ್ದಾರೆ. ಮರಣ ಹೊಂದಿದವರಲ್ಲಿ ಬಹುತೇಕರು ಉಸಿರಾಟದ ಸಮಸ್ಯೆ ಎದುರಿಸಿದ್ದಾರೆ. 9 ದಿನಗಳಲ್ಲಿ 2,982 ಮಂದಿ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 18,776 ಕ್ಕೆ ಏರಿಕೆಯಾಗಿದೆ.

ಕೆಲ ದಿನಗಳಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗುತ್ತಿವೆ. ಬೆಂಗಳೂರಿನಲ್ಲಿ ಹೊಸದಾಗಿ 20,897 ಪ್ರಕರಣಗಳು ವರದಿಯಾಗಿವೆ. ಹಾಸನ (2,349), ಬಳ್ಳಾರಿ (2,141), ತುಮಕೂರು (2,001), ಮಂಡ್ಯ (1,959), ಮೈಸೂರು (1,854) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ವರದಿಯಾಗಿವೆ. ಕೋವಿಡ್ ಪರೀಕ್ಷೆಗಳ ಸಂಖ್ಯೆಯು ಇಳಿಕೆ ಕಂಡಿದ್ದು, ಒಂದು ದಿನದ ಅವಧಿಯಲ್ಲಿ 1.46 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಕೋವಿಡ್ ಪೀಡಿತರಲ್ಲಿ 31,796 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 13.51 ಲಕ್ಷ ದಾಟಿದೆ.

ದೆಹಲಿ, ಉತ್ತರಪ್ರದೇಶದಲ್ಲಿ ಲಾಕ್‌ಡೌನ್ ವಿಸ್ತರಣೆ

ನವದೆಹಲಿ: ಕೋವಿಡ್-19 ಸೋಂಕು ಪ್ರಕರಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನವದೆಹಲಿಯಲ್ಲಿ ಮೇ 17ರ ವರೆಗೆ ಲಾಕ್‌ಡೌನ್ ವಿಸ್ತರಿಸಲಾಗಿದೆ ಎಂದು ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಘೋಷಿಸಿದ್ದಾರೆ.

ಮೆಟ್ರೊ ಸೇವೆ ಸ್ಥಗಿತಗೊಳಿಸಲಾಗಿದೆ ಎಂದು ಕೇಜ್ರಿವಾಲ್ ಮಾಹಿತಿ ನೀಡಿದ್ದಾರೆ. ಕೋವಿಡ್-19 ಎರಡನೇ ಅಲೆ ತೀವ್ರವಾಗಿ ವ್ಯಾಪಿಸಿದ ಹಿನ್ನೆಲೆಯಲ್ಲಿ ಏ. 20ರಂದು ದೆಹಲಿಯಲ್ಲಿ ಲಾಕ್‌ಡೌನ್ ಜಾರಿಗೊಳಿಸಲಾಗಿತ್ತು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಕಳೆದ ಎರಡು ಮೂರು ದಿನಗಳಲ್ಲಿ ಪಾಸಿಟಿವ್ ಪ್ರಕರಣಗಳು ಶೇಕಡಾ 35ರಿಂದ 23ಕ್ಕೆ ಇಳಿಕೆಯಾಗಿದೆ ಎಂದಿದ್ದಾರೆ.

ಲಖನೌ: ಉತ್ತರಪ್ರದೇಶ ರಾಜ್ಯದಲ್ಲಿ ಕೋವಿಡ್-19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಲಾಕ್‌ಡೌನ್‌ಅನ್ನು ಮೇ 17ರ ವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಭಾನುವಾರ ಆದೇಶ ಹೊರಡಿಸಿದೆ.

ಸದ್ಯ ಜಾರಿಯಲ್ಲಿರುವ ಲಾಕ್‌ಡೌನ್ ಮೇ 10ರಂದು ಬೆಳಿಗ್ಗೆ 7ಕ್ಕೆ ಮುಕ್ತಾಯಗೊಳ್ಳಬೇಕಿತ್ತು.



ತಾಯಂದಿರ ದಿನ ಭಾನುವಾರ ತಾಯಂದಿರ ದಿನದಂದು ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯ ಇಟ್ಟಿಗೆ ಭಟ್ಟಿಯೊಂದರಲ್ಲಿ ತಾಯಂದಿರು ತಮ್ಮ ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡೇ ಕೆಲಸ ಮಾಡಿದರು – ಪಿಟಿಐ ಚಿತ್ರ

ಕೋವಿಡ್ ನಿರ್ವಹಣೆ: ಸರ್ಕಾರದ ಕಾರ್ಯವೈಖರಿಗೆ 'ದಿ ಲ್ಯಾನ್ಸೆಟ್'ನಲ್ಲಿ ತೀವ್ರ ಟೀಕೆ

'ಟೀಕೆ, ಚರ್ಚೆ ಹತ್ತಿಕ್ಕುವ ಮೋದಿ ಯತ್ನ ಅಕ್ಷಮ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಕೋವಿಡ್-19ರ ಎರಡನೇ ಅಲೆಯನ್ನು ನಿಭಾಯಿಸಿದ್ದರ ಬಗ್ಗೆ ಅಂತರ ರಾಷ್ಟ್ರೀಯ ವೈದ್ಯಕೀಯ ನಿಯತ ಕಾಲಿಕ 'ದಿ ಲ್ಯಾನ್ಸೆಟ್'ನಲ್ಲಿ ತೀವ್ರ ಟೀಕೆ ವ್ಯಕ್ತವಾಗಿದೆ. 'ಬಿಕ್ಕಟ್ಟಿನ ಸಂದರ್ಭದಲ್ಲಿ ಟೀಕೆ ಮತ್ತು ಮುಕ್ತ ಚರ್ಚೆಯನ್ನು ಹತ್ತಿಕ್ಕುವ ಮೋದಿ ಅವರ ಯತ್ನಗಳು ಅಕ್ಷಮ್ಯ' ಎಂದು ನಿಯತಕಾಲಿಕವು ಅಭಿಪ್ರಾಯಪಟ್ಟಿದೆ.

'ಮೋದಿ ನೇತೃತ್ವದ ಸರ್ಕಾರವು ಕೋವಿಡ್ ಸಾಂಕ್ರಾಮಿಕವನ್ನು ನಿಯಂತ್ರಿಸುವುದಕ್ಕಿಂತ ಟ್ವಿಟರ್‌ನಲ್ಲಿ ಪ್ರಕಟವಾಗುವ ಟೀಕೆಯನ್ನು ಅಳಿಸಿ ಹಾಕಲು ಹೆಚ್ಚು ಉಮೇದು ತೋರಿದೆ' ಎಂದು 'ದಿ ಲ್ಯಾನ್ಸೆಟ್'ನ ಸಂಪಾದಕೀಯ ದಲ್ಲಿ ಹೇಳಲಾಗಿದೆ.

ಭಾರತವು ಕೋವಿಡ್ ಸಾಂಕ್ರಾಮಿಕದ ವಿರುದ್ಧದ ಹೋರಾಟದ ಕೊನೆಯ ಹಂತದಲ್ಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರು ಎರಡನೇ ಅಲೆಯ ಆರಂಭಕ್ಕೆ ಮುನ್ನವೇ ಹೇಳಿದ್ದರು. ಕೆಲವು ತಿಂಗಳು ಕೋವಿಡ್ ಪ್ರಕರಣಗಳು ಕಡಿಮೆ ಇದ್ದವು. ಹಾಗಾಗಿ, ಭಾರತವು ಕೋವಿಡ್ ಅನ್ನು ಹಿಮ್ಮೆಟ್ಟಿಸಿತು ಎಂಬುದೇ ಸರ್ಕಾರದ ಭಾವನೆಯಾಗಿತ್ತು. ಎರಡನೇ ಅಲೆ ಮತ್ತು ರೂಪಾಂತರಿತ ತಳಿಗಳ ಅಪಾಯದ ಬಗ್ಗೆ ಪರಿಣತರು ಪದೇ ಪದೇ ಎಚ್ಚರಿಕೆ ನೀಡಿದ್ದರೂ ಸರ್ಕಾರ ಅದಕ್ಕೆ ಕಿವಿಗೊಡಲಿಲ್ಲ ಎಂದು ಹೇಳಲಾಗಿದೆ.

'ವ್ಯಾಪಕವಾಗಿ ಸೋಂಕು ಹರಡಲು ಕಾರಣವಾಗುವ, ಭಾರಿ ಸಂಖ್ಯೆಯಲ್ಲಿ ಜನರು ಸೇರುವ ಧಾರ್ಮಿಕ ಕಾರ್ಯಕ್ರಮಗಳಿಗೆ ಅನುಮತಿ ನೀಡಲಾಗಿದೆ' ಎಂದು ಕುಂಭ ಮೇಳವನ್ನು ಉಲ್ಲೇಖಿಸಿ ಹೇಳಲಾಗಿದೆ. ನಾಲ್ಕು ರಾಜ್ಯಗಳು ಮತ್ತು ಪುದುಚೇರಿ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆ ಸಂದರ್ಭದಲ್ಲಿ ಕೋವಿಡ್ ತಡೆ ಮಾರ್ಗಸೂಚಿ ಪಾಲನೆಯಾದದ್ದು ಕಾಣಿಸಲೇ ಇಲ್ಲ ಎಂದೂ ಸಂಪಾದಕೀಯದಲ್ಲಿ ಟೀಕಿಸಲಾಗಿದೆ.

ಲಸಿಕೆ ನೀತಿಯನ್ನು ತೀವ್ರ ವಿಮರ್ಶೆಗೆ ಒಳಪಡಿಸಲಾಗಿದೆ. ರಾಜ್ಯಗಳ ಜತೆಗೆ ಸಮಾಲೋಚನೆ ನಡೆಸದೆಯೇ 18 ವರ್ಷ ದಾಟಿದ ಎಲ್ಲರಿಗೂ ಲಸಿಕೆ ನೀಡುವ ನಿರ್ಧಾರ ಕೈಗೊಳ್ಳಲಾಯಿತು. ಇದರಿಂದಾಗಿ ಲಸಿಕೆ ಕೊರತೆಯಾಗಿ ಜನರಲ್ಲಿ ಗೊಂದಲ ಮೂಡಿತು ಎಂದು ವಿಶ್ಲೇಷಿಸಲಾಗಿದೆ.

'ಭಾರತದಲ್ಲಿ ಕೋವಿಡ್‌ನಿಂದಾಗಿ ಆಗಸ್ಟ್ 1ರ ಹೊತ್ತಿಗೆ ಒಂದು ಕೋಟಿ ಜನರು ಸಾಯಬಹುದು ಎಂದು ದಿ ಇನ್‌ಸ್ಟಿಟ್ಯೂಟ್ ಫಾರ್ ಹೆಲ್ತ್ ಮೆಟ್ರಿಕ್ಸ್ ಎಂಡ್ ಇವ್ಯಾಲುಯೇಷನ್ ಅಂದಾಜಿಸಿದೆ. ಹಾಗೇನಾದರೂ ಆದರೆ, ಸ್ವಯಂಕೃತ ರಾಷ್ಟ್ರೀಯ ಮಹಾ ದುರಂತದ ಹೊಣೆಯನ್ನು ಮೋದಿ ನೇತೃತ್ವದ ಸರ್ಕಾರ ಹೊರಬೇಕಾಗುತ್ತದೆ' ಎಂಬ ಎಚ್ಚರಿಕೆಯೂ ಸಂಪಾದಕೀಯದಲ್ಲಿ ಇದೆ.

ಕೋವಿಡ್ ನಿಯಂತ್ರಣದಲ್ಲಿ ಆರಂಭದಲ್ಲಿ ಸಿಕ್ಕ ಯಶಸ್ಸನ್ನು ಭಾರತವು ಕೈಚೆಲ್ಲಿತು. ಕೇಂದ್ರ ಸರ್ಕಾರದ ಕೋವಿಡ್ ಕಾರ್ಯಪಡೆಯು ಏಪ್ರಿಲ್ ವರೆಗೆ ಹಲವು ತಿಂಗಳಿನಿಂದ ಸಭೆಯೇ ಸೇರಿರಲಿಲ್ಲ. ಇದರ ಪರಿಣಾಮ ಕಣ್ಣ ಮುಂದೆಯೇ ಇದೆ. ಬಿಕ್ಕಟ್ಟು ತೀವ್ರ ಗೊಂಡ ಈ ಸಂದರ್ಭದಲ್ಲಿ ಅದಕ್ಕೆ ತೋರಬೇಕಾದ ಪ್ರತಿಕ್ರಿಯೆಯನ್ನು ಮರುರೂಪಿಸಬೇಕಾದ ಅಗತ್ಯ ಇದೆ. ಈ ಪ್ರಯತ್ನದ ಯಶಸ್ಸು ಕೂಡ ಸರ್ಕಾರ ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುವುದು, ಹೊಣೆಗಾರಿಕೆಯ ನಾಯಕತ್ವ, ಪಾರದರ್ಶಕತೆ, ವೈಜ್ಞಾನಿಕವಾದ ಸಾರ್ವಜನಿಕ ಆರೋಗ್ಯ ಪ್ರತಿಕ್ರಿಯೆ ಅನುಷ್ಠಾನದ ಮೇಲೆ ಅವಲಂಬಿತ ಎಂದು 'ದಿ ಲ್ಯಾನ್ಸೆಟ್' ಹೇಳಿದೆ.

ಲ್ಯಾನ್ಸೆಟ್ ಸಲಹೆಗಳು

- ಅವ್ಯವಸ್ಥೆಗೊಂಡಿರುವ ಲಸಿಕೆ ನೀಡಿಕೆ ಅಭಿಯಾನವನ್ನು ವ್ಯವಸ್ಥಿತಗೊಳಿಸಿ
- ಲಸಿಕೆ ಅಭಿಯಾನ ತ್ವರಿತಗೊಳಿಸಿ
- ಜನರಿಗೆ ಸಕಾಲಕ್ಕೆ ನಿಖರವಾದ ಮಾಹಿತಿ ನೀಡಿ, ಹರಡುವಿಕೆ ತಗ್ಗಿಸಿ

ಕೋವಿಡ್: ಸರ್ವಪಕ್ಷ ಸಭೆ ಕರೆಯಲು ಖರ್ಗೆ ಆಗ್ರಹ

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ಕೋವಿಡ್-19 ಪಿಡುಗಿನಿಂದ ದೇಶ ಎದುರಿಸುತ್ತಿರುವ ಸಂಕಷ್ಟದ ಪರಿಸ್ಥಿತಿಯನ್ನು ಪ್ರಧಾನ ಮಂತ್ರಿಗಳ ಕಚೇರಿ ಏಕಾಂಗಿಯಾಗಿ ನಿಭಾಯಿಸಲು ಸಾಧ್ಯವಿಲ್ಲ. ಪಿಡುಗಿನ ನಿರ್ವಹಣೆಗಾಗಿ ಸಾಂಘಿಕ ಮತ್ತು ಒಮ್ಮತದ ಮಾರ್ಗ ಅನುಸರಿಸುವುದು ಅಗತ್ಯ ಎಂದು ಕಾಂಗ್ರೆಸ್ ಮುಖಂಡ, ರಾಜ್ಯಸಭಾ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಹೇಳಿದ್ದಾರೆ.

ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಅವರು, ಈ ಪಿಡುಗನ್ನು ಸಮರ್ಥವಾಗಿ ನಿಭಾಯಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲು ಕೂಡಲೇ ಸರ್ವಪಕ್ಷ ಸಭೆ ಕರೆಯುವಂತೆ ಒತ್ತಾಯಿಸಿದ್ದಾರೆ.

'ಕೋವಿಡ್ ಪಿಡುಗು ನಿರ್ವಹಣೆಗೆ ಸಂಬಂಧಿಸಿ ತಜ್ಞರು ಹಾಗೂ ಹೋರಾಟಗಾರರು ನೀಡಿದ್ದ ಸಲಹೆ-ಶಿಫಾರಸುಗಳನ್ನು ಮೋದಿ ಕಡೆಗಣಿಸಿದರು' ಎಂದೂ ಟೀಕಿಸಿದ್ದಾರೆ.

'ಲಸಿಕೆ ಕಾರ್ಯಕ್ರಮಕ್ಕೆ ಕೇಂದ್ರದ ಬಜೆಟ್‌ನಲ್ಲಿ ₹ 35,000 ಕೋಟಿ ತೆಗೆದಿರಿಸಲಾಗಿದೆ. ಇದನ್ನು ಬಳಕೆ ಮಾಡಬೇಕು. ದೇಶದ ಜನರಿಗೆ ಲಸಿಕೆ ನೀಡುವ ತನ್ನ ನೈತಿಕ ಹೊಣೆಗಾರಿಕೆಯಿಂದ ಸರ್ಕಾರ ನುಣುಚಿಕೊಳ್ಳಬಾರದು' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಲಸಿಕೆಯ ಉತ್ಪಾದನೆಗೆ ಚುರುಕು ನೀಡಲು ಹಕ್ಕುಸ್ವಾಮ್ಯ ಕಾಯ್ದೆಯಡಿ ಕ್ರಮ ಕೈಗೊಳ್ಳಬೇಕು, ಲಸಿಕೆ ಖರೀದಿ, ಆಂಬುಲೆನ್ಸ್, ಪಿಪಿಇ ಕಿಟ್, ಸ್ಯಾನಿಟೈಜರ್, ಆಮ್ಲಜನಕ ಹಾಗೂ ವೆಂಟಿಲೇಟರ್‌ಗಳ ಮೇಲಿನ ಜಿಎಸ್‌ಟಿ ರದ್ದುಗೊಳಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ರಾಜ್ಯಸಭೆ ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರಿಗೂ ಪ್ರತ್ಯೇಕ ಪತ್ರ ಬರೆದಿರುವ ಖರ್ಗೆ, 'ಜನರು ಸಂಕಷ್ಟದಲ್ಲಿರುವ ಈ ಸಮಯದಲ್ಲಿ ಸಂಸತ್ ಮೂಕ ಪ್ರೇಕ್ಷಕನಂತೆ ಸುಮ್ಮನಿರಲು ಸಾಧ್ಯವಿಲ್ಲ. ದೇಶ ಎದುರಿಸುತ್ತಿರುವ ಪರಿಸ್ಥಿತಿ ಕುರಿತು ಚರ್ಚಿಸಲು ವರ್ಚುವಲ್ ವಿಧಾನದ ಮೂಲಕ ಸಂಸತ್‌ನ ಸ್ಥಾಯಿ ಸಮಿತಿಗಳ ಸಭೆ ನಡೆಸಲು ಅನುಮತಿ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಕಾಂಗ್ರೆಸ್‌ನ ಸಂಸದೀಯ ಪಕ್ಷದ ಸಭೆ ಶುಕ್ರವಾರ ನಡೆದಿತ್ತು. ಕೋವಿಡ್-19 ನಿರ್ವಹಣೆ ಕುರಿತಂತೆ ಮೋದಿ ಹಾಗೂ ವೆಂಕಯ್ಯ ನಾಯ್ಡು ಅವರಿಗೆ ಪತ್ರ ಬರೆಯುವಂತೆ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಅಂದಿನ ಸಭೆಯಲ್ಲಿ ಖರ್ಗೆ ಅವರಿಗೆ ಸೂಚಿಸಿದ್ದರು.

ವರ್ಚುವಲ್ ಸಭೆಗೆ ಟಿಎಂಸಿ ಒತ್ತಾಯ

ಕೋವಿಡ್ ಪರಿಸ್ಥಿತಿ ಕಾರಣದಿಂದಾಗಿ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳನ್ನು ಕುರಿತು ಚರ್ಚಿಸಲು ವರ್ಚುವಲ್ ಸ್ವರೂಪದಲ್ಲಿ ಸಂಸದೀಯ ಸಮಿತಿ ಸಭೆಗಳನ್ನು ನಡೆಸಬೇಕು ಎಂದು ಆಗ್ರಹಪಡಿಸಿ ರಾಜ್ಯಸಭೆ ಅಧ್ಯಕ್ಷ ಎಂ.ವೆಂಕಯ್ಯ ನಾಯ್ಡು ಮತ್ತು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ತೃಣಮೂಲ ಕಾಂಗ್ರೆಸ್ ಪಕ್ಷವು ಪತ್ರ ಬರೆದಿದೆ.

ಈ ವಿಚಾರ ಕುರಿತು ಟಿಎಂಸಿ ಬರೆಯುತ್ತಿರುವ ಮೂರನೇ ಪತ್ರ ಇದು. ಮೊದಲನೇ ಪತ್ರವನ್ನು 2020ರ ಜುಲೈ ಮತ್ತು ಎರಡನೇ ಪತ್ರವನ್ನು ಆಗಸ್ಟ್ 2020ರಲ್ಲಿ ಬರೆಯಲಾಗಿತ್ತು ಎಂದು ಪಕ್ಷವು ತಿಳಿಸಿದೆ.

ಬಿಜೆಪಿ ಸೋಲಿನ ವಿಡಂಬನಾತ್ಮಕ ವಿಡಿಯೊ: ಫೇಸ್‌ಬುಕ್ ನಿರ್ಬಂಧ

ಕೊಚ್ಚಿ (ಪಿಟಿಐ): ಕೇರಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸೋಲು ಕುರಿತಂತೆ ವಿಡಂಬನಾತ್ಮಕ ಪೋಸ್ಟ್ ಹಾಕಿದ್ದಕ್ಕಾಗಿ ಹೆಸರಾಂತ ಕವಿ ಕೆ.ಸಚ್ಚಿದಾನಂದನ್ ಅವರ ಫೇಸ್‌ಬುಕ್ ಖಾತೆಯನ್ನು ಅಮಾನತ್ತಿನಲ್ಲಿ ಇಡಲಾಗಿದೆ.

'24 ಗಂಟೆ ನಾನು ಯಾವುದೇ ಪೋಸ್ಟ್ ಕುರಿತು ಲೈಕ್ ಮಾಡುವಂತಿಲ್ಲ, ಅಭಿಪ್ರಾಯ ಹಾಕುವಂತಿಲ್ಲ. ಅಲ್ಲದೆ, ಸಾಮಾಜಿಕ ಜಾಲತಾಣದಲ್ಲಿ ನೇರ ಚರ್ಚೆಯಲ್ಲಿ ಭಾಗವಹಿಸದಂತೆ 30 ದಿನಗಳ ನಿರ್ಬಂಧ ವಿಧಿಸಲಾಗಿದೆ' ಎಂದು ಅವರು ತಿಳಿಸಿದರು.

ಸಚ್ಚಿದಾನಂದನ್ ಅವರು ಕೇರಳ ಸಾಹಿತ್ಯ ಅಕಾಡೆಮಿಯ ಮಾಜಿ ಕಾರ್ಯದರ್ಶಿ. 'ನಾನು ಬಿಜೆಪಿ ಪರಾಭವ ಕುರಿತು ವಿಡಂಬನಾತ್ಮಕ ವಿಡಿಯೊ ಹಂಚಿಕೊಳ್ಳಲು ಬಯಸಿದಾಗ, ನಿಯಮ ಉಲ್ಲಂಘನೆ ಆಗಿದೆ ಎಂಬಂತೆ ಫೇಸ್‌ಬುಕ್‌ನಿಂದ ಒಂದು ಸಂದೇಶ ಬಂದಿತು. ಸಾಕಷ್ಟು ಹಂಚಿಕೆಯಾಗಿರುವ ಆ ವಿಡಿಯೋ ನಿಂದನಾತ್ಮಕವಾಗಿರಲಿಲ್ಲ' ಎಂದು ತಿಳಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ಚಿಂತಕರ ನಡೆಗಳನ್ನು ಗಮನಿಸಲಾಗುತ್ತಿದೆ ಎಂದು ಅವರು ಆರೋಪಿಸಿದರು.


ಫೇಸ್‌ಬುಕ್ ಕ್ರಮವನ್ನು ಸಮರ್ಥಿಸಿಕೊಂಡಿರುವ ರಾಜ್ಯ ಬಿಜೆಪಿ, 'ಎಲ್ಲದಕ್ಕೂ ಮಿತಿ ಇರುತ್ತದೆ. ಸಾಮಾಜಿಕ ಜಾಲತಾಣಗಳ ಸಮುದಾಯ ಮಾನದಂಡಗಳನ್ನು ಉಲ್ಲಂಘಿಸಲು ಯಾರಿಗೂ ಅವಕಾಶ ಇರುವುದಿಲ್ಲ' ಎಂದು ಹೇಳಿದೆ.

ಫೇಸ್‌ಬುಕ್ ಕ್ರಮವನ್ನು ಕಾಂಗ್ರೆಸ್ ಮುಖಂಡ ಶಶಿ ತರೂರ್ ಮತ್ತು ಸಿಪಿಎಂ ನಾಯಕ ಟಿ.ಎಂ.ಥಾಮಸ್ ಐಸಾಕ್ ಅವರು ಟೀಕಿಸಿದ್ದಾರೆ.

'ನಮ್ಮ ರಾಜಕಾರಣದಲ್ಲಿ ಸೆನ್ಸಾರ್‌ಷಿಪ್‌ಗೆ ಅವಕಾಶ ನೀಡಬಾರದು' ಎಂದು ಐಸಾಕ್ ಪ್ರತಿಕ್ರಿಯಿಸಿದ್ದಾರೆ.

ಕೋವಿಡ್ ಭೀತಿ: ಕಷಾಯ, ಪಾನಕಕ್ಕೆ ಮೊರೆಹೋದ ಪ್ರತಿಭಟನನಿರತ ರೈತರು

ನವದೆಹಲಿ (ಪಿಟಿಐ): ದೇಸಿ ಕಷಾಯ ಮತ್ತು ಲಿಂಬೆಹಣ್ಣಿನ ಪಾನಕ– ಇವು ದೆಹಲಿಯ ಮೂರು ಗಡಿಗಳಲ್ಲಿ ಪ್ರತಿಭಟನೆಯಲ್ಲಿ ತೊಡಗಿರುವ ರೈತರು ನೆಚ್ಚಿಕೊಂಡಿರುವ ಪೇಯಗಳಾಗಿವೆ. ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಸುಮಾರು ಆರು ತಿಂಗಳಿಂದ ಹೋರಾಟ ನಡೆಸುತ್ತಿರುವ ರೈತರು ಈಗ ಕೋವಿಡ್ ಸಾಂಕ್ರಾಮಿಕ ಅಬ್ಬರಿಸುತ್ತಿರುವ ಸನ್ನಿವೇಶದಲ್ಲಿ ದೇಹಪ್ರತಿರೋಧ ಶಕ್ತಿ ಬೆಳೆಸಿಕೊಳ್ಳುವುದಕ್ಕೆ ಆದ್ಯತೆ ನೀಡಿದ್ದಾರೆ.



ಸೋಂಕಿಗೆ ಕೆಲವರು ಜೀವಕಳೆದುಕೊಂಡಿದ್ದಾರೆ. ಕೆಲವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ.

ಆದರೆ ಪ್ರತಿಭಟನಾನಿರತ ರೈತರಲ್ಲಿ ಹೆಚ್ಚಿನವರು ಸೋಂಕಿನ ವಿರುದ್ಧ ಪ್ರತಿರೋಧ ಶಕ್ತಿಯನ್ನು ವೃದ್ಧಿಸಿಕೊಳ್ಳಲು ಪೇಯಗಳ ಜೊತೆ ಮಲ್ಟಿ ವಿಟಾಮಿನ್ ಮತ್ತು ಸತುವಿನ ಅಂಶದ ಟ್ಯಾಬ್ಲೆಟ್‌ಗಳನ್ನು ಸೇವಿಸುತ್ತಿದ್ದಾರೆ.

ಮೂರು ಕೃಷಿ ಕಾಯ್ದೆಗಳನ್ನು ತೆಗೆದುಹಾಕಬೇಕೆಂಬ ಬೇಡಿಕೆ ಈಡೇರುವವರೆಗೆ ಸ್ಥಳದಿಂದ ಕದಲದಿರಲೂ ಅವರು ಪಣ ತೊಟ್ಟಿದ್ದಾರೆ. ಜೊತೆಗೆ ಲಸಿಕೆ ತೆಗೆದುಕೊಳ್ಳುವುದಕ್ಕೆ ತಾವು ಸಿದ್ಧರಿದ್ದೇವೆ ಎಂದೂ ಹೇಳುತ್ತಿದ್ದಾರೆ. ಸಿಂಘು, ಟಿಕ್ರಿ ಮತ್ತು ಘಾಜಿಪುರ ಗಡಿಯಲ್ಲಿ ಪ್ರತಿಭಟನೆ ನಡೆಯುತ್ತಿದೆ.

ಪರೀಕ್ಷೆಯಲ್ಲಿ ಕೊರೊನಾ ದೃಢಪಟ್ಟ ಕೆಲವರನ್ನು ಅಲ್ಲಿಂದ ಬಲವಂತವಾಗಿ ಕಳುಹಿಸಲಾಗಿದೆ. ಲಕ್ಷಣಗಳಿರುವ ಕೆಲವರು ಚಿಕಿತ್ಸೆಗೆ ಒಳಗಾಗಿದ್ದಾರೆ.

'ಇಲ್ಲಿ ಇದುವರೆಗೆ ಕೋವಿಡ್ ಪ್ರಕರಣಗಳು ಕಂಡುಬಂದಿಲ್ಲ. ಕೆಲವರಿಗೆ ಆರೋಗ್ಯಸಮಸ್ಯೆ ಕಂಡುಬಂದರೂ ಅವರು ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ. ಎಲ್ಲರೂ ಕಷಾಯ, ಶರಬತ್ತು ಕುಡಿಯುತ್ತಿದ್ದಾರೆ' ಎಂದು ಬಿಕೆಯು ಮಾಧ್ಯಮ ಉಸ್ತುವಾರಿ ವಹಿಸಿರುವ ಧರ್ಮೇಂದ್ರ ಮಲಿಕ್ ತಿಳಿಸಿದರು.

14 ದಿನ ರಾಜ್ಯ ಲಾಕ್‌ಡೌನ್

ಒಂದನೇ ಪುಟದಿಂದ

ಅನಗತ್ಯವಾಗಿ ರಸ್ತೆಗಿಳಿಯುವವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ, ಸಾಂಕ್ರಾಮಿಕ ನಿಯಂತ್ರಣ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ (ಐಪಿಸಿ) ಅಡಿಯಲ್ಲಿ ಪ್ರಕರಣ ದಾಖಲಿಸುವುದಕ್ಕೂ ಪೊಲೀಸರಿಗೆ ನಿರ್ದೇಶನ ನೀಡಲಾಗಿದೆ.

ಖರೀದಿಗೆ ನಾಲ್ಕು ತಾಸು: ಲಾಕ್‌ಡೌನ್ ಅವಧಿಯಲ್ಲಿ ಅಗತ್ಯ ವಸ್ತುಗಳ ಖರೀದಿಗೆ ಬೆಳಿಗ್ಗೆ 6ರಿಂದ 10ರವರೆಗೆ ಮಾತ್ರ ಅವಕಾಶ ಇದೆ. ಈ ಅವಧಿಯಲ್ಲೂ ಜನರು ವಾಹನಗಳನ್ನು ಬಳಸಲು ಅವಕಾಶ ವಿಲ್ಲ. ತಮ್ಮ ಮನೆಯ ಸಮೀಪದ ಅಂಗಡಿಗಳಿಗೆ ಕಾಲ್ನಡಿಗೆಯಲ್ಲೇ ಹೋಗಿ ಖರೀದಿಸಬೇಕು.

ಬೆಳಿಗ್ಗೆ ಈ ನಾಲ್ಕು ಗಂಟೆಗಳ ಅವಧಿಯಲ್ಲಿ ಹಾಲು, ಹಣ್ಣು, ತರಕಾರಿ, ಮೀನು, ಮಾಂಸ, ದಿನಸಿ ಪದಾರ್ಥಗಳನ್ನು ಮಾರಾಟ ಮಾಡಲು ಅವಕಾಶವಿದೆ. ಮದ್ಯದಂಗಡಿಗಳಲ್ಲೂ ಪಾರ್ಸೆಲ್ ಸೇವೆ ಲಭ್ಯವಿರಲಿದೆ. ಆಸ್ಪತ್ರೆಗಳು, ಔಷಧಿ ಅಂಗಡಿಗಳು, ತುರ್ತುಸೇವೆಗೆ ಸಂಬಂಧಿಸಿದ ಕೆಲವು ಕಚೇರಿಗಳು ಮಾತ್ರ ಇಡೀ ದಿನ ತೆರೆದಿರುತ್ತವೆ. ತಳ್ಳುಗಾಡಿಗಳಲ್ಲಿ ಮತ್ತು ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಹಣ್ಣು, ತರಕಾರಿಗಳ ಮಾರಾಟ, ನಂದಿನಿ ಹಾಲಿನ ಮಳಿಗೆಗಳು ಬೆಳಿಗ್ಗೆ 6 ರಿಂದ ಸಂಜೆ 6ರವರೆಗೆ ವಹಿವಾಟು ನಡೆಸಬಹುದು.

ಚೆಕ್‌ಪೋಸ್ಟ್ ನಿರ್ಮಾಣ: ರಾಜ್ಯದ ಎಲ್ಲ ಅಂತರ ಜಿಲ್ಲಾ ಗಡಿ ಪ್ರದೇಶಗಳು, ಅಂತರ ರಾಜ್ಯ ಗಡಿಗಳಲ್ಲಿ ಪೊಲೀಸ್ ಮತ್ತು ಕಂದಾಯ ಇಲಾಖೆಗಳು ಜಂಟಿಯಾಗಿ ಚೆಕ್‌ಪೋಸ್ಟ್ ತೆರೆದಿವೆ.

ನಗರ ಪ್ರದೇಶಗಳು, ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲೂ ನೂರಾರು ಸಂಖ್ಯೆಯ ಚೆಕ್‌ಪೋಸ್ಟ್‌ಗಳನ್ನು ತೆರೆದಿದ್ದು, ವಾಹನ ಗಳ ತಪಾಸಣೆಗೆ ವ್ಯವಸ್ಥೆ ಮಾಡಲಾಗಿದೆ.

ಸರ್ಕಾರ ಸೂಚಿಸಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳು ಮತ್ತು ಸಿಬ್ಬಂದಿ ಗುರುತಿಚೀಟಿ ತೋರಿಸಿ ಕಚೇರಿಗಳಿಗೆ ಹೋಗಬಹುದು.

ಹಣ್ಣು– ತರಕಾರಿ: ವಾಹನ ಬಳಕೆಗೆ ಅವಕಾಶ

ತಳ್ಳುಗಾಡಿಗಳಲ್ಲಿ ತರಕಾರಿ ಮಾರಾಟ ಮಾಡುವವರು ಬೆಳಿಗ್ಗೆ ಸಗಟು ಮಾರುಕಟ್ಟೆಗೆ ಹೋಗಿ, ತರಕಾರಿ ಖರೀದಿಸಿ ತರಲು ವಾಹನ ಬಳಸುವ ವಿಚಾರದಲ್ಲಿ ಗೊಂದಲ ಉಂಟಾಗಿತ್ತು. ಆದರೆ, ಮಾರಾಟಗಾರರು ಬೆಳಿಗ್ಗಿನ ಅವಧಿಯಲ್ಲಿ ಸಗಟು ಮಾರುಕಟ್ಟೆಗೆ ಹೋಗಿ ಬರಲು ವಾಹನ ಬಳಸಬಹುದು ಎಂದು ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಸ್ಪಷ್ಟಪಡಿಸಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ತಳ್ಳುಗಾಡಿಗಳಲ್ಲಿ ತರಕಾರಿ, ಹಣ್ಣು ಮಾರುವವರು ಸಗಟು ಮಾರುಕಟ್ಟೆಗಳಿಗೆ ಹೋಗಿ ಖರೀದಿಸಿ ತರಲು ವಾಹನ ಬಳಸಬಹುದು. ಆದರೆ, ಬೀದಿಗಳಲ್ಲಿ ಮಾರಾಟಕ್ಕೆ ವಾಹನಗಳನ್ನು ಬಳಸುವಂತಿಲ್ಲ' ಎಂದು ಹೇಳಿದರು.

ಮುಗಿಯದ ಗೊಂದಲ: ಔಷಧಿ, ವೈದ್ಯಕೀಯ ಪರಿಕರಗಳು, ಆಸ್ಪತ್ರೆಗಳಲ್ಲಿ ಬಳಸುವ ಕೆಲವು ವಸ್ತುಗಳು, ಆಮ್ಲಜನಕ ಉತ್ಪಾದನೆ, ಆಹಾರ ಮತ್ತಿತರ ಅಗತ್ಯ ವಸ್ತುಗಳು, ಪೆಟ್ರೋಲಿಯಂ ಶುದ್ಧೀಕರಣ ಸೇರಿದಂತೆ ಕೆಲವು ಕೈಗಾರಿಕೆಗಳು ಕಾರ್ಯಾಚರಣೆ ನಡೆಸಲು ಅವಕಾಶ ನೀಡಲಾಗಿದೆ. ಆದರೆ, ಕಾರ್ಮಿಕರ ಪ್ರಯಾಣಕ್ಕೆ ಸಂಬಂಧಿಸಿದಂತೆ ಗೊಂದಲ ಮುಂದುವರಿದಿದೆ.

ಕಾರ್ಮಿಕರು ಖಾಸಗಿ ವಾಹನ ಬಳಸುವಂತಿಲ್ಲ ಎಂದು ರಾಜ್ಯ ಸರ್ಕಾರ ನಿರ್ಬಂಧ ವಿಧಿಸಿದೆ. ಕೆಲವೆಡೆ ಕಂಪನಿಗಳ ವಾಹನ ಬಳಕೆಗೆ, ಅನಿವಾರ್ಯವಾದರೆ ಕಾರ್ಮಿಕರ ಸ್ವಂತ ವಾಹನ ಬಳಕೆಗೆ ಜಿಲ್ಲಾಧಿಕಾರಿ ಅವಕಾಶ ನೀಡಿದ್ದಾರೆ. ಕೆಲವೆಡೆ ಅಂತಹ ಕ್ರಮ ಕೈಗೊಳ್ಳದೇ ಇರುವುದರಿಂದ ಉದ್ದಿಮೆಗಳ ಪ್ರತಿನಿಧಿಗಳು ಮತ್ತು ಕಾರ್ಮಿಕರು ಗೊಂದಲದಲ್ಲೇ ಇದ್ದಾರೆ.

ಜನ ದಂಗೆ ಎದ್ದಾರು: ಸಿದ್ದರಾಮಯ್ಯ



ಬೆಂಗಳೂರು:'ರೋಗಗ್ರಸ್ತ ಬಿಜೆಪಿ ಸರ್ಕಾರದಿಂದ ಜನತೆ ಬವಣೆ ಪಡುವಂತಾಗಿದೆ. ಗ್ರಾಮೀಣ ಪ್ರದೇಶದ ಜನತೆ ದಂಗೆ ಎದ್ದರೂ ಆಶ್ಚರ್ಯ ಇಲ್ಲ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ಲಾಕ್‌ಡೌನ್ ಗೊಂದಲದ ಗೂಡಾಗಿದೆ. ಬೆಳಿಗ್ಗೆ 6ರಿಂದ 10ವರೆಗೆ ದಿನಸಿ, ತರಕಾರಿ, ಮೀನು-ಮಾಂಸದ ಅಂಗಡಿ ತೆರೆಯಲು ಅವಕಾಶ ನೀಡಿ ಈ ಅವಧಿಯಲ್ಲಿ ವಾಹನ ಸಂಚಾರ ನಿಷೇಧಿಸಿರುವುದು ಮೂರ್ಖತನ' ಎಂದಿದ್ದಾರೆ.

'ಗ್ರಾಮೀಣ ಪ್ರದೇಶಗಳಲ್ಲಿ ಅಂಗಡಿ- ಮುಂಗಟ್ಟುಗಳು 2-3 ಕಿ.ಮೀ. ದೂರದಲ್ಲಿವೆ. ಅಲ್ಲಿಂದ ಮನೆ ಸಾಮಾನುಗಳನ್ನು ಹಿರಿಯರು, ಅಶಕ್ತರು ಹೊತ್ತುಕೊಂಡು ಬರಬೇಕೇ. ಅವರಿಗೇನಾದರೂ ಆಗಿಬಿಟ್ಟರೆ ಯಾರು ಹೊಣೆ' ಎಂದೂ ಪ್ರಶ್ನಿಸಿದ್ದಾರೆ.

ತುಘಲಕ್ ಸರ್ಕಾರ: 'ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕು, ಎಟಿಎಂ, ಆಸ್ಪತ್ರೆ ತೆರೆದಿರುತ್ತದೆ. ಅಲ್ಲಿಗೆ ವಾಹನದಲ್ಲಿ ಹೋಗಲು ನಿಷೇಧ ಇದೆ. ಹೊಟೇಲ್‌ನಲ್ಲಿ ಪಾರ್ಸಲ್‌ಗೆ ಅವಕಾಶ ಇದೆ. ವಾಹನ ಮಾತ್ರ ಬಳಸುವಂತಿಲ್ಲ. ಇದೆಂಥ ತುಘಲಕ್ ಸರ್ಕಾರ' ಎಂದೂ ವಾಗ್ದಾಳಿ ನಡೆಸಿದ್ದಾರೆ.

400 ನಿವೃತ್ತ ವೈದ್ಯರ ನೇಮಕಕ್ಕೆ ಆದೇಶ

ನವದೆಹಲಿ (ಪಿಟಿಐ): ಕೋವಿಡ್-19 ರೋಗಿಗಳ ಚಿಕಿತ್ಸೆಯಲ್ಲಿ ನೆರವಾಗಲು, ಸೇನೆಯಿಂದ ನಿವೃತ್ತರಾಗಿರುವ 400 ವೈದ್ಯರನ್ನು ನೇಮಕ ಮಾಡಿಕೊಳ್ಳುವಂತೆ ಆರ್ಮ್ಡ್ ಫೋರ್ಸಸ್ ಮೆಡಿಕಲ್ ಸರ್ವೀಸಸ್‌ಗೆ (ಎಎಫ್‌ಎಂಎಸ್) ಆದೇಶಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಭಾನುವಾರ ತಿಳಿಸಿದೆ.

ಆರ್ಮಿ ಮೆಡಿಕಲ್ ಕಾರ್ಪ್ಸ್ (ಎಂಎಂಸಿ) ಹಾಗೂ ಶಾರ್ಟ್ ಸರ್ವೀಸ್ ಕಮಿಷನ್‌ನ (ಎಸ್‌ಎಸ್‌ಸಿ) ವೈದ್ಯರನ್ನು ಗರಿಷ್ಠ 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವಂತೆ ಆದೇಶಿಸಲಾಗಿದೆ.

ಕೊರೊನಾ ಸೋಂಕಿನ ಎರಡನೇ ಅಲೆ ದೇಶದ ಜನರನ್ನು ಸಂಕಷ್ಟಕ್ಕೆ ದೂಡಿದೆ. ಅನೇಕ ರಾಜ್ಯಗಳ ಆಸ್ಪತ್ರೆಗಳಲ್ಲಿ ವೈದ್ಯರು, ಆರೋಗ್ಯ ಕಾರ್ಯಕರ್ತರ ಕೊರತೆ ಇದೆ. ಔಷಧಿ, ಲಸಿಕೆ ಹಾಗೂ ಆಮ್ಲಜನಕ, ಹಾಸಿಗೆಗಳು ಸಿಗದೇ ರೋಗಿಗಳು ಪರದಾಡುವಂತಾಗಿದೆ. ನಿವೃತ್ತಿ ಸಮೀಪಿಸುತ್ತಿರುವ ವೈದ್ಯರ ಸೇವಾವಧಿಯನ್ನು ಡಿ. 31ರ ವರೆಗೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿದೆ.

ರಾಜಸ್ಥಾನ: ಪೊಲೀಸರಿಂದ ಕಟ್ಟುನಿಟ್ಟಿನ ಲಾಕ್‌ಡೌನ್ ಜಾರಿ

ಮನವೊಲಿಕೆ: 75 ಮದುವೆ ಮುಂದೂಡಿಕೆ

ಕೋಟಾ, ರಾಜಸ್ಥಾನ (ಪಿಟಿಐ): ಕೋವಿಡ್ ಸೋಂಕು ತಡೆಗೆ ಜಾರಿಗೊಳಿಸಿರುವ ಲಾಕ್‌ಡೌನ್ ನಿಯಮಗಳ ಕುರಿತು ಪೊಲೀಸರು ಕುಟುಂಬಗಳ ಮನವೊಲಿಸಿದ ಬಳಿಕ ಇಲ್ಲಿ ಒಂದೇ ದಿನ ಸುಮಾರು 75 ಮದುವೆಗಳನ್ನು ಮುಂದೂಡಲಾಗಿದೆ.

ಕೋಟಾ ಗ್ರಾಮೀಣ ಠಾಣೆ ಮತ್ತು ದಿಗೊಡ್ ಪೊಲೀಸ್ ಠಾಣೆಯ ಇಬ್ಬರು ಕಾನ್‌ಸ್ಟೆಬಲ್‌ಗಳು, ಪರಿಶೀಲನೆಗಾಗಿ ಭೇಟಿ ನೀಡಿದ್ದ ಡಿಜಿಐ ರವಿದತ್ ಗೌರ್ ಅವರಿಗೆ ಈ ಮಾಹಿತಿ ನೀಡಿದ್ದಾರೆ. ಇದೇ ತಿಂಗಳು ನಡೆಯಬೇಕಿದ್ದ ಮದುವೆಗಳನ್ನು ಮುಂದೂಡುವಂತೆ ತಾವು ಮೂರು ಕುಟುಂಬಗಳ ಮನವೊಲಿಸಿದ್ದಾಗಿ ತಿಳಿಸಿದ್ದಾರೆ.

'ಈ ಮೂಲಕ ಲಾಕ್‌ಡೌನ್ ನಿಯಮಗಳ ಕಟ್ಟುನಿಟ್ಟಿನ ಜಾರಿಗಾಗಿ ಈ ಇಬ್ಬರು ಕಾನ್‌ಸ್ಟೆಬಲ್‌ಗಳಿಗೆ ತಲಾ ₹ 1,100 ನಗದು ಬಹುಮಾನ ನೀಡಲಾಗಿದೆ' ಎಂದು ಡಿಎಸ್‌ಪಿ (ಇಟಾವಾ) ವಿಜಯಶಂಕರ್ ಶರ್ಮಾ ಮಾಹಿತಿ ನೀಡಿದ್ದಾರೆ.



ಸಾಂದರ್ಭಿಕ ಚಿತ್ರ

'ಇದೇ ಸಂದರ್ಭದಲ್ಲಿ ಡಿಜಿಐ ಅವರು ಅಧಿಕಾರಿಗಳಿಗೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮುಖಂಡರು ಮತ್ತು ಜನಪ್ರತಿನಿಧಿ ಗಳ ಸಭೆ ಕರೆದು ಕುಟುಂಬಗಳ ಜೊತೆಗೆ ಚರ್ಚಿಸಿ ಮನವೊಲಿಸಲು ಸೂಚಿಸಿದ್ದರು. ಅದರಂತೆ ಕ್ರಮಕೈಗೊಂಡಿದ್ದು, ಇದರ ಪರಿಣಾಮ ಒಂದೇ ದಿನ ನಿಗದಿಯಾಗಿದ್ದ ಸುಮಾರು 75 ಮದುವೆಗಳು ಮುಂದೂಡಿಕೆಯಾಗಿವೆ' ಎಂದರು.

ಕೋಟಾ ಗ್ರಾಮೀಣ ಜಿಲ್ಲೆಯ ಎಸ್‌ಪಿ ಶರದ್ ಚೌಧರಿ ಅವರು, ಈ ಅಭಿಯಾನವನ್ನು ಶನಿವಾರ ಗ್ರಾಮೀಣ ಭಾಗದಲ್ಲಿ ಕೈಗೊಳ್ಳಲಾಗಿತ್ತು. ಇಬ್ಬರು ಕಾನ್‌ಸ್ಟೆಬಲ್‌ಗಳು, ಠಾಣಾಧಿಕಾರಿ ಕುಟುಂಬಗಳ ಮನವೊಲಿಸಿದರು ಎಂದು ಹೇಳಿದರು.

ನನ್ನ ತಂಗಿಯ ಮದುವೆ ಶುಕ್ರವಾರ ನಡೆಬೇಕಿತ್ತು. ಅದೇ ದಿನ ಬೆಳಿಗ್ಗೆ ಗಸ್ತು ಕರ್ತವ್ಯದಲ್ಲಿದ್ದ ಪೊಲೀಸರು ಪರಿಸ್ಥಿತಿ ಕುರಿತು ಮನವೊಲಿಸಿದರು. ಅದರಂತೆ ಮದುವೆ ಮುಂದೂಡಲಾಯಿತು ಎಂದು ರಿಂಕೇಶ್ ಕುಮಾರ್ ಅವರು ಪ್ರತಿಕ್ರಿಯಿಸಿದರು.

ನಿಧನ ವಾರ್ತೆ


ರಘುನಾಥ ಮೊಹಾಪಾತ್ರ



ಭುವನೇಶ್ವರ (ಪಿಟಿಐ): ಹೆಸರಾಂತ ಶಿಲ್ಪಿ, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾಗಿದ್ದ ರಾಜ್ಯಸಭೆ ಸದಸ್ಯ ರಘುನಾಥ ಮೊಹಾಪಾತ್ರ (78) ಭಾನುವಾರ ಕೋವಿಡ್‌ನಿಂದಾಗಿ ಮೃತಪಟ್ಟರು.

ಅವರನ್ನು ಏ. 22ರಂದು ಇಲ್ಲಿನ ಏಮ್ಸ್‌ಗೆ ದಾಖಲು ಮಾಡಲಾಗಿತ್ತು. 'ವೈದ್ಯರ ಪ್ರಯತ್ನಗಳ ನಡುವೆಯೂ ಚಿಕಿತ್ಸೆಗೆ ಸ್ಪಂದಿಸದೇ ಅವರು ಮಧ್ಯಾಹ್ನ ಮೃತಪಟ್ಟರು' ಎಂದು ಏಮ್ಸ್‌ನ ನಿರ್ದೇಶಕಿ ಡಾ.ಗೀತಾಂಜಲಿ ತಿಳಿಸಿದರು.

ಕೇರಳದ ಪತ್ರಕರ್ತ ವಿಪಿನ್ ಚಂದ್



ಕೊಚ್ಚಿ (ಪಿಟಿಐ): 'ಮನೋರಮಾ ನ್ಯೂಸ್'ನ ಮುಖ್ಯ ವರದಿಗಾರ ವಿಪಿನ್ ಚಂದ್ (42) ಅವರು ಕೋವಿಡ್ ಸಂಬಂಧಿತ ಸಮಸ್ಯೆಯಿಂದ ಭಾನುವಾರ ನಿಧನರಾದರು.

'ವಿಪಿನ್ ಚಂದ್ ಅವರು ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲೂ ಕೆಲಸದಲ್ಲಿ ಸಕ್ರಿಯರಾಗಿದ್ದರು. ಎರಡು ವಾರಗಳ ಹಿಂದೆ ಅವರಿಗೆ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಅವರನ್ನು ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿ ಇರಿಸಲಾಗಿತ್ತು. ಆದರೆ ಬಳಿಕ ಅವರನ್ನು ಖಾಸಗಿ ಆಸ್ಪತ್ರೆಯೊಂದಕ್ಕೆ ಸೇರಿಸಲಾಯಿತು' ಎಂದು ಕುಟುಂಬದವರು ತಿಳಿಸಿದರು.

'ವಿಪಿನ್ ಪರಿಸ್ಥಿತಿ ಹದಗೆಟ್ಟಿದ್ದರಿಂದ ಅವರನ್ನು ಕೊಚ್ಚಿಯ ಆಸ್ಪತ್ರೆಯೊಂದಕ್ಕೆ ಸೇರಿಸಲಾಯಿತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ನಸುಕಿನ 2 ಗಂಟೆಗೆ ಅವರು ಆಸ್ಪತ್ರೆಯಲ್ಲಿ ಕೊನೆ ಉಸಿರೆಳೆದರು' ಎಂದು ಅವರು ಮಾಹಿತಿ ನೀಡಿದರು.

ಎರ್ನಾಕುಲಂದ ಅಲಂಗಡ್ ನಿವಾಸಿ ವಿಪಿನ್ ಚಂದ್ ಅವರು 2005ರಲ್ಲಿ ಪತ್ರಿಕೋದ್ಯಮ ವೃತ್ತಿಯನ್ನು ಪ್ರಾರಂಭಿಸಿದ್ದರು. 2012ರಲ್ಲಿ 'ಮಾತೃಭೂಮಿ ನ್ಯೂಸ್' ಸೇರಿದ್ದರು.

ರೈಲ್ವೆಯಿಂದ 4,200 ಟನ್ ದ್ರವೀಕೃತ ಆಮ್ಲಜನಕ ಸಾಗಣೆ



ನವದೆಹಲಿ (ಪಿಟಿಐ): ದೇಶದಲ್ಲಿ ಕೊರೊನಾ ಸೋಂಕಿನ ಎರಡನೇ ಅಲೆ ತೀವ್ರಗೊಂಡ ನಂತರ ಏ. 19 ರಿಂದ ಈ ವರೆಗೆ ಭಾರತೀಯ ರೈಲ್ವೆಯು ವಿವಿಧ ರಾಜ್ಯಗಳಿಗೆ ಒಟ್ಟು 4,200 ಟನ್ ದ್ರವೀಕೃತ ವೈದ್ಯಕೀಯ ಆಮ್ಲಜನಕ (ಎಲ್ಎಂಒ) ತಲುಪಿಸಿದೆ.

ಈ ಕಾರ್ಯಕ್ಕಾಗಿ ನಿಯೋಜನೆಗೊಂಡಿರುವ 68 'ಆಕ್ಸಿಜನ್ ಎಕ್ಸ್‌ಪ್ರೆಸ್'ಗಳು ದ್ರವೀಕೃತ ವೈದ್ಯಕೀಯ ಆಮ್ಲಜನಕವಿರುವ 268 ಟ್ಯಾಂಕರ್‌ಗಳನ್ನು ಸಾಗಿಸಿವೆ ಎಂದು ರೈಲ್ವೆಯು ಭಾನುವಾರ ಹೇಳಿದೆ.

ಮಹಾರಾಷ್ಟ್ರಕ್ಕೆ 293 ಟನ್, ಉತ್ತರ ಪ್ರದೇಶಕ್ಕೆ 1,230 ಟನ್, ಮಧ್ಯಪ್ರದೇಶಕ್ಕೆ 271 ಟನ್, ಹರಿಯಾಣ– 555 ಟನ್, ತೆಲಂಗಾಣ– 123, ರಾಜಸ್ಥಾನ–40, ದೆಹಲಿಗೆ 1,679 ಟನ್ ಆಮ್ಲಜನಕ ತಲುಪಿಸಲಾಗಿದೆ ಎಂದೂ ತಿಳಿಸಿದೆ.

ನಿರ್ಮಾಣ ನಿಲ್ಲಿಸಿ, ವೈದ್ಯಕೀಯ ಸೌಲಭ್ಯ ಒದಗಿಸಿ • 'ಸೆಂಟ್ರಲ್ ವಿಸ್ತಾ' ಯೋಜನೆ ಜಾರಿಗೆ ಟೀಕೆ

'ಜನರಿಗೆ ಬೇಕು ಪ್ರಾಣವಾಯು'

ನವದೆಹಲಿ(ಪಿಟಿಐ): 'ದೇಶಕ್ಕೆ ಈಗ ಬೇಕಾಗಿರುವುದು ಪ್ರಾಣವಾಯು. ಪ್ರಧಾನಮಂತ್ರಿಗೆ ನಿವಾಸವಲ್ಲ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದ್ದಾರೆ. ಕೋವಿಡ್ ಸ್ಥಿತಿ ನಡುವೆಯೂ 'ಸೆಂಟ್ರಲ್ ವಿಸ್ತಾ' ಕಾಮಗಾರಿಯು ನಡೆದಿರುವುದಕ್ಕೆ ಪ್ರಧಾನಿ ನಿಲುವನ್ನು ಕಟುವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.



ರಾಹುಲ್ ಗಾಂಧಿ

ಕೋವಿಡ್ ಕಾರಣದಿಂದ ಹಲವು ನಿರ್ಬಂಧಗಳನ್ನು ವಿಧಿಸಿದ್ದರೂ ಕೇಂದ್ರ ಸರ್ಕಾರ ಸೆಂಟ್ರಲ್ ವಿಸ್ತಾ ಯೋಜನೆಯನ್ನು –ಅಗತ್ಯ ವಸ್ತುಗಳ ಸೇವೆ–ವ್ಯಾಪ್ತಿಗೆ ತಂದಿದೆ. ಈ ಮೂಲಕ ಕಟ್ಟಡ ನಿರ್ಮಾಣ ಕಾರ್ಮಿಕರು ಲಾಕ್‌ಡೌನ್‌ನ ನಡುವೆಯೂ ಸರಾಗವಾಗಿ ಓಡಾಡಲು ಅನುವು ಮಾಡಿಕೊಟ್ಟಿದೆ.

ಈ ಕುರಿತು ಟ್ವೀಟ್ ಮಾಡಿರುವ ರಾಹುಲ್‌ಗಾಂಧಿ, 'ದೇಶದ ಜನರಿಗೆ ಈಗ ಬೇಕಾಗಿರುವುದು ಪ್ರಾಣವಾಯು' ಎಂದು ಪ್ರತಿಪಾದಿಸಿದ್ದಾರೆ. ತಮ್ಮ ಟೀಕೆಗೆ ಪೂರಕವಾಗಿ ಆಮ್ಲಜನಕ ಸಿಲಿಂಡರ್‌ಗಳಿಗಾಗಿ ಜನರು ಸಾಲುಗಟ್ಟಿರುವ ಹಾಗೂ ಸೆಂಟ್ರಲ್ ವಿಸ್ತಾ ಯೋಜನೆಯ ಚಿತ್ರಗಳನ್ನು ಹಂಚಿಕೊಂಡಿದ್ದಾರೆ.

ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿವೆ. ಹಲವು ರಾಜ್ಯಗಳಲ್ಲಿ ವೈದ್ಯಕೀಯ ಆಮ್ಲಜನಕಕ್ಕೆ ಕೊರತೆಯಾಗಿದೆ. ಆಸ್ಪತ್ರೆಗಳು ಮತ್ತು ರೋಗಿಗಳ ಸಂಬಂಧಿಕರು ಆಮ್ಲಜನಕದ ತ್ವರಿತ ಸರಬರಾಜಿನ ನಿರೀಕ್ಷೆಯಲ್ಲಿದ್ದಾರೆ. ಈ ಸ್ಥಿತಿಯಲ್ಲಿ ಸೆಂಟ್ರಲ್ ವಿಸ್ತಾ ಯೋಜನೆ ಕೈಬಿಟ್ಟು, ವೈದ್ಯಕೀಯ ಸೌಕರ್ಯಗಳನ್ನು ಒದಗಿಸಬೇಕು ಎಂದು ಕಾಂಗ್ರೆಸ್ ಪಕ್ಷ ಒತ್ತಾಯಿಸುತ್ತಿದೆ. ಯೋಜನೆಯನ್ನು ಅಗತ್ಯವಸ್ತುಗಳ ಸೇವೆ ವ್ಯಾಪ್ತಿಗೆ ತಂದಿರುವುದಕ್ಕೂ ತೀವ್ರ ಟೀಕೆ ವ್ಯಕ್ತವಾಗಿದೆ.

ಈ ಕುರಿತ ಇನ್ನೊಂದು ಟ್ವೀಟ್‌ನಲ್ಲಿ ರಾಹುಲ್ ಗಾಂಧಿ, 'ದೇಶದಾದ್ಯಂತ ಗ್ರಾಮೀಣ ಭಾಗದಲ್ಲಿ ಕೋವಿಡ್ ಸೋಂಕು ತೀವ್ರಗತಿಯಲ್ಲಿ ಹರಡುತ್ತಿದೆ. ನಗರ ಪ್ರದೇಶಗಳ ನಂತರ ಈಗ ಗ್ರಾಮೀಣ ಪ್ರದೇಶಗಳು ಕೂಡಾ ದೇವರ ಮೇಲೆ ಭಾರ ಹಾಕುವಂತಾಗಿದೆ' ಎಂದು ಹೇಳಿದ್ದಾರೆ.

'ಸೆಂಟ್ರಲ್ ವಿಸ್ತಾ' ನಿರ್ಮಾಣ ವಿಳಂಬ ಸಂಭವ

ಕೋವಿಡ್ ಪರಿಸ್ಥಿತಿ ನಡುವೆಯೇ ಸೆಂಟ್ರಲ್ ವಿಸ್ತಾ ಯೋಜನೆಗೆ ಭಾರಿ ಮೊತ್ತವನ್ನು ವ್ಯಯಿಸಲಾಗುತ್ತಿದೆ ಎಂಬ ವ್ಯಾಪಕ ಟೀಕೆಗಳ ಕಾರಣ ಉದ್ದೇಶಿತ ಯೋಜನೆ ನಿರ್ಮಾಣವನ್ನು ಕೇಂದ್ರ ಸರ್ಕಾರ ನಿಧಾನಗತಿಗೊಳಿಸುವ ಸಂಭವವಿದೆ.

–ನೂತನ ಸಂಸತ್ ಸಂಕೀರ್ಣ ಮತ್ತು ಸೆಂಟ್ರಲ್ ವಿಸ್ತಾ ಅವಿನ್ಯೂ– ಹೊರತುಪಡಿಸಿ ಯೋಜನೆಯ ಉಳಿದ ಕಟ್ಟಡಗಳ ನಿರ್ಮಾಣ ಕಾಮಗಾರಿಗಳನ್ನು ವಿಳಂಬಗೊಳಿಸಲಾಗುವುದು ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಸೆಂಟ್ರಲ್ ವಿಸ್ತಾ ಯೋಜನೆಯಡಿ ನೂತನ ಸಂಸತ್ ಸಂಕೀರ್ಣ, ಸೆಂಟ್ರಲ್ ವಿಸ್ತಾ ಅವಿನ್ಯೂಗೆ ಹೊಸ ರೂಪ (ರಾಜಪಥ), ಪ್ರಧಾನಿ ಮತ್ತು ಉಪರಾಷ್ಟ್ರಪತಿ ಅವರಿಗೆ ಹೊಸ ನಿವಾಸಗಳ ನಿರ್ಮಾಣ, ಪರಸ್ಪರ ಸಂಪರ್ಕವುಳ್ಳ 10 ಹೊಸ ಕಟ್ಟಡಗಳನ್ನು ಒಳಗೊಂಡ ಸಚಿವಾಲಯ ಹಾಗೂ ರಾಜಪಥದ ಇಕ್ಕೆಲಗಳಲ್ಲಿ ಕೆಲ ಸಂಕೀರ್ಣಗಳನ್ನು ನೆಲಸಮಗೊಳಿಸುವುದು ಸೇರಿದೆ.

₹ 862 ಕೋಟಿ ವೆಚ್ಚದ ಸಂಸತ್ ಸಂಕೀರ್ಣ ಮತ್ತು ₹ 477 ಕೋಟಿ ವೆಚ್ಚದ ಸೆಂಟ್ರಲ್ ವಿಸ್ತಾ ಅವಿನ್ಯೂ ಕಾಮಗಾರಿ ಈಗ ಪ್ರಗತಿಯಲ್ಲಿದೆ. ಮಧ್ಯದಲ್ಲಿ ಅದನ್ನು ಸ್ಥಗಿತಗೊಳಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಯೋಜನೆಯ ಇತರೆ ಕಾಮಗಾರಿಗಳನ್ನು ಕೋವಿಡ್ ಪರಿಸ್ಥಿತಿ ತಹಬದಿಗೆ ಬಂದ ಮೇಲೆ ಕೈಗೊಳ್ಳಲಾಗುವುದು ಎಂದು ನಗರ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಪ್ರಧಾನಿ ಮತ್ತು ಉಪರಾಷ್ಟ್ರಪತಿ ಅವರಿಗೆ ಹೊಸ ನಿವಾಸ ನಿರ್ಮಿಸಲು ನಗರ ವ್ಯವಹಾರಗಳ ಸಚಿವಾಲಯವು ಪರಿಸರ ಸಚಿವಾಲಯ ಅನುಮೋದನೆ ಪಡೆದಿದೆ. ಬಿಡ್ಡಿಂಗ್ ಪ್ರಕ್ರಿಯೆ ಇನ್ನಷ್ಟೇ ಆರಂಭವಾಗಬೇಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯೋಜನೆಯ ಅನುಸಾರ, ನೂತನ ಮನೆಗಳ ನಿರ್ಮಾಣ ಪ್ರಕ್ರಿಯೆ 2022ರ ಒಳಗೆ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಸರ್ಕಾರ ಈ ಎರಡೂ ಯೋಜನೆಗಳನ್ನು ವಿಳಂಬಗೊಳಿಸಲು ಚಿಂತನೆ ನಡೆಸಿದೆ. ಪ್ರಧಾನಮಂತ್ರಿಗಳ ನೂತನ ನಿವಾಸ ಮತ್ತು ಎಸ್‌ಪಿಜಿ ಬಿಲ್ಡಿಂಗ್ ನಿರ್ಮಾಣ ಕಾರ್ಯವು ಡಾಲ್‌ಹೌಸಿ ರಸ್ತೆಯಲ್ಲಿನ ಕೆಲ ಕಚೇರಿಗಳನ್ನು ಆಫ್ರಿಕಾ ಅವಿನ್ಯೂ ಮತ್ತು ಕಸ್ತೂರಬಾ ಗಾಂಧಿ ಮಾರ್ಗದಲ್ಲಿ ಹೊಸ ಕಟ್ಟಡಗಳಿಗೆ ಸ್ಥಳಾಂತರಿಸಿದ ನಂತರ ಆರಂಭವಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಲದೆ, ರಾಜಪಥದಲ್ಲಿ ಸಚಿವಾಲಯ ಕಟ್ಟಡ ನಿರ್ಮಿಸಲು ಹಾಲಿ ಇರುವ ಯಾವ ಕಟ್ಟಡಗಳನ್ನು ನೆಲಸಮಗೊಳಿಸಬೇಕು ಎಂದು ಸರ್ಕಾರ ಇನ್ನೂ ತೀರ್ಮಾನಿಸಿಲ್ಲ. ಸರ್ಕಾರ ಒಟ್ಟಾರೆ ₹ 23,000 ಕೋಟಿ ವೆಚ್ಚದಲ್ಲಿ ಸೆಂಟ್ರಲ್ ವಿಸ್ತಾ ಯೋಜನೆ ಜಾರಿಗೊಳಿಸುತ್ತಿದ್ದು, ನಿರ್ಮಾಣಕ್ಕೆ ನಿಗದಿಪಡಿಸಿದ್ದ ಗಡುವನ್ನು ಈಗಾಗಲೇ 2026ಕ್ಕೆ ವಿಸ್ತರಿಸಲಾಗಿದೆ.

ಕೋವಿಡ್ ಸವಾಲು ಎದುರಿಸಲು ಸ್ಪಂದಿಸಿ: ಐಎಂಎ ಎಚ್ಚರಿಕೆ



ನವದೆಹಲಿ (ಪಿಟಿಐ): ಹೆಚ್ಚುತ್ತಿರುವ ಕೋವಿಡ್-19 ಸಾಂಕ್ರಾಮಿಕ ರೋಗದ ತೀವ್ರತೆಯನ್ನು ಶಮನಗೊಳಿಸಲು ಕೇಂದ್ರ ಆರೋಗ್ಯ ಸಚಿವಾಲಯವು ಎಚ್ಚೆತ್ತುಕೊಂಡು ತಕ್ಷಣ ಸ್ಪಂದಿಸಬೇಕಿದೆ ಎಂದು ಭಾರತೀಯ ವೈದ್ಯಕೀಯ ಸಂಘ (ಐಎಂಎ) ಎಚ್ಚರಿಸಿದೆ.

ದೇಶದಲ್ಲಿ ತೀವ್ರವಾಗಿ ವ್ಯಾಪಿಸಿರುವ ಕೋವಿಡ್-19 ಎರಡನೇ ಅಲೆಯನ್ನು ನಿಯಂತ್ರಿಸಲು ಕೇಂದ್ರ ಆರೋಗ್ಯ ಇಲಾಖೆಯು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ವೈದ್ಯರ ಸಂಘವು ಆರೋಪಿಸಿದೆ.

ಆರೋಗ್ಯ ಸಚಿವಾಲಯವು ನಿದ್ರೆಯಿಂದ ಎಚ್ಚೆತ್ತುಕೊಂಡು ಕೋವಿಡ್-19 ಸಾಂಕ್ರಾಮಿಕ ರೋಗದ ಹೆಚ್ಚುತ್ತಿರುವ ಸವಾಲುಗಳನ್ನು ಕಡಿಮೆ ಮಾಡಲು ತ್ವರಿತವಾಗಿ ಸ್ಪಂದಿಸುವಂತೆ ಒತ್ತಾಯಿಸುತ್ತದೆ. ವಿನಾಶಕಾರಿ ಎರಡನೇ ಅಲೆಯಿಂದ ಉಂಟಾಗಿರುವ ಬಿಕ್ಕಟ್ಟನ್ನು ಎದುರಿಸುವಲ್ಲಿ ಆರೋಗ್ಯ ಸಚಿವಾಲಯ ತೋರಿದ ನಿರುತ್ಸಾಹ ಹಾಗೂ ಸೂಕ್ತವಲ್ಲದ ಕ್ರಮಗಳನ್ನು ನೋಡಿ ಐಎಂಎ ಆಶ್ಚರ್ಯಚಕಿತಗೊಂಡಿದೆ ಎಂದು ಪ್ರಕಟಣೆ ಹೇಳಿದೆ.

ಕಳೆದ 20 ದಿನಗಳಿಂದ ಆರೋಗ್ಯ ಮೂಲಸೌಕರ್ಯಗಳನ್ನು ಹೆಚ್ಚಿಸಲು ಹಾಗೂ ಮತ್ತು ಸಂಪೂರ್ಣ ಪೂರ್ವಯೋಜಿತ ರಾಷ್ಟ್ರೀಯ ಲಾಕ್‌ಡೌನ್ ಹೇರಲು ಒತ್ತಾಯಿಸುತ್ತಿದೆ. ಆದರೆ ಐಎಂಎ ಮಾಡಿರುವ ಸಲಹೆಗಳನ್ನು ಕಸದ ಬುಟ್ಟಿಗೆ ಹಾಕಲಾಗಿದೆ. ವಾಸ್ತವ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಟೀಕಿಸಿದೆ.

ಲಾಕ್‌ಡೌನ್ ಹೇರಲು ಕೇಂದ್ರ ನಿರಾಕರಿಸಿದ ಹಿನ್ನೆಲೆಯಲ್ಲಿ ಪ್ರತಿದಿನ ನಾಲ್ಕು ಲಕ್ಷಕ್ಕೂ ಹೆಚ್ಚು ಕೋವಿಡ್ ಪ್ರಕರಣಗಳು ದಾಖಲಾಗುತ್ತಿದ್ದು, ಗಂಭೀರ ಪ್ರಕರಣಗಳು ಶೇಕಡಾ 40ರಷ್ಟು ಹೆಚ್ಚಾಗಿದೆ. ರಾತ್ರಿ ಕರ್ಫ್ಯೂ ಯಾವುದೇ ಪರಿಣಾಮವನ್ನು ಬೀರಿಲ್ಲ. ಆರ್ಥಿಕತೆಗಿಂತಲೂ ಜನರ ಜೀವ ಮುಖ್ಯ ಎಂದು ಹೇಳಿದೆ.



ವಿದಾಯ

ಜಮ್ಮು– ಕಾಶ್ಮೀರದಲ್ಲಿ ಕೋವಿಡ್–19ನಿಂದ ಮೃತಪಟ್ಟವರ ಅಂತ್ಯಸಂಸ್ಕಾರದ ವೇಳೆ ಕುಟುಂಬದವರು ಭಾನುವಾರ ಪ್ರಾರ್ಥನೆ ಸಲ್ಲಿಸಿದರು –ಪಿಟಿಐ ಚಿತ್ರ

ಎರಡನೇ ಅಲೆ: ಅಧ್ಯಯನ ನಡೆಸಿದ ಐಸಿಎಂಆರ್ ವಿಜ್ಞಾನಿಗಳ ಪ್ರತಿಪಾದನೆ

ಭಾರತೀಯ ತಳಿ ಅಧಿಕ ರೋಗಕಾರಕ

ಪ್ರಜಾವಾಣಿ ವಾರ್ತೆ

ನವದೆಹಲಿ: ರೂಪಾಂತರಗೊಂಡಿರುವ ಸಾರ್ಸ್–ಕೋವ್–2 ವೈರಸ್‌ನ ಭಾರತೀಯ ತಳಿ (ಬಿ.1.617) ಅಧಿಕ ರೋಗಕಾರಕವಾಗಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ನಡೆಸಿರುವ ಹೊಸ ಅಧ್ಯಯನದಿಂದ ತಿಳಿದು ಬಂದಿದೆ.

ದೇಶದಲ್ಲಿ ಈಗಿನ ಸಂಕಷ್ಟ ಪರಿಸ್ಥಿತಿಗೆ ಕಾರಣವಾಗಿರುವ ಈ ರೂಪಾಂತರ ವೈರಸ್‌ಅನ್ನು ಕೇಂದ್ರ ಆರೋಗ್ಯ ಸಚಿವಾಲಯ 'ಕಳವಳಕಾರಿ ತಳಿ' ಎಂದು ಕರೆದಿದೆ.

ಈ ವೈರಸ್ (ಬಿ.1.617) ಸೋಂಕು ಇಲಿಗಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಐಸಿಎಂಆರ್ ಅಧ್ಯಯನ ನಡೆಸಿದೆ. ಅಧಿಕ ಸೋಂಕು, ತೂಕದಲ್ಲಿ ಭಾರಿ ಪ್ರಮಾಣದ ಇಳಿಕೆ ಕಂಡು ಬಂದಿದೆ. ಈ ಮೊದಲಿನ ತಳಿಗೆ ಹೋಲಿಸಿದರೆ, ಬಿ.1.617 ನಿಂದಾದ ಸೋಂಕಿನಿಂದ ಅವುಗಳ ಶ್ವಾಸಕೋಶಗಳು ಹೆಚ್ಚು ಹಾನಿಗೊಳಗಾಗಿದ್ದು ಕಂಡುಬಂದಿತು ಎಂದು ವಿಜ್ಞಾನಿಗಳು ಹೇಳಿದ್ದಾರೆ.

'ದೇಶದ 17 ರಾಜ್ಯಗಳಲ್ಲಿ ಕೋವಿಡ್–19 ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗುತ್ತಿರುವುದು ರೂಪಾಂತರಗೊಂಡಿರುವ ಈ ವೈರಸ್ ಎಷ್ಟು ರೋಗಕಾರಕ ಎಂಬುದನ್ನು ಸಾರುತ್ತದೆ. ಅದರಲ್ಲೂ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಕರ್ನಾಟಕ, ದೆಹಲಿ ಹಾಗೂ ಗುಜರಾತ್‌ನಲ್ಲಿ ಈ ತಳಿಯ ವೈರಸ್‌ನ ಸೋಂಕು ಅಧಿಕ' ಎಂದು ಐಸಿಎಂಆರ್ ಹೇಳಿದೆ.

ತಲಾ 9 ಇಲಿಗಳನ್ನು ಒಳಗೊಂಡ ಎರಡು ಗುಂಪುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಒಂದು ಗುಂಪಿನ ಇಲಿಗಳ ದೇಹದೊಳಗೆ ಬಿ1 (ಡಿಎ14ಜಿ) ವೈರಸ್, ಮತ್ತೊಂದು ಗುಂಪಿಗೆ ಬಿ 1.617 ವೈರಸ್‌ಅನ್ನು ಸೇರಿಸಲಾಯಿತು. ಕೆಲ ದಿನಗಳ ನಂತರ, ಬಿ 1.617 ವೈರಸ್‌ನ ಸೋಂಕಿಗೆ ಒಳಗಾಗಿದ್ದ ಇಲಿಗಳಲ್ಲಿಯೇ ಹೆಚ್ಚು ತೂಕ ನಷ್ಟ, ರಕ್ತಸ್ರಾವ ಹಾಗೂ ಶ್ವಾಸಕೋಶಗಳಲ್ಲಿ ಅಧಿಕ ಪ್ರಮಾಣದ ಹಾನಿ ಕಂಡುಬಂತು ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಲಸಿಕೆ ರಫ್ತು ಅಪರಾಧ: ಸಿಸೋಡಿಯಾ



ಕೋವಿಡ್–19 ಲಸಿಕೆಯನ್ನು ರಫ್ತು ಮಾಡುತ್ತಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ, ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ರಫ್ತು ಮಾಡಲಾಗುತ್ತಿರುವ ಲಸಿಕೆಯ ಡೋಸ್‌ಗಳನ್ನು ದೇಶದ ಜನರಿಗೆ ಮೊದಲು ನೀಡಿದ್ದರೆ ಹೆಚ್ಚಿನ ಸಂಖ್ಯೆಯ ಜೀವಗಳನ್ನು ಉಳಿಸಬಹುದಿತ್ತು ಎಂದು ಅವರು ಹೇಳಿದ್ದಾರೆ.

ನಮ್ಮ ದೇಶದ ಜನರು ಸಾಯುತ್ತಿರುವಾಗ ತನ್ನ ವರ್ಚಸ್ಸು ಹೆಚ್ಚಿಸಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರವು ಲಸಿಕೆಯನ್ನು ಬೇರೆ ದೇಶಗಳಿಗೆ ಮಾರಾಟ ಮಾಡುವುದು ಗಂಭೀರ ಅಪರಾಧ ಎಂದು ಅವರು ಹೇಳಿದ್ದಾರೆ.

ಪತ್ರಿಕೆಗಳ ವರದಿ ಉಲ್ಲೇಖಿಸಿ ಆನ್‌ಲೈನ್ ಮೂಲಕ ಮಾತನಾಡಿದ ಅವರು, 'ಕೇಂದ್ರವು 93 ದೇಶಗಳಿಗೆ ಲಸಿಕೆ ಮಾರಾಟ ಮಾಡಿದ್ದು, ಆ ಪೈಕಿ ಶೇ 60ರಷ್ಟು ದೇಶಗಳಲ್ಲಿ ಕೋವಿಡ್ ಸೋಂಕು ನಿಯಂತ್ರಣದಲ್ಲಿದೆ. ಜತೆಗೆ ಆ ದೇಶಗಳಲ್ಲಿ ಸಾವಿನ ಭೀತಿಯೂ ಕಡಿಮೆ ಇದೆ' ಎಂದು ಹೇಳಿದ್ದಾರೆ.

ಕೋವಿಡ್ ಎರಡನೇ ಅಲೆಗೆ ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಮೃತಪಟ್ಟಿದ್ದಾರೆ. ಲಸಿಕೆಯನ್ನು ರಫ್ತು ಮಾಡುವ ಬದಲು ಈ ಯುವಕರಿಗೆ ನೀಡಿದ್ದರೆ ಅವರ ಜೀವ ಉಳಿಸಬಹುದಿತ್ತು ಎಂದು ಸಿಸೋಡಿಯಾ ಹೇಳಿದ್ದಾರೆ.

ಟಿಎಂಸಿ ಶಾಸಕರ ಮೇಲೆ ಸಿಬಿಐ ತನಿಖೆಗೆ ರಾಜ್ಯಪಾಲರ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ಹೊಸ ಸಚಿವ ಸಂಪುಟದ ಪ್ರಮಾಣ ವಚನಕ್ಕೆ ಒಂದು ದಿನ ಮೊದಲು ಆಡಳಿತಾರೂಢ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಹಿರಿಯ ಮುಖಂಡರು ಮತ್ತು ಶಾಸಕರ ವಿರುದ್ಧ ಸಿಬಿಐ ತನಿಖೆಗೆ ರಾಜ್ಯಪಾಲ ಜಗದೀಪ್ ಧನ್‌ಕರ್ ಅವರು ಅನುಮತಿ ನೀಡಿದ್ದಾರೆ. ಫಿರ್ಹಾದ್ ಹಕೀಮ್, ಸುಬ್ರತಾ ಮುಖರ್ಜಿ, ಮದನ್ ಮಿತ್ರಾ ಮತ್ತು ಸೋವನ್ ಚಟರ್ಜಿ ಅವರ ವಿರುದ್ಧ ತನಿಖೆಗೆ ರಾಜ್ಯಪಾಲರು ಸಮ್ಮತಿ ನೀಡಿದ್ದಾರೆ.

ಹಕೀಮ್, ಮುಖರ್ಜಿ ಮತ್ತು ಮಿತ್ರಾ ಅವರು ಈ ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದರು. ಚಟರ್ಜಿ ಅವರು ಟಿಎಂಸಿ ಸರ್ಕಾರದಲ್ಲಿ ಹಿಂದೆ ಸಚಿವರಾಗಿದ್ದವರು. 2019ರಲ್ಲಿ ಬಿಜೆಪಿ ಸೇರಿದ್ದರು. ಬಿಜೆಪಿ ಜತೆಗಿನ ಸಂಬಂಧವನ್ನು ಇತ್ತೀಚೆಗೆ ಕಡಿದುಕೊಂಡಿದ್ದಾರೆ.

ಅಪರಾಧ ಕೃತ್ಯ ನಡೆದ ಸಂದರ್ಭದಲ್ಲಿ ಈ ಎಲ್ಲರೂ ಶಾಸಕರಾಗಿದ್ದರು ಎಂಬ ಕಾರಣಕ್ಕೆ ಅವರ ವಿರುದ್ಧ ತನಿಖೆಗೆ ರಾಜ್ಯಪಾಲರ ಅನುಮತಿ ಬೇಕಾಗಿದೆ ಎಂದು ಮಾಧ್ಯಮದಲ್ಲಿ ಪ್ರಕಟವಾಗಿತ್ತು.

ಆದರೆ, ಅದು ನಿಜವಲ್ಲ, ಮಮತಾ ಬ್ಯಾನರ್ಜಿ ಸಚಿವ ಸಂಪುಟದಲ್ಲಿ ಅವರು ಸಚಿವರಾಗಲಿರುವುದರಿಂದ ಸಿಬಿಐ ತನಿಖೆಗೆ ರಾಜ್ಯಪಾಲರ ಅನುಮತಿ ಅಗತ್ಯ ಎಂದು ಧನ್‌ಕರ್ ಅವರು ಟ್ವೀಟ್ ಮಾಡಿದ್ದಾರೆ.

ನಾರದಾ ಮಾರುವೇಷದ ಕಾರ್ಯಾಚರಣೆಗೆ ಸಂಬಂಧಿಸಿ ಈ ಎಲ್ಲರ ವಿರುದ್ಧ ತನಿಖೆಗೆ ಅನುಮತಿ ಕೊಡಬೇಕು ಎಂದು ರಾಜ್ಯಪಾಲರನ್ನು ಸಿಬಿಐ ಕೋರಿತ್ತು.

ಮಮತಾ ವಿರುದ್ಧ ಧನ್‌ಕರ್ ಟೀಕೆ

ಚುನಾವಣೋತ್ತರ ಹಿಂಸಾಚಾರಕ್ಕೆ ಸಂಬಂಧಿಸಿ ಮಮತಾ ಬ್ಯಾನರ್ಜಿ ಅವರನ್ನು ರಾಜ್ಯಪಾಲ ಜಗದೀಪ್ ಧನ್‌ಕರ್ ಟೀಕಿಸಿದ್ದಾರೆ. 'ತಮ್ಮ ಮತದ ಹಕ್ಕು ಚಲಾಯಿಸಿದವರ ಮೇಲೆ ಹಿಂಸೆ ಎಸಗುವುದು ನೊಬೆಲ್ ಪುರಸ್ಕೃತ ರವೀಂದ್ರನಾಥ ಟ್ಯಾಗೋರ್ ಅವರ ಕನಸು ಆಗಿರಲಿಲ್ಲ' ಎಂದು ಧನ್‌ಕರ್ ಟ್ವೀಟ್ ಮಾಡಿದ್ದಾರೆ. ಟ್ಯಾಗೋರ್ ಜನ್ಮದಿನವಾದ ಭಾನುವಾರ ಅವರು ಹೀಗೆ ಹೇಳಿದ್ದಾರೆ.

ಟಿಎಂಸಿ ಕಾರ್ಯಕರ್ತರೊಬ್ಬರ ಹತ್ಯೆಗೆ ಸಂಬಂಧಿಸಿ 12 ಮಂದಿಯನ್ನು ಭಾನುವಾರ ಬಂಧಿಸಲಾಗಿದೆ. ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಬಿರ್‌ಭೂಮ್ ಜಿಲ್ಲೆಯಲ್ಲಿ ಸಂಘರ್ಷ ನಡೆದಿತ್ತು. ಶುಕ್ರವಾರ ರಾತ್ರಿಯ ಈ ಘಟನೆಯಲ್ಲಿ ಟಿಎಂಸಿಯ ಒಂಬತ್ತು ಕಾರ್ಯಕರ್ತರು ಗಾಯಗೊಂಡಿದ್ದಾರೆ.

ಚುನಾವಣೋತ್ತರ ಹಿಂಸಾಚಾರದ ಸತ್ಯಶೋಧಕ್ಕಾಗಿ ಕೇಂದ್ರ ಗೃಹ ಸಚಿವಾಲಯವು ಪಶ್ಚಿಮ ಬಂಗಾಳಕ್ಕೆ ಕಳುಹಿಸಿರುವ ತಂಡವು ವಿವಿಧೆಡೆ ಭೇಟಿ ಕೊಟ್ಟು ಮಾಹಿತಿ ಕಲೆ ಹಾಕಿದೆ.

ಹಿಂದೂ ಮಹಾಸಾಗರದಲ್ಲಿ ಚೀನಾದ ರಾಕೆಟ್ ಅವಶೇಷ

ಬಿಜೀಂಗ್ (ಪಿಟಿಐ): 'ಚೀನಾದ ಲಾಂಗ್ ಮಾರ್ಚ್ 5 ಬಿ ರಾಕೆಟ್‌ನ ಭಗ್ನಾವಶೇಷವು ಭಾನುವಾರ ಭೂಮಿಯ ವಾತಾವರಣವನ್ನು ಪ್ರವೇಶಿಸಿದ್ದು, ಇದು ಮಾಲ್ಡೀವ್ಸ್‌ಗೆ ಸಮೀಪ ಹಿಂದೂ ಮಹಾಸಾಗರದಲ್ಲಿ ಬಿದ್ದಿದೆ' ಎಂದು ಚೀನಾದ ಬಾಹ್ಯಾಕಾಶ ಕೇಂದ್ರವು ತಿಳಿಸಿದೆ.

'ಚೀನಾದ ಲಾಂಗ್ ಮಾರ್ಚ್ 5ಬಿ ರಾಕೆಟ್‌ನ ಭಗ್ನಾವಶೇಷವು ಬೆಳಿಗ್ಗೆ 10.24ಕ್ಕೆ ಭೂಮಿಯ ವಾತಾವರಣವನ್ನು ಪ್ರವೇಶಿಸಿದೆ. ಇದು ಸಾಗರ ಪ್ರದೇಶದಲ್ಲಿ 72.47 ಡಿಗ್ರಿ ಪೂರ್ವ ರೇಖಾಂಶ ಮತ್ತು 2.65 ಡಿಗ್ರಿ ಉತ್ತರ ಅಕ್ಷಾಂಶದಲ್ಲಿ ಬಿದ್ದಿದೆ' ಎಂದು ಚೀನಾದ ಮಾನವಸಹಿತ ಬಾಹ್ಯಾಕಾಶ ಎಂಜಿನಿಯರಿಂಗ್ ಕಚೇರಿ ತಿಳಿಸಿದೆ.

'ಪ್ರತಿ ಸೆಕೆಂಡ್‌ಗೆ 8ಕಿ.ಮೀ ವೇಗದಲ್ಲಿ ರಾಕೆಟ್ ಭೂಮಿಯ ದಟ್ಟ ವಾತಾವರಣವನ್ನು ಪ್ರವೇಶಿಸಿದೆ. ರಾಕೆಟ್‌ನ ಅನಿಯಂತ್ರಿತ ಮರು ಪ್ರವೇಶದ ವೇಳೆ ಅದರ ಹೆಚ್ಚಿನ ಭಾಗಗಳು ಸುಟ್ಟು ಹೋಗಿವೆ' ಎಂದು ಹಾಂಗ್‌ಕಾಂಗ್ ಮೂಲದ 'ಸೌತ್ ಚೀನಾ ಮಾರ್ನಿಂಗ್ ಪೋಸ್ಟ್' ವರದಿ ಮಾಡಿದೆ.

ಏಪ್ರಿಲ್ 29ರಂದು ಚೀನಾವು ತನ್ನ ಬಾಹ್ಯಾಕಾಶ ಕೇಂದ್ರದ ಪ್ರಮುಖ ಮಾಡ್ಯೂಲ್ ಅನ್ನು ಉಡಾವಣೆ ಮಾಡಲು ಈ ರಾಕೆಟ್ ಅನ್ನು ಬಳಸಿತ್ತು.

ನಿಟ್ಟುಸಿರು: 'ಚೀನಾದ ಲಾಂಗ್ ಮಾರ್ಚ್ 5 ಬಿ ರಾಕೆಟ್‌ನ ಭಗ್ನಾವಶೇಷವು ಭೂಮಿಯ ವಾತಾವರಣವನ್ನು ಪ್ರವೇಶಿಸಿದೆ' ಎಂದು ಚೀನಾ ಭಾನುವಾರ ಬೆಳಿಗ್ಗೆ ಹೇಳಿತ್ತು. 'ಚೀನಾದ ಲಾಂಗ್ ಮಾರ್ಚ್ 5ಬಿ ರಾಕೆಟ್‌ನ ಭಗ್ನಾವಶೇಷವು ಬೆಳಿಗ್ಗೆ 10.24ಕ್ಕೆ ಭೂಮಿಯ ವಾತಾವರಣವನ್ನು ಪ್ರವೇಶಿಸಿದೆ. ಈ ಅನಿಯಂತ್ರಿತ ಮರು ಪ್ರವೇಶದ ವೇಳೆ ಅದರ ಹೆಚ್ಚಿನ ಭಾಗಗಳು ಸುಟ್ಟು ಹೋಗಿವೆ' ಎಂದು ಅದು ತಿಳಿಸಿತ್ತು. ಈ ಬಗ್ಗೆ ಟ್ವೀಟ್ ಮಾಡಿದ್ದ ಅಮೆರಿಕದ ಸ್ಪೇಸ್ ಕಮಾಂಡ್‌ನ ಸ್ಪೇಸ್ ಟ್ರ್ಯಾಕ್ ಪ್ರಾಜೆಕ್ಟ್,' ಲಾಂಗ್‌ಮಾರ್ಚ್ 5ಬಿಯ ಮರುಪ್ರವೇಶದ ಮೇಲೆ ನಿಗಾವಹಿಸಿರುವ ಎಲ್ಲರೂ ಸ್ವಲ್ಪ ವಿಶ್ರಾಂತಿ ಪಡೆಯಿರಿ. ರಾಕೆಟ್ ಕೆಳಗೆ ಬರುತ್ತಿದೆ' ಎಂದು ಹೇಳಿತ್ತು.

22 ಟನ್ ತೂಕದ ರಾಕೆಟ್‌ನ ಕೆಲವು ಭಾಗಗಳು ವಾತಾವರಣ ಪ್ರವೇಶಿಸುವಾಗ ಉರಿದು ಹೋಗಬಹುದು. ಆದರೆ ಉರಿಯದೆ ಬಾಕಿ ಉಳಿಯುವ ಅವಶೇಷ ಜನವಸತಿ ಪ್ರದೇಶದ ಮೇಲೆ ಬಿದ್ದರೆ ಭಾರಿ ಅಪಾಯ ಎದುರಾಗಬಹುದು ಎಂಬ ಆತಂಕ ಮನೆಮಾಡಿತ್ತು.

ಅಫ್ಗನ್ ಶಾಲೆಯಲ್ಲಿ ಸ್ಫೋಟ: 50 ಸಾವು

ಕಾಬೂಲ್ (ಎಪಿ): ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನ ಪಶ್ಚಿಮ ಭಾಗದ, ಶಿಯಾ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಬಾಲಕಿಯರ ಶಾಲೆಯೊಂದರಲ್ಲಿ ಶನಿವಾರ ಸಂಭವಿಸಿದ ಭೀಕರ ಬಾಂಬ್ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 50ಕ್ಕೆ ಏರಿದ್ದು, 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.



ಬಾಂಬ್ ಸ್ಫೋಟದಲ್ಲಿ ಗಾಯಗೊಂಡ ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ಸಾಗಿಸಲಾಯಿತು – ಎಪಿ/ಪಿಟಿಐ ಚಿತ್ರ

ಮೃತಪಟ್ಟವರಲ್ಲಿ ಹೆಚ್ಚಿನವರು 11ರಿಂದ 15 ವರ್ಷದೊಳಗಿನವರು. ವಿದ್ಯಾರ್ಥಿಗಳು ಶಾಲೆಯಿಂದ ಮನೆಗೆ ತೆರಳುತ್ತಿದ್ದ ವೇಳೆ ಮೂರು ಸ್ಫೋಟಗಳು ಸಂಭವಿಸಿದವು ಎಂದು ಒಳಾಡಳಿತ ಸಚಿವಾಲಯ ಭಾನುವಾರ ತಿಳಿಸಿದೆ.

ತಾಲಿಬಾನ್ ಈ ಸ್ಫೋಟದ ಹೊಣೆ ಹೊತ್ತುಕೊಂಡಿಲ್ಲ, ಬದಲಿಗೆ ಈ ದಾಳಿಯನ್ನು ಖಂಡಿಸಿದೆ.

ದೇಶದಲ್ಲಿರುವ ಅಲ್ಪಸಂಖ್ಯಾತ ಶಿಯಾ ಸಮುದಾಯದವರನ್ನೇ ಗುರಿಯಾಗಿಸಿ ಈ ಭಾಗದಲ್ಲಿ ಈಗಾಗಲೇ ಹಲವಾರು ದಾಳಿಗಳು ನಡೆದಿವೆ.

ಸ್ಪೇನ್: ಕೋವಿಡ್ ತುರ್ತು ಪರಿಸ್ಥಿತಿ ಅಂತ್ಯ

ಮ್ಯಾಡ್ರಿಡ್ (ಎಎಫ್‌ಪಿ): ಸ್ಪೇನ್‌ನಲ್ಲಿ ಕೋವಿಡ್ ಪ್ರಸರಣವನ್ನು ತಡೆಯಲು ಅಕ್ಟೋಬರ್‌ನಲ್ಲಿ ಘೋಷಿಸಲಾಗಿದ್ದ ಕೋವಿಡ್ ತುರ್ತು ಪರಿಸ್ಥಿತಿಯನ್ನು ಸರ್ಕಾರ ಅಂತ್ಯಗೊಳಿಸಿದೆ. ಹಲವು ತಿಂಗಳುಗಳ ಬಳಿಕ ಮೊದಲ ಬಾರಿ ನಾಗರಿಕರಿಗೆ ಪ್ರದೇಶಗಳ ನಡುವೆ ಪ್ರಯಾಣಿಸಲು ಅನುಮತಿಯನ್ನು ನೀಡಲಾಗಿದೆ.

'ಇದು ಹೊಸ ವರ್ಷದಂತಿದೆ. ಸರ್ಕಾರದ ಈ ನಿರ್ಧಾರವನ್ನು ಚಪ್ಪಾಳೆ ಮತ್ತು ಸಂಗೀತದ ಮೂಲಕ ಸ್ವಾಗತಿಸಲಾಯಿತು. ನಾವು ಸಾಮಾನ್ಯ ಜೀವನಕ್ಕೆ ಹಂತ ಹಂತವಾಗಿ ಮರಳುತ್ತಿದ್ದೇವೆ. ಆದರೆ ನಮ್ಮ ನಡುವೆ ವೈರಸ್ ಈಗಲೂ ಇದೇ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು' ಎಂದು ಬಾರ್ಸಿಲೋನಾ ನಿವಾಸಿ ಓರಿಯೊಲ್ ಕಾರ್ಬೆಲ್ಲಾ ಅವರು ಅಭಿಪ್ರಾಯಪಟ್ಟರು.

ಸಿಂಗಪುರ: 500 ಆಮ್ಲಜನಕ ಕಾನ್ಸಂಟ್ರೇಟರ್ ರವಾನೆ

ಸಿಂಗಪುರ (ಪಿಟಿಐ): ಸಿಂಗಪುರ ಮೂಲದ ಗ್ಲೋಬಲ್ ಸ್ಕೂಲ್ಸ್ ಫೌಂಡೇಷನ್ (ಜಿಎಸ್‌ಎಫ್) ಭಾರತಕ್ಕೆ 500 ಆಮ್ಲಜನಕ ಕಾನ್ಸಂಟ್ರೇಟರ್‌ಗಳನ್ನು ಕಳುಹಿಸಿಕೊಟ್ಟಿದ್ದು, ಇವುಗಳನ್ನು ಸಣ್ಣ ಪಟ್ಟಣಗಳು, ದೂರ ಪ್ರದೇಶದ ಹಳ್ಳಿಗಳಿಗೆ ಕಳುಹಿಸಿಕೊಡಲು ಸೇವಾ ಇಂಟರ್‌ನ್ಯಾಷನಲ್ ವ್ಯವಸ್ಥೆ ಮಾಡಿದೆ.

ಚೀನಾ ವಿರುದ್ಧ ನಾಸಾ ಕಿಡಿ

ವಾಷಿಂಗ್ಟನ್ (ಪಿಟಿಐ): ಅನಿಯಂತ್ರಿತ ರಾಕೆಟ್‌ವೊಂದು ಭಗ್ನಗೊಂಡು, ಅವಶೇಷಗಳು ಹಿಂದೂಮಹಾಸಾಗರದಲ್ಲಿ ಬಿದ್ದ ಘಟನೆಗೆ ಸಂಬಂಧಿಸಿದಂತೆ ಚೀನಾ ವಿರುದ್ಧ ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಭಾನುವಾರ ವಾಗ್ದಾಳಿ ನಡೆಸಿದೆ.

'ತಾನು ಉಡಾವಣೆ ಮಾಡಿದ ರಾಕೆಟ್ ಭಗ್ನಗೊಂಡಿದೆ. ಬಾಹ್ಯಾಕಾಶ ಅವಶೇಷಗಳ ನಿರ್ವಹಣೆ ವಿಷಯದಲ್ಲಿ ಚೀನಾ ಜವಾಬ್ದಾರಿಯುತವಾಗಿ ನಡೆದುಕೊಳ್ಳುವಲ್ಲಿ ವಿಫಲವಾಗಿದೆ' ಎಂದು ನಾಸಾದ ಆಡಳಿತಾಧಿಕಾರಿ ಬಿಲ್ ನೆಲ್ಸನ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ಭಾರತಕ್ಕೆ ಹಸ್ತಾಂತರ ಪ್ರಶ್ನಿಸಿ ಹೈಕೋರ್ಟ್‌ಗೆ ನೀರವ್ ಮೋದಿ ಅರ್ಜಿ



ಲಂಡನ್ (ಪಿಟಿಐ): ಭಾರತಕ್ಕೆ ತಮ್ಮನ್ನು ಹಸ್ತಾಂತರಿಸಬೇಕು ಎಂಬ ಗೃಹ ಇಲಾಖೆಯ ಆದೇಶವನ್ನು ಪ್ರಶ್ನಿಸಿ, ದೇಶಭ್ರಷ್ಟ ವಜ್ರ ವ್ಯಾಪಾರಿ ನೀರವ್ ಮೋದಿ ಲಂಡನ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ನೀರವ್ ಮೋದಿ ಅರ್ಜಿ ಸಲ್ಲಿಸಿರುವುದನ್ನು ಕ್ರೌನ್ ಪ್ರಾಸಿಕ್ಯೂಷನ್ ಸರ್ವೀಸ್ (ಸಿಪಿಎಸ್) ಖಚಿತಪಡಿಸಿದ್ದು, ಈ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ನ್ಯಾಯಾಧೀಶರು ತಮ್ಮ ನಿರ್ಧಾರ ಪ್ರಕಟಿಸಬೇಕಿದೆ ಎಂದು ತಿಳಿಸಿದೆ.

ಕೋವಿಡ್ ಭೀತಿ: ಆಸ್ಟ್ರೇಲಿಯಾ ಗಡಿ ಬಂದ್

ಮೆಲ್ಬರ್ನ್: ಕೋವಿಡ್ ಸೋಂಕಿನಿಂದ ದೇಶದ ಪ್ರಜೆಗಳನ್ನು ರಕ್ಷಿಸುವ ದೃಷ್ಟಿಯಿಂದ ಜಗತ್ತಿನ ಜೊತೆಗೆ ಸಂಪರ್ಕ ಕಲ್ಪಿಸುವ ಎಲ್ಲ ಗಡಿಯನ್ನು ಅನಿರ್ದಿಷ್ಟಾವಧಿಗೆ ಬಂದ್ ಮಾಡಲಾಗುವುದು ಎಂದು ಆಸ್ಟ್ರೇಲಿಯಾ ಭಾನುವಾರ ಪ್ರಕಟಿಸಿದೆ.

ಪ್ರಧಾನಿ ಸ್ಕಾಟ್ ಮಾರಿಸನ್ ಈ ತೀರ್ಮಾನವನ್ನು ಪ್ರಕಟಿಸಿದರು. ಸೋಂಕು ಸ್ಥಿತಿ ಹಿನ್ನೆಲೆಯಲ್ಲಿ ಕಳೆದ ಮಾರ್ಚ್‌ನಿಂದಲೂ ಗಡಿ ಬಂದ್ ಆಗಿದೆ. ಕಟ್ಟುನಿಟ್ಟಿನ ನಿಯಮಗಳ ಪಾಲನೆಯೊಂದಿಗೆ ದೇಶದ ಪ್ರಜೆಗಳಿಗಷ್ಟೇ ದೇಶಕ್ಕೆ ಮರಳಲು ಅವಕಾಶವಿದೆ.

ಲಂಡನ್ ಮೇಯರ್ ಆಗಿ ಸಾದಿಕ್ ಖಾನ್ ಮರು ಆಯ್ಕೆ

ಲಂಡನ್: ಲೇಬರ್ ಪಕ್ಷದ ಅಭ್ಯರ್ಥಿ ಸಾದಿಕ್ ಖಾನ್ ಅವರು ಲಂಡನ್ ಮೇಯರ್ ಆಗಿ ಎರಡನೇ ಬಾರಿಗೆ ಶನಿವಾರ ಮರು ಆಯ್ಕೆಯಾಗಿದ್ದಾರೆ.

ಚುನಾವಣೆಯಲ್ಲಿ ಸಾದಿಕ್ ಖಾನ್ ಅವರು 12,06,034 ಮತಗಳಿಸಿದ್ದರೆ, ಅವರ ಪ್ರತಿಸ್ಪರ್ಧಿ ಕನ್ಸರ್ವೇಟಿವ್ ಪಕ್ಷದ ಶೌನ್ ಬೈಲೆ 9,77,601 ಮತ ಪಡೆದಿದ್ದಾರೆ. ಸಾದಿಕ್ ಖಾನ್ ಒಟ್ಟಾರೆ ಶೇ 55.2 ಮತಗಳಿಸಿದ್ದರೆ, ಬೈಲೆ ಶೇ 44.8ರಷ್ಟು ಮತಗಳಿಸಿದ್ದಾರೆ.

ಗ್ಲೋಬಲ್ ವಿದ್ಯಾರ್ಥಿ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರಾಗಿ ಮಹಾರಾಷ್ಟ್ರದ ಶಿಕ್ಷಕ



ರಂಜಿತ್ ಸಿನ್ಹಾ ದಿಸಾಳೆ

ಲಂಡನ್(ಪಿಟಿಐ: 2020ನೇ ಸಾಲಿಗೆ ಗ್ಲೋಬಲ್ ಟೀಚರ್ ಪ್ರಶಸ್ತಿ ಪುರಸ್ಕೃತರಾಗಿದ್ದ, ಮಹಾರಾಷ್ಟ್ರದ ಸೋಲ್ಲಾಪುರ ಜಿಲ್ಲೆಯ ಪರಿಟೇವಾಡಿಯ ಶಿಕ್ಷಕ ರಂಜಿತ್‌ಸಿನ್ಹಾ ದಿಸಾಳೆ ಈಗ, 'ಗ್ಲೋಬಲ್ ವಿದ್ಯಾರ್ಥಿ ಪ್ರಶಸ್ತಿ' ಆಯ್ಕೆ ಸಮಿತಿಯ ಸದಸ್ಯರಾಗಿದ್ದಾರೆ.

ಗ್ಲೋಬಲ್ ವಿದ್ಯಾರ್ಥಿ ಪ್ರಶಸ್ತಿ ಮೊತ್ತ ಸುಮಾರು ₹ 36,62,725 (50 ಸಾವಿರ ಡಾಲರ್) ಆಗಿದೆ.

ಹಾಲಿವುಡ್ ನಟರಾದ ಅಸ್ಟೋನ್ ಕುಚ್ಚರ್ ಮತ್ತು ಮಿಲಾ ಕುನಿಸ್ ಅವರು ತೀರ್ಪುಗಾರ ಮಂಡಳಿಯ ಇತರೆ ಸದಸ್ಯರಾಗಿದ್ದಾರೆ.

ಚೆಗ್ ಶಿಕ್ಷಣ ತಂತ್ರಜ್ಞಾನ ಕಂಪನಿಯ ಸೇವಾ ಸಂಸ್ಥೆಯಾದ ಚೆಗ್.ಒಆರ್‌ಜಿ ಮತ್ತು ವಾರ್ಕೆ ಫೌಂಡೇಷನ್ ಜಂಟಿಯಾಗಿ ಕಳೆದ ವರ್ಷ ಗ್ಲೋಬಲ್ ಟೀಚರ್ ಪ್ರಶಸ್ತಿಯನ್ನು ಸ್ಥಾಪಿಸಿತ್ತು. ಕಲಿಕೆ ಮತ್ತು ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರುವಲ್ಲಿ ಗಣನೀಯ ಸಾಧನೆ ಮಾಡುವ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ವಿದ್ಯಾರ್ಥಿ ಪ್ರಶಸ್ತಿಯ ಉದ್ದೇಶ.

ಯುರೇನಿಯಂ ಜಪ್ತಿ ಪ್ರಕರಣ ಎನ್‌ಐಎಗೆ ತನಿಖೆ ಹೊಣೆ

ನವದೆಹಲಿ: 'ಮುಂಬೈನಲ್ಲಿ ಈಚೆಗೆ ಜಪ್ತಿ ಮಾಡಿದ್ದ ₹ 21 ಕೋಟಿ ಮೌಲ್ಯದ ಪ್ರಾಕೃತಿಕ ಯುರೇನಿಯಂ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಹಿಸಿಕೊಂಡಿದೆ' ಎಂದು ಅದರ ವಕ್ತಾರರು ಭಾನುವಾರ ತಿಳಿಸಿದರು.

ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ಘಟಕ (ಎಟಿಎಸ್) ಅಧಿಕಾರಿಗಳು ಮೇ 5ರ ರಾತ್ರಿ ಜಿಗರ್ ಜಯೇಶ್ ಪಾಂಡ್ಯ ಮತ್ತು ಅಬು ತಾಹಿರ್ ಅಫ್ಜಲ್ ಚೌಧರಿ ಅವರನ್ನು ಬಂಧಿಸಿ, ₹ 21 ಕೋಟಿ ಮೌಲ್ಯದ 7.1 ಕೆ.ಜಿ ಯುರೇನಿಯಂ ಜಪ್ತಿ ಮಾಡಿದ್ದರು.

'ವಿರೋಧಪಕ್ಷಗಳ ಮೈತ್ರಿಕೂಟ: ಶೀಘ್ರ ಮಾತುಕತೆ'



ಮುಂಬೈ(ಪಿಟಿಐ): 'ರಾಷ್ಟ್ರಮಟ್ಟದಲ್ಲಿ ವಿರೋಧಪಕ್ಷಗಳ ಮೈತ್ರಿಕೂಟವನ್ನು ರಚಿಸುವುದರ ಕುರಿತಂತೆ ಕೆಲವೇ ದಿನಗಳಲ್ಲಿ ಮಾತುಕತೆ ಆರಂಭವಾಗಲಿದೆ' ಎಂದು ಶಿವಸೇನೆ ನಾಯಕ ಸಂಜಯ ರಾವುತ್ ಸುದ್ದಿಗಾರರಿಗೆ ಹೇಳಿದ್ದಾರೆ.

'ಈ ಕುರಿತಂತೆ ನಾನು ಈಗಾಗಲೇ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರೊಂದಿಗೂ ಚರ್ಚಿಸಿದ್ದೇನೆ. ಕಾಂಗ್ರೆಸ್ ಪಕ್ಷ ಇಂತಹ ಮೈತ್ರಿಕೂಟದ ಕೇಂದ್ರವಾಗಿರುತ್ತದೆ' ಎಂದರು.

'ದೇಶಕ್ಕೆ ವಿರೋಧ ಪಕ್ಷಗಳ ಪ್ರಬಲ ಮೈತ್ರಿಕೂಟದ ಅಗತ್ಯವಿದೆ. ಕಾಂಗ್ರೆಸ್ ಪಕ್ಷದ ಪಾಲ್ಗೊಳ್ಳುವಿಕೆ ಇಲ್ಲದೇ ಇದು ಸಾಕಾರವಾಗದು. ಆ ಪಕ್ಷವು ಉದ್ದೇಶಿತ ಮೈತ್ರಿಕೂಟದ ಜೀವವಾಗಿರುತ್ತದೆ. ನಾಯಕತ್ವದ ವಿಷಯವನ್ನು ಚರ್ಚೆ ಮೂಲಕ ಬಗೆಹರಿಸಿಕೊಳ್ಳಬಹುದು' ಎಂದು ರಾವುತ್ ಹೇಳಿದರು.

ನೇಪಾಳ: ಇಂದು ಪ್ರಧಾನಿ ಒಲಿ ವಿಶ್ವಾಸ ಮತ ಯಾಚನೆ



ಕಠ್ಮಂಡು (ಪಿಟಿಐ): ರಾಜಕೀಯ ಬಿಕ್ಕಟ್ಟು ಎದುರಿಸುತ್ತಿರುವ ನೇಪಾಳ ಪ್ರಧಾನಿ ಕೆ.ಪಿ.ಶರ್ಮಾ ಒಲಿ ಅವರು ಸಂಸತ್‌ನಲ್ಲಿ ಸೋಮವಾರ (ಮೇ 10) ವಿಶ್ವಾಸ ಮತ ಯಾಚನೆ ಮಾಡುವರು.

ಒಲಿ ಪ್ರತಿನಿಧಿಸುವ ಸಿಪಿಎನ್–ಯುಎಂಎಲ್ ಹಾಗೂ ಪುಷ್ಪಕಮಲ್ ದಹಾಲ್ (ಪ್ರಚಂಡ) ನೇತೃತ್ವದ ಸಿಪಿಎನ್ (ಮಾವೋವಾದಿ) ಮೈತ್ರಿಕೂಟ ಸರ್ಕಾರ ರಚಿಸಿದೆ. ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಪ್ರಚಂಡ ನೇತೃತ್ವದ ಪಕ್ಷ ಹಿಂಪಡೆದಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಒಲಿ ಸಂಸತ್‌ನ ಕೆಳಮನೆಯಲ್ಲಿ ವಿಶ್ವಾಸ ಮತಯಾಚನೆ ಮಾಡಲಿದ್ದಾರೆ.

ಬಿಎನ್‌ಎಚ್‌ಎಸ್ ಹಿರಿಯ ವಿಜ್ಞಾನಿ ಹೇಳಿಕೆ

ಹಾವು ಕಡಿತ: ಪ್ರತಿ ವರ್ಷ 50,000ಕ್ಕೂ ಅಧಿಕ ಸಾವು

ಪ್ರಜಾವಾಣಿ ವಾರ್ತೆ

ಮುಂಬೈ: ದೇಶದಲ್ಲಿ ಪ್ರತಿ ವರ್ಷ ಹಾವು ಕಡಿತದಿಂದ 50,000ಕ್ಕೂ ಅಧಿಕ ಜನರು ಸಾವನ್ನಪ್ಪುತ್ತಾರೆ ಎಂದು ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯ (ಬಿಎನ್‌ಎಚ್‌ಎಸ್) ಹಿರಿಯ ವಿಜ್ಞಾನಿ ಡಾ.ವರದ್ ಗಿರಿ ಹೇಳಿದ್ದಾರೆ.

ಬಹುತೇಕ ಘಟನೆಗಳಲ್ಲಿ , ಸಾವು ಸಂಭವಿಸಲು ಮಾನವ ಎಸಗುವ ಪ್ರಮಾದಗಳೇ ಕಾರಣವಾಗಿರುತ್ತವೆ ಎಂದು ಅವರು ಹೇಳಿದ್ದಾರೆ.

ಡಾ. ಗಿರಿ ಅವರು ಹಾವುಗಳಿಗೆ ಸಂಬಂಧಿಸಿ ಪಶ್ಚಿಮ ಘಟ್ಟದಲ್ಲಿ ಆಳವಾದ ಅಧ್ಯಯನ ಮಾಡಿದ್ದು, ಉರಗಗಳ ಮೇಲೆ ಅಧಿಕಾರಯುತವಾಗಿ ಮಾತನಾಡುವ ತಜ್ಞ ಎಂದೇ ಖ್ಯಾತರಾಗಿದ್ದಾರೆ. 'ಡೆಂಡ್ರೇಪ್ಯಾಫಿಸ್ ಗಿರಿ' ಅಥವಾ 'ಗಿರಿಸ್ ಬ್ರಾಂಜ್‌ಬ್ಯಾಕ್ ಟ್ರಿ ಸ್ನೇಕ್' ಎಂದು ಅವರ ಗೌರವಾರ್ಥ ಒಂದು ಪ್ರಭೇದದ ಹಾವಿಗೆ ನಾಮಕರಣ ಮಾಡಲಾಗಿದೆ.



ಪ್ರಾತಿನಿಧಿಕ ಚಿತ್ರ

'ಹಾವು ಕಡಿತದ ಪ್ರಕರಣಗಳ ಪೈಕಿ ಶೇ 20–30ರಷ್ಟು ಜನರು ಮಾತ್ರ ಆಸ್ಪತ್ರೆಗೆ ತೆರಳುತ್ತಾರೆ' ಎಂದೂ ಅವರು ಹೇಳಿದ್ದಾರೆ.

'ಭಾರತದಲ್ಲಿ 330 ಪ್ರಭೇದದ ಹಾವುಗಳಿದ್ದು, ಅವುಗಳಲ್ಲಿ 65 ಪ್ರಭೇದದ ಹಾವುಗಳ ಮಾತ್ರ ವಿಷಕಾರಿಯಾಗಿವೆ. ಈ ಶೇ 65ರಷ್ಟು ವಿಷಪೂರಿತ ಉರಗಗಳ ಪೈಕಿ ಇಂಡಿಯನ್ ಕೋಬ್ರಾ, ಕಟ್ಟು ಹಾವು (ಕಾಮನ್ ಕ್ರೇಟ್), ಕೊಳಕ ಮಂಡಲ (ರಸೆಲ್ಸ್ ವೈಪರ್) ಹಾಗೂ ಗರಗಸಮಂಡಲ (ಸಾ ಸ್ಕೇಲ್ಡ್ ವೈಪರ್) ಎಂಬ ಹಾವುಗಳು ಮಾನವನ ವಾಸಸ್ಥಾನಕ್ಕೆ ಸಮೀಪದಲ್ಲಿ ಕಂಡುಬರುತ್ತವೆ. ಹೆಚ್ಚಿನ ಪ್ರಾಣಹಾನಿಗೆ ಈ ಹಾವುಗಳ ಕಡಿತವೇ ಕಾರಣವಾಗಿದೆ' ಎಂದು ಡಾ.ಗಿರಿ ವಿವರಿಸಿದರು.

'ಈ ನಾಲ್ಕು ಹಾವುಗಳನ್ನು 'ಬಿಗ್ ಫೋರ್' ಎಂದು ಕರೆಯಲಾಗುತ್ತಿದ್ದು, ಇವುಗಳು ಈಗಲೂ ವೈದ್ಯಕೀಯ ವಿಜ್ಞಾನಕ್ಕೆ ಸವಾಲಾಗಿವೆ' ಎಂದರು.

'ಹಾವುಗಳ ಕುರಿತಂತೆ ಜನರಿಗೆ ತಿಳಿವಳಿಕೆ ನೀಡಬೇಕಿದೆ. ಅರಿವಿನ ಕೊರತೆಯಿಂದಾಗಿಯೇ ಅವುಗಳನ್ನು ಕಂಡರೆ ನಮಗೆ ಭಯ ಜಾಸ್ತಿ' ಎಂದು ಪ್ರತಿಪಾದಿಸಿದರು.

ಜನರಲ್ಲಿ ಉರಗಗಳ ಬಗ್ಗೆ ಮಾಹಿತಿ ನೀಡುವ ಸಲುವಾಗಿ ಅವರು ಬಿಎಚ್‌ಎಚ್‌ಎಸ್ ನೆರವಿನೊಂದಿಗೆ ಅವರು 'ಅಂಡರ್‌ಸ್ಟ್ಯಾಂಡಿಂಗ್ ಸ್ನೇಕ್ಸ್' ಹಾಗೂ 'ಸ್ನೇಕ್ ಟಾಕ್ಸಾನಾಮಿ' ಎಂಬ ಕೋರ್ಸ್‌ಗಳನ್ನು ನಡೆಸುತ್ತಿದ್ದಾರೆ.

'ಹಾವು ಕಡಿತ ವ್ಯಕ್ತಿಯನ್ನು ತಕ್ಷಣವೇ ಸಮೀಪದ ಆಸ್ಪತ್ರೆಗೆ ಒಯ್ದು ಹಾವಿನ ವಿಷ ಪ್ರತಿರೋಧಕ ಔಷಧ' (ಎಎಸ್‌ವಿಎಸ್) ಕೊಡಿಸಬೇಕು. ಮಾಟ–ಮಂತ್ರ ಅಥವಾ ಇತರ ಯಾವುದೇ ಸ್ಥಳೀಯವಾಗಿ ಸಿಗುವ ಚಿಕಿತ್ಸೆಯನ್ನು ಕೊಡಿಸಬಾರದು' ಎಂದೂ ಹೇಳಿದರು.

ಸೋಮವಾರ • ಮೇ 10, 2021 ಪ್ರಜಾವಾಣಿ

ಐಪಿಎಲ್: ಮನೆ ಸೇರಿದ ಪಂಜಾಬ್ ಆಟಗಾರರು

ನವದೆಹಲಿ/ ಆಕ್ಲೆಂಡ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡಿದ್ದ ಪಂಜಾಬ್ ಕಿಂಗ್ಸ್ ತಂಡದ ಭಾರತೀಯ ಆಟಗಾರರೆಲ್ಲರೂ ಅವರ ಮನೆ ತಲುಪಿದ್ದಾರೆ ಎಂದು ಫ್ರಾಂಚೈಸ್ ಭಾನುವಾರ ತಿಳಿಸಿದೆ. ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದ ವಿದೇಶಿ ಆಟಗಾರರು ಮತ್ತು ವಿವಿಧ ತಂಡಗಳಲ್ಲಿ ಆಡಿದ್ದ ನ್ಯೂಜಿಲೆಂಡ್ ಆಟಗಾರರು ತವರು ತಲುಪಿದ್ದಾರೆ ಎಂದು ತಿಳಿಸಲಾಗಿದೆ.

‘ಟೂರ್ನಿಯನ್ನು ಮುಂದೂಡಿದ ಹಿನ್ನೆಲೆಯಲ್ಲಿ ಕಿಂಗ್ಸ್ ಆಟಗಾರರನ್ನು ಸುರಕ್ಷಿತವಾಗಿ ಕಳುಹಿಸಲಾಗಿದೆ. ವಿದೇಶದ ಆಟಗಾರರ ಪೈಕಿ ಕೆಲವರು ಭಾರತದ ಹೊರಗೆ ಕ್ವಾರಂಟೈನ್‌ನಲ್ಲಿದ್ದಾರೆ. ಅದು ಮುಗಿದ ನಂತರ ಅವರು ತಮ್ಮ ದೇಶಗಳಿಗೆ ಪಯಣಿಸಲಿದ್ದಾರೆ. ಬಿಸಿಸಿಐ, ವಿವಿಧ ಫ್ರಾಂಚೈಸ್‌ಗಳು ಮತ್ತು ವಿಮಾನಯಾನ ಪಾಲುದಾರ ಕಂಪನಿ ಗೋ ಏರ್‌ಗೆ ಅಭಾರಿಯಾಗಿದ್ದೇವೆ’ ಎಂದು ಪಂಜಾಬ್ ಕಿಂಗ್ಸ್ ಟ್ವೀಟ್ ಮಾಡಿದೆ. ನ್ಯೂಜಿಲೆಂಡ್‌ನ ಆಟಗಾರರೆಲ್ಲರೂ ಎರಡು ವಿಮಾನಗಳಲ್ಲಿ ಸುರಕ್ಷಿತವಾಗಿ ದೇಶಕ್ಕೆ ವಾಪಸಾಗಿದ್ದಾರೆ ಎಂದು ನ್ಯೂಜಿಲೆಂಡ್ ಕ್ರಿಕೆಟ್ (ಎನ್‌ಝಡ್‌ಸಿ) ತಿಳಿಸಿದೆ. ಟ್ರೆಂಟ್ ಬೌಲ್ಟ್, ಫಿನ್ ಅಲೆನ್, ಜಿಮ್ಮಿ ನೀಶಮ್, ಆ್ಯಡಂ ಮಿಲ್ನೆ, ಸ್ಕಾಟ್ ಕುಗೆಲಿನ್, ಸಿಬ್ಬಂದಿ ಜೇಮ್ಸ್ ಪಮೆಂಟ್ ಮತ್ತು ಶೇನ್ ಬಾಂಡ್, ಆರ್‌ಸಿಬಿ ನಿರ್ದೇಶಕ ಮೈಕ್ ಹೆಸನ್ ಅವರು ಟೋಕಿಯೊ ಮೂಲಕ ಖಾಸಗಿ ಜೆಟ್‌ನಲ್ಲಿ ಮೊದಲ ತಂಡದಲ್ಲಿ ತೆರಳಿದ್ದರು.


ರವಿ ಬಿಷ್ಣೋಯಿ

ನ್ಯೂಜಿಲೆಂಡ್ ತಂಡದ ಮಾಜಿ ನಾಯಕರಾದ ಸ್ಟೀಫನ್ ಫ್ಲೆಮಿಂಗ್ ಮತ್ತು ಬ್ರೆಂಡನ್ ಮೆಕ್ಲಂ, ಐಪಿಎಲ್‌ನಲ್ಲಿ ಕೋಚ್ ಆಗಿದ್ದ ಕೈಲ್ ಮಿಲ್ಸ್, ವೇಗಿ ಲಾಕಿ ಫರ್ಗ್ಯುಸನ್, ಕಮೆಂಟೇಟರ್‌ಗಳಾದ ಸೈಮನ್ ಡಲ್, ಸ್ಕಾಟ್ ಸ್ಟೈರಿಸ್, ಅಂಪೈರ್ ಕ್ರಿಸ್ ಗಫಾನಿ ಮುಂತಾದವರು ಭಾನುವಾರ ಎರಡನೇ ತಂಡದಲ್ಲಿ ತಲುಪಿದ್ದಾರೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡಲಿರುವ ಆಟಗಾರರು ಮಾಲ್ಡಿವ್ಸ್‌ಗೆ ತೆರಳಿದ್ದಾರೆ. ಅಲ್ಲಿ ಕ್ವಾರಂಟೈನ್ ಮುಗಿಸಿ ಇಂಗ್ಲೆಂಡ್‌ಗೆ ತೆರಳುವರು. ಮುಂಬೈ ಇಂಡಿಯನ್ಸ್ ಜೊತೆ ಇದ್ದ ವಿದೇಶಿ ಆಟಗಾರರು ಮತ್ತು ಸಹಾಯಕ ಸಿಬ್ಬಂದಿ ಒಳಗೊಂಡ 14 ಮಂದಿ ಭಾನುವಾರ ಸುರಕ್ಷಿತವಾಗಿ ತಲುಪಿದ್ದಾರೆ ಎಂದು ಫ್ರಾಂಚೈಸ್ ಭಾನುವಾರ ತಿಳಿಸಿದೆ.

ಕೀರನ್ ಪೊಲಾರ್ಡ್ ಟ್ರಿನಿಡಾಡ್‌ಗೆ, ಕ್ವಿಂಟನ್ ಡಿಕಾಕ್ ಮತ್ತು ಮಾರ್ಕೊ ಜಾನ್ಸೆನ್ ಜೊಹಾನ್ಸ್‌ಬರ್ಗ್‌ಗೆ ತಲುಪಿದ್ದು ಆಸ್ಟ್ರೇಲಿಯಾ ಆಟಗಾರರು ಮತ್ತು ಕೋಚ್ ಮಹೇಲ ಜಯವರ್ಧನೆ ಮಾಲ್ಡಿವ್ಸ್ ತಲುಪಿದ್ದು 14 ದಿನಗಳ ಕ್ವಾರಂಟೈನ್ ನಂತರ ವಾಪಸಾಗಲಿದ್ದಾರೆ.

ಎಎಫ್‌ಸಿ ಕಪ್: ಕೋವಿಡ್ ನಿಯಮ ಉಲ್ಲಂಘನೆ ಆರೋಪ

ಬಿಎಫ್‌ಸಿಗೆ ‘ರೆಡ್‌ಕಾರ್ಡ್’


ಅಭ್ಯಾಸನಿರತ ಬಿಎಫ್‌ಸಿ ತಂಡದ ಆಟಗಾರರು –ಐಎಸ್‌ಎಲ್ ಮೀಡಿಯಾ ಚಿತ್ರ

ಮಾಲಿ, ಮಾಲ್ಡಿವ್ಸ್ (ಪಿಟಿಐ): ಎಎಫ್‌ಸಿ ಕಪ್ ಪ್ಲೇ ಆಫ್ ಹಂತದ ಪಂದ್ಯ ಆಡಲು ಇಲ್ಲಿಗೆ ಬಂದಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವನ್ನು ವಾಪಸ್ ತೆರಳುವಂತೆ ಮಾಲ್ಡಿವ್ಸ್ ಕ್ರೀಡಾ ಸಚಿವರು ಸೂಚಿಸಿದ್ದಾರೆ. ಕೋವಿಡ್ ನಿಯಮಾವಳಿಗಳನ್ನು ಪಾಲಿಸದ ಕಾರಣ ತಂಡದ ಪಂದ್ಯಕ್ಕೆ ಆತಿಥ್ಯ ವಹಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ‘ಡಿ’ ಗುಂಪಿನ ಪಂದ್ಯಗಳನ್ನು ಮುಂದೂಡಿರುವುದಾಗಿ ಎಎಫ್‌ಸಿ ತಿಳಿಸಿದೆ.

ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿಯ ಪಂದ್ಯ ಸ್ಥಳೀಯ ಈಗಲ್ಸ್ ಎಫ್‌ಸಿ ಎದುರು ಇದೇ 11ರಂದು ನಿಗದಿಯಾಗಿತ್ತು. ತಂಡ ಯಾವ ರೀತಿಯಲ್ಲಿ ನಿಯಮ ಉಲ್ಲಂಘನೆ ಮಾಡಿದೆ ಎಂದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ ತಂಡದ ವರ್ತನೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಕ್ರೀಡಾ ಸಚಿವ ಅಹಮ್ಮದ್ ಮಹಲೂಫರ್ ಹೇಳಿದ್ದಾರೆ.

ಬಿಎಫ್‌ಸಿಯ ಕೆಲವು ಆಟಗಾರರು ಕ್ವಾರಂಟೈನ್ ನಿಯಮ ಉಲ್ಲಂಘಿಸಿ ಮಾಲಿಯ ಪ್ರಮುಖ ಪ್ರದೇಶಗಳಲ್ಲಿ ಸುತ್ತಾಡಿದ್ದಾರೆ ಎಂದು ವರದಿಯಾಗಿದೆ. ಇದನ್ನು ಒಪ್ಪಿಕೊಂಡಿರುವ ಪಾರ್ಥ ಜಿಂದಾಲ್, ಮೂವರು ವಿದೇಶಿ ಆಟಗಾರರಿಂದ ಪ್ರಮಾದವಾಗಿದ್ದು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಕೋವಿಡ್ ಹೆಚ್ಚುತ್ತಿರುವ ಕಾರಣ ಭಾರತದ ಪ್ರವಾಸಿಗರಿಗೆ ಮಾಲ್ಡಿವ್ಸ್‌ನಲ್ಲಿ ನಿಷೇಧ ಹೇರಲಾಗಿದೆ. ಆದರೂ ಪಂದ್ಯಕ್ಕಾಗಿ ಬಿಎಫ್‌ಸಿ ಆಟಗಾರರಿಗೆ ಷರತ್ತುಬದ್ಧ ಅನುಮತಿ ನೀಡಲಾಗಿತ್ತು. ತಂಡ ಶುಕ್ರವಾರ ಮಾಲ್ಡಿವ್ಸ್ ತಲುಪಿತ್ತು. ನಿಯಮ ಉಲ್ಲಂಘಿಸಿದ ಆಟಗಾರರ ವರ್ತನೆಯನ್ನು ಸಹಿಸಲು ಸಾಧ್ಯವಿಲ್ಲ. ಆದ್ದರಿಂದ ತಕ್ಷಣ ಮಾಲ್ಡಿವ್ಸ್ ತೊರೆಯಬೇಕು ಎಂದು ಸಚಿವ ಮಹಲೂಫ್ ಟ್ವೀಟ್ ಮಾಡಿದ್ದರು.

‘ಪಂದ್ಯವನ್ನು ನಡೆಸಬಾರದು ಎಂದು ಮಾಲ್ಡಿವ್ಸ್ ಫುಟ್‌ಬಾಲ್ ಸಂಸ್ಥೆಗೆ ತಿಳಿಸಲಾಗಿದೆ. ಬಿಎಫ್‌ಸಿ ತಂಡಕ್ಕೆ ವಾಪಸ್ ಹೋಗಲು ಅಗತ್ಯ ಸಿದ್ಧತೆಗಳನ್ನು ಮಾಡುವಂತೆಯೂ ಸೂಚಿಸಲಾಗಿದೆ’ ಎಂದೂ ಸಚಿವರು ತಿಳಿಸಿದ್ದಾರೆ.

ಆಸ್ಟ್ರೇಲಿಯಾ ಆಟಗಾರ ಎರಿಕ್ ಪಾರ್ಟಲು ಬೀದಿಯೊಂದರಲ್ಲಿ ಸಾಗುತ್ತಿರುವ ಚಿತ್ರದೊಂದಿಗೆ ಸ್ಥಳೀಯ ಚಾನಲ್ ಒಂದರಲ್ಲಿ ಸುದ್ದಿ ಬಿತ್ತರಿಸಲಾಗಿತ್ತು.

ಎಟಿಕೆಎಂಬಿ ಪಂದ್ಯ ಮುಂದೂಡಿಕೆ

ಬಿಎಫ್‌ಸಿ ಆಟಗಾರರನ್ನು ವಾಪಸ್ ಹೋಗುವಂತೆ ಮಾಲ್ಡಿವ್ಸ್ ಸರ್ಕಾರ ಹೇಳಿರುವ ಕಾರಣ ‘ಡಿ’ ಗುಂಪಿನ ಎಲ್ಲ ಪಂದ್ಯಗಳನ್ನು ಮುಂದೂಡಿರುವುದಾಗಿ ಎಎಫ್‌ಸಿ ತಿಳಿಸಿದೆ. ಬಿಎಫ್‌ಸಿ ಮತ್ತು ಈಗಲ್ಸ್ ನಡುವಿನ ಪಂದ್ಯದಲ್ಲಿ ಜಯಿಸಿದ ತಂಡವನ್ನು ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ಎದುರಿಸಬೇಕಾಗಿತ್ತು. ಇದೇ 14ರಂದು ಗುಂಪು ಹಂತದ ಈ ಪಂದ್ಯ ನಡೆಯಬೇಕಿತ್ತು.

ಜುಲೈನಲ್ಲಿ ಭಾರತ–ಶ್ರೀಲಂಕಾ ಕ್ರಿಕೆಟ್ ಸರಣಿ: ಗಂಗೂಲಿ


ಸೌರವ್ ಗಂಗೂಲಿ

ಕೋಲ್ಕತ್ತ (ಪಿಟಿಐ): ಭಾರತ ಕ್ರಿಕೆಟ್ ತಂಡವು ಜುಲೈನಲ್ಲಿ ಶ್ರೀಲಂಕಾದಲ್ಲಿ ಸೀಮಿತ ಓವರ್‌ಗಳ ಕ್ರಿಕೆಟ್ ಸರಣಿಯಲ್ಲಿ ಆಡಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದಾರೆ.

‘ಜುಲೈನಲ್ಲಿ ಟಿ20 ಮತ್ತು ಏಕದಿನ ಪಂದ್ಯಗಳ ಸರಣಿಯು ಶ್ರೀಲಂಕಾದಲ್ಲಿ ಆಯೋಜನೆಗೊಳ್ಳಲಿದೆ. ಅದರಲ್ಲಿ ಭಾರತ ತಂಡವು ಆಡುವುದು‘ ಎಂದು ಭಾನುವಾರ ತಿಳಿಸಿದ್ದಾರೆ.

ಆದರೆ, ಈ ಟೂರ್ನಿಯಲ್ಲಿ ನಾಯಕ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಸೇರಿದಂತೆ ಕೆಲವು ಪ್ರಮುಖರು ತಂಡದಲ್ಲಿಇರುವುದಿಲ್ಲ. ಅದೇ ಸಮಯದಲ್ಲಿ ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿಯೂ ನಡೆಯಲಿದ್ದು ತಂಡವು ಅಲ್ಲಿ ಆಡಲಿದೆ. ಸೆಪ್ಟೆಂಬರ್ 14ರಂದು ಟೆಸ್ಟ್ ಸರಣಿ ಮುಕ್ತಾಯವಾಗುತ್ತದೆ.

‘ಶ್ವೇತವರ್ಣದ ಚೆಂಡಿನ ಕ್ರಿಕೆಟ್ ಪರಿಣತರ ತಂಡವನ್ನು ನಾವು ರಚಿಸುತ್ತೇವೆ. ಅದು ಪ್ರತ್ಯೇಕವಾದ ತಂಡವಾಗಿರುತ್ತೆ’ ಎಂದು ಗಂಗೂಲಿ ಸ್ಪಷ್ಟಪಡಿಸಿದರು. ಇದರೊಂದಿಗೆ ಟೆಸ್ಟ್ ಮತ್ತು ಸೀಮಿತ ಓವರ್‌ಗಳ ಮಾದರಿ ಕ್ರಿಕೆಟ್‌ಗಳಿಗೆ ಪ್ರತ್ಯೇಕ ತಂಡಗಳ ರಚನೆಗೂ ಒತ್ತು ಸಿಗಲಿದೆ.

ಸುದ್ದಿ 2 ನಿಮಿಷ

ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಸಾಮರ್ಥ್ಯವಿದೆ: ಮನ್‌ಪ್ರೀತ್

ಬೆಂಗಳೂರು (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಮಗೆ ಪದಕ ಗೆಲ್ಲುವ ಉತ್ತಮ ಅವಕಾಶ ಮತ್ತು ಸಾಮರ್ಥ್ಯ ಇದೆ ಎಂದು ಭಾರತ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ. ಟೋಕಿಯೊ ಕೂಟಕ್ಕಾಗಿ ಕಾತರದಿಂದ ಕಾಯುತ್ತಿರುವುದಾಗಿ ಅವರು ಹೇಳಿದ್ದಾರೆ.

ಭಾರತ ತಂಡ ಇದುವರೆಗೆ ಒಲಿಂಪಿಕ್ಸ್‌ನಲ್ಲಿ ಎಂಟು ಚಿನ್ನದ ಪದಕಗಳನ್ನು ಗೆದ್ದಿದೆ. 1980ರಲ್ಲಿ ಮಾಸ್ಕೋದಲ್ಲಿ ಗೆದ್ದಿದ್ದು ಕೊನೆಯದು.

‘ಈ ಬಾರಿ ನಾವು ಪದಕ ಗೆಲ್ಲುವ ಬಗ್ಗೆ ಅಪಾರ ವಿಶ್ವಾಸವಿದೆ. ಈ ವಿಶ್ವಾಸವೇ ನಮಗೆ ಪ್ರೇರಣೆ ಮತ್ತು ಆಶಾವಾದವನ್ನು ತುಂಬಿದೆ’ ಎಂದು ಒಲಿಂಪಿಕ್ಸ್ ಆರಂಭಕ್ಕೆ 75 ದಿನ ಬಾಕಿ ಉಳಿದಿರುವ ಸಂದರ್ಭದಲ್ಲಿ ಮನ್‌ಪ್ರೀತ್ ಮಾತನಾಡಿದರು.

ಇದೇ ವರ್ಷದ ಜುಲೈ 23ರಿಂದ ಕೂಟ ನಡೆಯಬೇಕಿದೆ.

‘ನಮ್ಮ ತರಬೇತಿಯನ್ನು ನಾವು ಸೂಕ್ತ ಸಮಯದಲ್ಲಿ ಉತ್ತುಂಗಕ್ಕೇರಿಸುವ ರೀತಿಯಲ್ಲಿ ಯೋಜಿಸಿದ್ದೇವೆ ಮತ್ತು ಟೋಕಿಯೊದಲ್ಲಿನ ಬಿಸಿಲಿನ ಪರಿಸ್ಥಿತಿಗೆ ನಮ್ಮ ದೇಹಗಳು ಒಗ್ಗಿಕೊಳ್ಳಲು ಮಾಡಲು ಬಿಸಿಲಿನಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದೇವೆ’ ಎಂದು ಮನ್‌ಪ್ರೀತ್ ನುಡಿದರು.



‘ಜರ್ಮನಿ ಹಾಗೂ ಸ್ಪೇನ್ ಎದುರು ಆಡಬೇಕಿದ್ದ ಎಫ್‌ಐಎಚ್ ಪ್ರೊ ಲೀಗ್ ಪಂದ್ಯಗಳು ಕೋವಿಡ್ ಕಾರಣದಿಂದ ಮುಂದೂಡಲ್ಪಟ್ಟಿರುವುದು ನಮಗೆ ಹಿನ್ನಡೆಯಾಗಿದೆ. ಆ ಪಂದ್ಯಗಳಿಂದ ನಮ್ಮ ಸಿದ್ಧತೆಗೆ ಅನುಕೂಲವಾಗುತ್ತಿತ್ತು. ಆದರೆ ಇದು ನಿಜವಾಗಿ ಸಂಕಷ್ಟದ ಸಮಯ. ಪ್ರಯಾಣ ನಿರ್ಬಂಧಗಳು ಇವೆ’ ಎಂದೂ ಭಾರತ ತಂಡದ ನಾಯಕ ಮನ್‌ಪ್ರೀತ್ ಅಭಿಪ್ರಾಯಪಟ್ಟರು.

ಪ್ರೊ ಬಾಕ್ಸಿಂಗ್: ಜಾಂಗ್ರಾ ಶುಭಾರಂಭ

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಬೆಳ್ಳಿ ಪದಕ ವಿಜೇತ, ಭಾರತದ ಮನದೀಪ್ ಜಾಂಗ್ರಾ ಅವರು ಪ್ರೊ ಬಾಕ್ಸಿಂಗ್‌ನಲ್ಲಿ ಶುಭಾರಂಭ ಮಾಡಿದ್ದಾರೆ. ಅಮೆರಿಕದ ಫ್ಲೋರಿಡಾದಲ್ಲಿ ನಡೆದ ಬೌಟ್‌ನಲ್ಲಿ ಅವರು ಅರ್ಜೆಂಟೀನಾದ ಲೂಸಿಯಾನೊ ರಾಮೊಸ್ ಅವರಿಗೆ ಸೋಲಿನ ರುಚಿ ತೋರಿಸಿದರು.

ಮನದೀಪ್ ಅವರು ಎರಡು ತಿಂಗಳ ಹಿಂದೆ ಅಮೆರಿಕಕ್ಕೆ ತರಬೇತಿಗೆ ತೆರಳಿದ್ದರು.

ಶನಿವಾರ ನಡೆದ ಸೂಪರ್ ವಾಲ್ಟರ್‌ವೇಟ್ ವಿಭಾಗದ ಈ ಬೌಟ್‌ನಲ್ಲಿ ಮನದೀಪ್ 4–0ಯಿಂದ ಎದುರಾಳಿಗೆ ಸೋಲಿನ ಪಂಚ್ ನೀಡಿದರು.

ಭಾರತದ ಬಾಕ್ಸರ್ ಫ್ಲೋರಿಡಾ ಮೂಲದ ಪ್ರೊ ಬಾಕ್ಸ್ ಪ್ರೊಮೊಷನ್ಸ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ.

ಜಾಹೀರಾತುದಾರರಿಗೆ ‘ಸ್ಟಾರ್’ ಅಭಯ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಈ ವರೆಗೆ ಆಗಿರುವ ಪಂದ್ಯಗಳಿಗೆ ಸಂಬಂಧಪಟ್ಟ ಮೊತ್ತ ಮಾತ್ರ ಪಾವತಿಸಿದರೆ ಸಾಕು ಎಂದು ಜಾಹೀರಾತುದಾರರು ಮತ್ತು ಪ್ರಾಯೋಜಕರಿಗೆ ಸ್ಟಾರ್ ಸ್ಪೋರ್ಟ್ಸ್ ತಿಳಿಸಿದೆ.

ಐಪಿಎಲ್‌ನ 2018ರಿಂದ 2022ರ ವರೆಗಿನ ಆವೃತ್ತಿಗಳ ಟೆಲಿವಿಷನ್ ಮತ್ತು ಡಿಜಿಟಲ್ ಹಕ್ಕುಗಳನ್ನು ಸ್ಟಾರ್ ಸ್ಪೋರ್ಟ್ಸ್ ₹ 16,348 ಕೋಟಿಗಳಿಗೆ ಪಡೆದುಕೊಂಡಿದೆ. ಈ ಬಾರಿ ಒಟ್ಟು 60 ಪಂದ್ಯಗಳು ನಡೆಯಬೇಕಾಗಿತ್ತು. ಆದರೆ ಕೋವಿಡ್‌ನಿಂದಾಗಿ ಮುಂದೂಡುವವರೆಗೆ 29 ಪಂದ್ಯಗಳು ಮಾತ್ರ ನಡೆದಿವೆ.

‘ಗಲಾಟೆಯಲ್ಲಿ ಭಾಗಿಯಾಗಿಲ್ಲ’

ಮಾಲಿ (ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಆಟಗಾರ ಡೇವಿಡ್ ವಾರ್ನರ್ ಮತ್ತು ವೀಕ್ಷಕ ವಿವರಣೆಕಾರ ಮೈಕಲ್ ಸ್ಲೇಟರ್ ನಡುವೆ ಮಾಲ್ಡಿವ್ಸ್ ಬಾರ್‌ನಲ್ಲಿ ಕುಡಿದ ಮತ್ತಿನಲ್ಲಿ ಶನಿವಾರ ತಡರಾತ್ರಿ ಜಟಾಪಟಿ ನಡೆದಿರುವುದಾಗಿ ವರದಿಯಾಗಿದೆ. ಆದರೆ ಈ ವರದಿಗಳನ್ನು ವಾರ್ನರ್ ಹಾಗೂ ಸ್ಲೇಟರ್ ಅವರು ಅಲ್ಲಗಳೆದಿದ್ದಾರೆ.

ಐಪಿಎಲ್ ಟೂರ್ನಿಯನ್ನು ಅನಿರ್ದಿಷ್ಟ ಅವಧಿಗೆ ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾಕ್ಕೆ ತೆರಳಬೇಕಿದ್ದ ಆಟಗಾರರು ಸ್ವಲ್ಪ ದಿನಗಳ ಕಾಲ ಮಾಲ್ಡಿವ್ಸ್‌ನಲ್ಲಿ ಕ್ವಾರಂಟೈನ್ ವಾಸದಲ್ಲಿದ್ದಾರೆ.

ಮಾಲ್ಡಿವ್ಸ್‌ನ ರೆಸಾರ್ಟ್‌ನಲ್ಲಿರುವ ವಾರ್ನರ್ ಹಾಗೂ ಸ್ಲೇಟರ್ ನಡುವೆ ವಾಗ್ವಾದ ನಡೆದಿದೆ ಎಂದು ‘ಡೈಲಿ ಟೆಲಿಗ್ರಾಫ್’ ವರದಿ ಮಾಡಿತ್ತು.

ಸಂಕ್ಷಿಪ್ತ ಸುದ್ದಿ

ಚೇತನ್ ಸಕಾರಿಯಾಗೆ ಪಿತೃವಿಯೋಗ

ರಾಜ್‌ಕೋಟ್ (ಪಿಟಿಐ): ಸೌರಾಷ್ಟ್ರದ ಯುವ ಕ್ರಿಕೆಟಿಗ ಚೇತನ್ ಸಕಾರಿಯಾ ಅವರ ತಂದೆ ಕಾಂಜಿಭಾಯಿ ಸಕಾರಿಯಾ (42) ಅವರು ಭಾನುವಾರ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ಕೆಲವು ದಿನಗಳ ಹಿಂದೆ ಅವರಿಗೆ ಸೋಂಕು ಖಚಿತಪಟ್ಟಿತ್ತು. ಚೇತನ್, ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ರಾಜಸ್ಥಾನ ರಾಯಲ್ಸ್ ಪರ ಆಡಿದ್ದರು.

ಹಾಕಿ ಆಟಗಾರ ಜಾರ್ಜ್ ಫರ್ನಾಂಡೀಸ್ ನಿಧನ

ಬೆಂಗಳೂರು: ಕರ್ನಾಟಕ ಹಾಕಿ ತಂಡದ ಮಾಜಿ ಆಟಗಾರ ಜಾರ್ಜ್ ಫರ್ನಾಂಡೀಸ್ (64) ಭಾನುವಾರ ಕೋವಿಡ್‌ನಿಂದ ನಿಧನರಾದರು. 1970, 80ರ ದಶಕದಲ್ಲಿ ಹಲವು ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಅವರು ಆಡಿದ್ದರು.

ಶಾಸಕ ಮೋಹನ ಕುಮಾರ್ ಕೊಂಡಜ್ಜಿ ಸಲಹೆ


ಕ್ರೀಡಾಪಟುಗಳಿಗೆ ಕೆಎಸ್‌ಸಿಎ ನೆರವಾಗಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಹೆಚ್ಚುತ್ತಿರುವ ಸಂದರ್ಭದಲ್ಲಿ ಮಾಜಿ ಕ್ರಿಕೆಟ್ ಆಟಗಾರರು, ಅಂಪೈರ್‌ಗಳು ಮತ್ತು ಇತರ ಕ್ರೀಡಾಪಟುಗಳ ನೆರವಿಗೆ ಧಾವಿಸುವಂತೆ ವಿಧಾನ ಪರಿಷತ್ ಸದಸ್ಯ ಮೋಹನ ಕುಮಾರ್ ಕೊಂಡಜ್ಜಿ ರಾಜ್ಯ ಕ್ರಿಕೆಟ್ ಸಂಸ್ಥೆಯನ್ನು (ಕೆಎಸ್‌ಸಿಎ) ಆಗ್ರಹಿಸಿದ್ದಾರೆ.

‘ಕ್ರೀಡಾಪಟುಗಳನ್ನು ನಾನು ಗೌರವಿಸುತ್ತೇನೆ. ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಹಾಕಿ ತಂಡದಲ್ಲಿದ್ದ ರವೀಂದ್ರ ಪಾಲ್ ಸಿಂಗ್ ಮತ್ತು ಕೌಶಿಕ್ ಅವರನ್ನು ಕೋವಿಡ್‌ನಿಂದಾಗಿ ಕಳೆದುಕೊಳ್ಳಬೇಕಾಗಿ ಬಂದದ್ದು ಬೇಸರದ ವಿಷಯ’ ಎಂದು ಅವರು ಪ್ರಕಟಣೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

‘ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಮತ್ತು ಭಾರತ ಒಲಿಂಪಿಕ್ಸ್ ಸಂಸ್ಥೆ (ಐಒಎ) ಮಾಜಿ ಅಂತರ ರಾಷ್ಟ್ರೀಯ ಕ್ರೀಡಾಪಟುಗಳು ಹಾಗೂ ಅಂಪೈರ್‌ಗಳ ನೆರವಿಗಾಗಿ ತಂಡವೊಂದನ್ನು ರಚಿಸಿರುವುದು ಸಂತಸದ ಸಂಗತಿ. ಕೆಎಸ್‌ಸಿಎ ಕೂಡ ಇದೇ ರೀತಿಯ ತಂಡವೊಂದನ್ನು ರಚಿಸಿ ಕ್ರೀಡಾಪಟುಗಳಿಗೆ ನೆರವಾಗಬೇಕು. ಮಾಜಿ ಕ್ರಿಕೆಟರುಗಳು, ಅಂಪೈರ್‌ಗಳು ಮತ್ತು ಇತರ ಕ್ರೀಡಾಪಟುಗಳು ಯಾರಾದರೂ ಕೋವಿಡ್‌ನಿಂದ ಬಳಲುತ್ತಿದ್ದರೆ ಅವರಿಗೆ ಸೌಲಭ್ಯಗಳನ್ನು ಒದಗಿಸಬೇಕು’ ಎಂದು ಸಲಹೆ ನೀಡಿದ್ದಾರೆ.


ಮೋಹನ ಕುಮಾರ್ ಕೊಂಡಜ್ಜಿ

‘ಚಿನ್ನಸ್ವಾಮಿ ಕ್ರೀಡಾಂಗಣ ಸೇರಿದಂತೆ ಬೆಂಗಳೂರಿನಲ್ಲಿರುವ ವಿವಿಧ ಕ್ರೀಡಾಂಗಣಗಳು, ಹುಬ್ಬಳ್ಳಿ, ಶಿವಮೊಗ್ಗ ಮುಂತಾದ ಕಡೆಗಳಲ್ಲಿ ಕೆಎಸ್‌ಸಿಎಗೆ ಸಾಕಷ್ಟು ಕಟ್ಟಡ ಮತ್ತು ಜಾಗದ ಸೌಲಭ್ಯ ಇದೆ. ಅಲ್ಲಿರುವ ಕೊಠಡಿಗಳನ್ನು ಆಸ್ಪತ್ರೆಗಳಾಗಿ ಪರಿವರ್ತಿಸಿ ಕ್ರೀಡಾಪಟುಗಳಿಗೆ ಚಿಕಿತ್ಸೆ ನೀಡಬಹುದು. ಆರ್ಥಿಕ ಸಮಸ್ಯೆ ಎದುರಿಸುತ್ತಿರುವ ಮಾಜಿ ಆಟಗಾರರಿಗೆ ಹಣಕಾಸಿನ ನೆರವು ಕೂಡ ನೀಡಬೇಕು’ ಎಂದು ಅವರು ಹೇಳಿದ್ದಾರೆ.


ಕೋವಿಡ್‌ನಿಂದಾಗಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯನ್ನು ಮುಂದೂಡಿರುವುದು ಸಂತಸದ ವಿಷಯ. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಸೇರಿದಂತೆ ಆರು ಟೆಸ್ಟ್ ಪಂದ್ಯಗಳನ್ನು ಆಡಲು ಇಂಗ್ಲೆಂಡ್‌ಗೆ ತೆರಳುವ ಭಾರತ ತಂಡದ ಪ್ರವಾಸವನ್ನು ರದ್ದುಗೊಳಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಇಂಗ್ಲೆಂಡ್‌ಗೆ ಹೋದರೆ ಭಾರತದಲ್ಲಿರುವುದಕ್ಕಿಂತಲೂ ಅಪಾಯಕಾರಿಯಾಗಿರುವ ವೈರಾಣುವಿನ ಪ್ರಭೇದಕ್ಕೆ ನಮ್ಮ ಆಟಗಾರರು ಒಡ್ಡಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರವಾಸ ರದ್ದುಗೊಳಿಸುವಂತೆ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಅವರನ್ನು ಒತ್ತಾಯಿಸಲು ಕೆಎಸ್‌ಸಿಎ ಮುಂದಾಗಬೇಕು ಎಂದೂ ಮೋಹನ್ ಕೊಂಡಜ್ಜಿ ಹೇಳಿದ್ದಾರೆ.

ಟೆನಿಸ್: ಪ್ರಶಸ್ತಿ ಗೆದ್ದ ಅರಿನಾ

ಮ್ಯಾಡ್ರಿಡ್ (ಎಪಿ): ಬೆಲಾರಸ್‌ನ ಅರಿನಾ ಸಬಲೆಂಕಾ ಅವರು ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ಭಾನುವಾರ ನಡೆದ ಫೈನಲ್‌ನಲ್ಲಿ ಅವರು ಅಗ್ರ ಕ್ರಮಾಂಕದ ಆಟಗಾರ್ತಿ, ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಅವರನ್ನು 6-0, 3-6, 6-4ರಲ್ಲಿ ಮಣಿಸಿದರು.

ಈ ಮೂಲಕ 10ನೇ ಡಬ್ಲ್ಯುಟಿಎ ಪ್ರಶಸ್ತಿ ಗೆದ್ದುಕೊಂಡರು. ಆವೆ ಮಣ್ಣಿನ ಅಂಗಣದಲ್ಲಿ ಇದು ಅವರಿಗೆ ಮೊದಲ ಪ್ರಶಸ್ತಿಯಾಗಿದೆ.


ಅರಿನಾ ಸಬಲೆಂಕಾ

ಪುರುಷರ ವಿಭಾಗದ ಫೈನಲ್‌ನಲ್ಲಿ ಅಲೆಕ್ಸಾಂಡರ್ ಜ್ವೆರೆವ್ ಮತ್ತು ಮಟಿಯೊ ಬರೆಟಿನಿ ಸೆಣಸುವರು.

ಖರೀದಿ ಸ್ಥಗಿತ: ಕಡಿಮೆ ಬೆಲೆಗೆ ಕೇಳುತ್ತಿರುವ ದಲ್ಲಾಳಿಗಳು

ಭತ್ತ ಬೆಳೆಗಾರರು ಅತಂತ್ರ

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ರಾಜ್ಯ ಸರ್ಕಾರವು ಭತ್ತ ಖರೀದಿ ಕೇಂದ್ರಗಳನ್ನು ಹಠಾತ್ ಬಂದ್ ಮಾಡಿರುವುದರಿಂದ ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಭತ್ತ ಬೆಳೆಗಾರರು ಅತಂತ್ರರಾಗಿದ್ದಾರೆ.

ರಾಜ್ಯದಲ್ಲಿ ಭತ್ತ ಬೆಳೆಯುವ ಜಿಲ್ಲೆಗಳಲ್ಲಿ ಬಳ್ಳಾರಿ, ರಾಯಚೂರು ಹಾಗೂ ಕೊಪ್ಪಳದ ಪಾಲು ಹೆಚ್ಚಿದೆ. ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ 1.34 ಲಕ್ಷ ಎಕರೆ, ರಾಯಚೂರಿನಲ್ಲಿ 2.30 ಲಕ್ಷ ಎಕರೆ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ 82 ಸಾವಿರ ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದೆ. ಎಕರೆಗೆ ಸರಾಸರಿ 25 ಕ್ವಿಂಟಾಲ್ ಭತ್ತ ಲೆಕ್ಕಕ್ಕೆ ತೆಗೆದುಕೊಂಡರೂ ಅದರ ಒಟ್ಟು ಮೌಲ್ಯ ₹ 2,000 ಕೋಟಿಗೂ ಅಧಿಕವಾಗುತ್ತದೆ.

ಮೇ 5ರಿಂದ ಸರ್ಕಾರಿ ಕೇಂದ್ರಗಳಲ್ಲಿ ಏಕಾಏಕಿ ಖರೀದಿ ಬಂದ್ ಮಾಡಿರುವುದರಿಂದ ರೈತರು ಭತ್ತ ಮಾರಾಟ ಮಾಡಲು ಆಗದೆ ಕಂಗಾಲಾಗಿದ್ದಾರೆ. ದಲ್ಲಾಳಿಗಳು ಅತಿ ಕಡಿಮೆ ಬೆಲೆಗೆ ಭತ್ತ ಕೇಳುತ್ತಿದ್ದಾರೆ.

‘ದುಂಡು ರೋಗದಿಂದ ಮುಂಗಾರಿನಲ್ಲಿ ಶೇ 40ರಷ್ಟು ಬೆಳೆ ಹಾಳಾಗಿತ್ತು. ಈ ಸಲ ಸಕಾಲಕ್ಕೆ ಸಮರ್ಪಕವಾಗಿ ನೀರು ಹರಿಸಲಿಲ್ಲ. ಶೇ 70ರಷ್ಟು ಬೆಳೆ ಕೈಸೇರಿದೆ. ಈ ನಡುವೆ ಖರೀದಿ ಕೇಂದ್ರಗಳನ್ನು ಬಂದ್ ಮಾಡಿರುವುದರಿಂದ ರೈತರು ತೊಂದರೆಗೆ ಸಿಲುಕಿದ್ದಾರೆ’ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪ್ರಧಾನ ಕಾರ್ಯದರ್ಶಿ ಜೆ. ಕಾರ್ತಿಕ್ ತಿಳಿಸಿದ್ದಾರೆ.


ಕಂಪ್ಲಿಯಲ್ಲಿ ರೈತ ಭತ್ತ ಒಣ ಹಾಕಿರುವುದು

‘ಪ್ರತಿ ಕ್ವಿಂಟಾಲ್ ಭತ್ತಕ್ಕೆ ಸರ್ಕಾರ ₹ 1,886 ಬೆಂಬಲ ಬೆಲೆ ಘೋಷಿಸಿದೆ. ಖರೀದಿ ಕೇಂದ್ರ ತೆರೆಯದ ಕಾರಣ ದಲ್ಲಾಳಿಗಳು ₹1,400ಕ್ಕಿಂತ ಕಡಿಮೆ ಬೆಲೆಗೆ ಕೇಳುತ್ತಿದ್ದಾರೆ. ಮಿಲ್‌ನವರು ಖರೀದಿಸಲು ಹಿಂದೇಟು ಹಾಕುತ್ತಿದ್ದಾರೆ. ಮೊದಲೇ ಸಂಕಷ್ಟದಲ್ಲಿರುವ ರೈತರನ್ನು ಸರ್ಕಾರವೇ ಸಂಕಷ್ಟಕ್ಕೆ ದೂಡಿದಂತಾಗಿದೆ. ಕೂಡಲೇ ಖರೀದಿ ಕೇಂದ್ರ ಆರಂಭಿಸಿ, ಸರ್ಕಾರ ರೈತರ ನೆರವಿಗೆ ಬರಬೇಕು’ ಎಂದು ಹಕ್ಕೊತ್ತಾಯ ಮಾಡಿದ್ದಾರೆ.


ಸರ್ಕಾರದ ಬಳಿ ದುಡ್ಡಿಲ್ಲ. ಕೋವಿಡ್ ಕಾರಣದಿಂದ ಸದ್ಯ ಭತ್ತ ಖರೀದಿ ಕೇಂದ್ರ ಬಂದ್ ಮಾಡಲಾಗಿದೆ. ಪರಿಸ್ಥಿತಿ ಸಹಜವಾದ ನಂತರ ತೆರೆಯಲಾಗುವುದು. – ಉಮೇಶ ಕತ್ತಿ, ಸಚಿವ, ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರ

‘ಕೋವಿಡ್ ಸಂಕಷ್ಟದ ಕಾಲದಲ್ಲಿ ತೆಲಂಗಾಣ ಸರ್ಕಾರವು ರೈತರ ಎಲ್ಲ ರೀತಿಯ ಉತ್ಪನ್ನಗಳ ಖರೀದಿಗೆ ₹ 32,000 ಕೋಟಿ ತೆಗೆದಿರಿಸಿ ಅವರ ನೆರವಿಗೆ ಬಂದಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಎಫ್‌ಪಿಐ: ಹೊರಹರಿವು

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕವು ತೀವ್ರವಾಗಿ ಹರಡುತ್ತಿರುವುದು ಹಾಗೂ ಅದರಿಂದ ಆರ್ಥಿಕತೆಯ ಮೇಲೆ ಆಗಲಿರುವ ಪರಿಣಾಮಗಳಿಂದಾಗಿ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಮೇ ತಿಂಗಳ ಮೊದಲ ವಾರದಲ್ಲಿ ಷೇರುಪೇಟೆಯಿಂದ ₹ 5,936 ಕೋಟಿ ಬಂಡವಾಳವನ್ನು ಹಿಂದಕ್ಕೆ ಪಡೆದಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	100 ಮೊಟ್ಟೆಗೆ	₹455
	12 ಮೊಟ್ಟೆಗೆ	₹60
ಮೈಸೂರು	100 ಮೊಟ್ಟೆಗೆ	₹455

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹170-342

ದ್ವಿತಳಿ (ಬಿ.ವಿ) ₹233-347

ಬ್ಯಾಡ್ ಬ್ಯಾಂಕ್: ಜೂನ್‌ನಿಂದ ಕಾರ್ಯಾರಂಭ ನಿರೀಕ್ಷೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಆಸ್ತಿ ಪುನರ್‌ರಚನಾ ಕಂಪನಿಯು (ಎನ್‌ಎಆರ್‌ಸಿಎಲ್–ಬ್ಯಾಡ್ ಬ್ಯಾಂಕ್) ಜೂನ್ ತಿಂಗಳಿನಿಂದ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ ಎಂದು ಭಾರತೀಯ ಬ್ಯಾಂಕುಗಳ ಒಕ್ಕೂಟದ (ಐಬಿಎ) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸುನಿಲ್ ಮೆಹ್ತಾ ತಿಳಿಸಿದ್ದಾರೆ.

ಬ್ಯಾಂಕ್‌ಗಳಲ್ಲಿನ ವಸೂಲಾಗದ ಸಾಲದ (ಎನ್‌ಪಿಎ) ಸಮಸ್ಯೆ ಇತ್ಯರ್ಥಪಡಿಸಲು ಸಾರ್ವಜನಿಕ ಮತ್ತು ಖಾಸಗಿ ಬ್ಯಾಂಕ್‌ಗಳ ಸಹಯೋಗದೊಂದಿಗೆ ಇದನ್ನು ಸ್ಥಾಪಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ಇದಕ್ಕೆ ಬ್ಯಾಡ್ ಬ್ಯಾಂಕ್ ಎಂದೂ ಹೇಳಲಾಗುತ್ತದೆ.

ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳು ಎನ್‌ಪಿಎ ಎಂದು ಗುರುತಿಸುವ ಸಾಲಗಳನ್ನು ಬ್ಯಾಡ್ ಬ್ಯಾಂಕ್‌ಗೆ ಖರೀದಿಸಲಿದೆ ಎಂದು ಮೆಹ್ತಾ ಹೇಳಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021–22ರ ಬಜೆಟ್‌ನಲ್ಲಿ ಬ್ಯಾಡ್ ಬ್ಯಾಂಕ್ ಸ್ಥಾಪಿಸುವ ಪ್ರಸ್ತಾವ ಮಾಡಿದ್ದರು.

ವಂಚನೆ ಎಂದು ವರ್ಗೀಕರಿಸಿರುವ ಸಾಲವನ್ನು ಬ್ಯಾಡ್ ಬ್ಯಾಂಕ್‌ಗೆ ಮಾರಾಟ ಮಾಡುವಂತಿಲ್ಲ ಎಂದು ಆರ್‌ಬಿಐ ಹೇಳಿದೆ. ಆರ್‌ಬಿಐನ ವಾರ್ಷಿಕ ವರದಿಯ ಪ್ರಕಾರ, 2020ರ ಮಾರ್ಚ್ ಅಂತ್ಯಕ್ಕೆ 1.9 ಲಕ್ಷ ಕೋಟಿ ಸಾಲಗಳನ್ನು ವಂಚನೆ ಎಂದು ವರ್ಗೀಕರಿಸಲಾಗಿದೆ.

ಪಿಪಿಎಫ್ ಹೂಡಿಕೆ: ಸಿಗುತ್ತೆ ಸಾಲ



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.


ದೇಶದಲ್ಲಿ ಕೋವಿಡ್-19ರ ಎರಡನೆಯ ಅಲೆಯಿಂದಾಗಿ ಉದ್ಯೋಗ ನಷ್ಟ, ವೇತನ ಕಡಿತದಂತಹ ಕ್ರಮಗಳು ಜಾರಿಗೆ ಬಂದಿವೆ. ಇವುಗಳಿಂದಾಗಿ ಜನ ಹಣಕಾಸಿನ ತೊಂದರೆ ಎದುರಿಸುತ್ತಿದ್ದಾರೆ. ಈ ಸಮಸ್ಯೆಯಿಂದ ತಾತ್ಕಾಲಿಕ ಶಮನ ಪಡೆಯಲು ಕೆಲವರು ಹಿಂದೆ ಕೂಡಿಟ್ಟಿದ್ದ ತುರ್ತು ನಿಧಿಯ ಮೊರೆ ಹೋದರೆ ಮತ್ತೆ ಕೆಲವರು ಉಳಿತಾಯದ ಹಣ ಬಳಸಲು ಮುಂದಾಗುತ್ತಿದ್ದಾರೆ. ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಹೂಡಿಕೆಯ ಮೇಲೆ ಸಾಲ ಪಡೆಯಬಹುದು ಎನ್ನುವ ವಿಚಾರ ಅನೇಕರಿಗೆ ಗೊತ್ತಿಲ್ಲ. ಪಿಪಿಎಫ್ ಹೂಡಿಕೆ ಮೇಲೆ ಸಾಲ ಪಡೆಯುವುದು ಹೇಗೆ, ಅದರ ಸಾಧಕ–ಬಾಧಕಗಳೇನು ಎನ್ನುವ ಮಾಹಿತಿ ಇಲ್ಲಿದೆ.

ಪಿಪಿಎಫ್ ಸಾಲದ ಬಡ್ಡಿ ಲೆಕ್ಕಾಚಾರ: ಪಿಪಿಎಫ್ ಎಂಬುದು ಹೂಡಿಕೆ ಮತ್ತು ತೆರಿಗೆ ಉಳಿತಾಯದ ಸಾಧನ ಮಾತ್ರವೇ ಅಲ್ಲ. ಹಣಕಾಸಿನ ತುರ್ತು ಪರಿಸ್ಥಿತಿಗಳಲ್ಲಿ ಪಿಪಿಎಫ್ ಹೂಡಿಕೆಯ ಮೇಲೆ ಸಾಲ ಪಡೆಯಲು ಸಾಧ್ಯವಿದೆ. ಪಿಪಿಎಫ್ ಸಾಲ ನಿಯಮಗಳ ಅನ್ವಯ, ಖಾತೆದಾರರು ಮೂರನೇ ವರ್ಷದಿಂದ ಆರನೇ ವರ್ಷದ ಅವಧಿಯಲ್ಲಿ ಶೇಕಡ 1ರ ಬಡ್ಡಿ ದರದಲ್ಲಿ ಸಾಲ ಪಡೆಯಬಹುದು! ಅರೆ, ಕೇವಲ ಶೇ 1ರ ಬಡ್ಡಿ ದರವೇ ಎಂದು ಹುಬ್ಬೇರಿಸಬೇಡಿ. ವಾಸ್ತವದಲ್ಲಿ ಬಡ್ಡಿ ದರ ಹೆಚ್ಚಿಗೆ ಇದೆ.

ನೀವು ಪಡೆಯುವ ಸಾಲದ ಮೊತ್ತ ಎಷ್ಟೋ, ಪಿಪಿಎಫ್ ಖಾತೆಯಲ್ಲಿ ಇರುವ ಅಷ್ಟು ಮೊತ್ತಕ್ಕೆ ಸಾಲ ತೀರುವವರೆಗೆ ಬಡ್ಡಿ ಸಿಗುವುದಿಲ್ಲ! ಇದರ ಪರಿಣಾಮವಾಗಿ, ಚಾಲ್ತಿಯಲ್ಲಿರುವ ಪಿಪಿಎಫ್ ಬಡ್ಡಿ ದರಕ್ಕೆ ಹೆಚ್ಚುವರಿಯಾಗಿ ಶೇ 1ರಷ್ಟು ಬಡ್ಡಿ ದರ ನಿಮ್ಮ ಸಾಲದ ಮೇಲಿನ ಬಡ್ಡಿ ದರವಾಗಿರುತ್ತದೆ. ಉದಾಹರಣೆಗೆ, ಏಪ್ರಿಲ್–ಜೂನ್ ತ್ರೈಮಾಸಿಕದ ಪಿಪಿಎಫ್ ಬಡ್ಡಿ ದರ ಶೇ 7.1ರಷ್ಟಿದೆ. ಪಿಪಿಎಫ್ ಸಾಲದ ಮೇಲಿನ ಬಡ್ಡಿ ದರ ಶೇ 7.1 + ಶೇ 1 = ಶೇ 8.1ರಷ್ಟು ಆಗುತ್ತದೆ.

ವೈಯಕ್ತಿಕ ಸಾಲದ ಮೇಲಿನ ಬಡ್ಡಿ ದರ ಶೇ 10ರಿಂದ ಶೇ 18ರಷ್ಟಿರುತ್ತದೆ. ಅದಕ್ಕೆ ಹೋಲಿಕೆ ಮಾಡಿ ನೋಡಿದಾಗ ಪಿಪಿಎಫ್ ಮೇಲಿನ ಸಾಲದ ಬಡ್ಡಿ ದರ ಕಡಿಮೆ.

ಎಷ್ಟು ಸಾಲ ಪಡೆಯಬಹುದು?: ಪಿಪಿಎಫ್ ಹೂಡಿಕೆ ಆರಂಭಿಸಿದ ಮೂರನೇ ವರ್ಷದಿಂದ ಆರನೇ ವರ್ಷದವರೆಗೆ ಸಾಲ ಪಡೆಯಬಹುದು. ಎರಡನೆಯ ವರ್ಷದ ಅಂತ್ಯದಲ್ಲಿ ಪಿಪಿಎಫ್ ಖಾತೆಯಲ್ಲಿರುವ ಒಟ್ಟು ಮೊತ್ತದ ಶೇ 25ರಷ್ಟು ಹಣ ಸಾಲದ ರೂಪದಲ್ಲಿ ಪಡೆಯಬಹುದು. ಉದಾಹರಣೆಗೆ ನೀವು ಎರಡು ವರ್ಷಗಳ ಅವಧಿಯಲ್ಲಿ ಪಿಪಿಎಫ್‌ನಲ್ಲಿ ₹ 3 ಲಕ್ಷ ಹೂಡಿಕೆ ಮಾಡಿದ್ದು, ಬಡ್ಡಿ ದರ ಸೇರಿ ಅದರ ಮೌಲ್ಯ ₹ 3.1 ಲಕ್ಷ ಆಗಿದೆ ಎಂದು ಭಾವಿಸೋಣ. ಮೂರನೇ ವರ್ಷ ಪಿಪಿಎಫ್ ಸಾಲಕ್ಕೆ ಅರ್ಜಿ ಸಲ್ಲಿಸಿದ್ದೀರಿ ಎಂದುಕೊಳ್ಳೋಣ. ನಿಮಗೆ ₹ 56,081 (₹ 3.1 ಲಕ್ಷದ ಶೇ 25 ರಷ್ಟು) ಸಾಲವಾಗಿ ಸಿಗುತ್ತದೆ. ಮೂರನೇ ವರ್ಷದಲ್ಲಿ ಸಾಲಕ್ಕೆ ಅರ್ಜಿಸಲ್ಲಿಸಿದಾಗ ಇದಕ್ಕಿಂತ ಹೆಚ್ಚಿನ ಸಾಲ ಸಿಗಲು ಸಾಧ್ಯವಿಲ್ಲ. ನಾಲ್ಕನೇ, ಐದನೇ ಮತ್ತು ಆರನೇ ವರ್ಷ ಕಳೆದಂತೆ ಹೂಡಿಕೆ ಮೊತ್ತಕ್ಕೆ ಅನುಗುಣವಾಗಿ ಸಿಗುವ ಸಾಲದ ಮೊತ್ತ ಹೆಚ್ಚಾಗುತ್ತದೆ.



ಪಿಪಿಎಫ್ ಮೇಲಿನ ಸಾಲ ಅಲ್ಪಾವಧಿ ಸಾಲವಾಗಿದ್ದು , ಗರಿಷ್ಠ 36 ತಿಂಗಳ ಅವಧಿಗೆ ಮಾತ್ರ ಸಿಗಲಿದೆ. ಅಂದರೆ ಸಾಲವನ್ನು 36 ತಿಂಗಳ ಒಳಗಾಗಿ ಮರುಪಾವತಿ ಮಾಡಬೇಕು. ಸಾಲ ಪಾವತಿ ವಿಳಂಬವಾದರೆ ಹೆಚ್ಚುವರಿಯಾಗಿ ಶೇ 6ರಷ್ಟು ಬಡ್ಡಿ ಹೊರೆ ಬೀಳುತ್ತದೆ.

ಅನುಕೂಲಗಳೇನು?: ಪಿಪಿಎಫ್ ಸಾಲ ಪಡೆಯಲು ಯಾವುದೇ ಮೇಲಾಧಾರ (COLLATERAL) ಅಗತ್ಯವಿಲ್ಲ, ಇಲ್ಲಿ ನಿಮ್ಮ ಪಿಪಿಎಫ್ ಹೂಡಿಕೆ ಆಧಾರವಾಗಿಟ್ಟುಕೊಂಡು ಸಾಲ ನೀಡಲಾಗುತ್ತದೆ. ವೈಯಕ್ತಿಕ ಸಾಲಗಳ ಬಡ್ಡಿ ದರ ಶೇ 10ರಿಂದ ಶೇ 18ರವರೆಗೆ ಇರುತ್ತದೆ. ಅದಕ್ಕೆ ಹೋಲಿಕೆ ಮಾಡಿ ನೋಡಿದಾಗ ಪಿಪಿಎಫ್ ಮೇಲಿನ ಸಾಲ ಒಳ್ಳೆಯ ಆಯ್ಕೆ. ಸಾಲ ಮರುಪಾವತಿಗೆ 36 ತಿಂಗಳ ಅವಧಿ ಸಿಗುತ್ತದೆ. ಹಾಗಾಗಿ ನಿಮ್ಮ ತಿಂಗಳ ಖರ್ಚು–ವೆಚ್ಚಗಳಿಗೆ ತೊಂದರೆಯಾಗದಂತೆ ಸುಲಭವಾಗಿ ಸಾಲ ಮರುಪಾವತಿ ಮಾಡಬಹುದು. ಸುಲಭ ಮಾಸಿಕ ಕಂತುಗಳಲ್ಲಿ (ಇಎಂಐ) ಪಿಪಿಎಫ್ ಸಾಲ ಪಾವತಿಸಬಹುದು.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಅನಿಶ್ಚಿತತೆಯ ನಡುವೆ ಷೇರುಪೇಟೆ ಜಿಗಿತ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೆಯ ವಾರವೂ ಗಳಿಕೆ ಕಂಡಿವೆ. 49,206 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.87ರಷ್ಟು ಜಿಗಿದಿದೆ. 14,823 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.31ರಷ್ಟು ಗಳಿಕೆ ಕಂಡಿದೆ. ಸೆನ್ಸೆಕ್ಸ್ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 1.4 ಮತ್ತು ಶೇ 2.5ರಷ್ಟು ಗಳಿಕೆ ಕಂಡಿವೆ.

ಜಾಗತಿಕ ವಿದ್ಯಮಾನಗಳು ಷೇರುಪೇಟೆಗೆ ಪೂರಕವಾಗಿರುವುದು, ಪ್ರಮುಖ ಕಂಪನಿಗಳ ತ್ರೈಮಾಸಿಕ ಫಲಿತಾಂಶ ಉತ್ತಮವಾಗಿರುವುದು, ಸೊರಗಿರುವ ಅರ್ಥ ವ್ಯವಸ್ಥೆಯನ್ನು ಬಲಗೊಳಿಸಲು ಆರ್‌ಬಿಐ ಕೈಗೊಂಡ ಆರ್ಥಿಕ ಕ್ರಮಗಳು ಸೇರಿ ಕೆಲವು ಬೆಳವಣಿಗೆಗಳು ಮಾರುಕಟ್ಟೆಯ ಉತ್ಸಾಹಕ್ಕೆ ಕಾರಣವಾಗಿವೆ. ಆದರೆ ಪ್ರತಿದಿನ ಸುಮಾರು ನಾಲ್ಕು ಲಕ್ಷ ಕೋವಿಡ್ ಪ್ರಕರಣಗಳು ವರದಿಯಾಗುತ್ತಿರುವುದು ಹೂಡಿಕೆದಾರರನ್ನು ಚಿಂತೆಗೆ ದೂಡಿದೆ.

ರಿಯಲ್ ಎಸ್ಟೇಟ್ ಹೊರತುಪಡಿಸಿ ಎಲ್ಲ ವಲಯಗಳು ಈ ವಾರ ಗಳಿಕೆ ಕಂಡಿವೆ. ನಿಫ್ಟಿ ಲೋಹ ವಲಯ ಶೇ 10ರಷ್ಟು ಗಳಿಕೆ ಕಂಡಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3ರಷ್ಟು, ಮಾಹಿತಿ ತಂತ್ರಜ್ಞಾನ ವಲಯ ಶೇ 2.3ರಷ್ಟು ಜಿಗಿದಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 5,092.50 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 2,135.23 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಟಾಟಾ ಸ್ಟೀಲ್ ಶೇ 7.40ರಷ್ಟು, ಹಿಂಡಾಲ್ಕೊ ಶೇ 3.93ರಷ್ಟು, ಏರ್‌ಟೆಲ್ ಶೇ 5.92ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 3.72ರಷ್ಟು, ಅದಾನಿ ಪೋರ್ಟ್ಸ್ ಶೇ 5.16ರಷ್ಟು ಹೆಚ್ಚಳ ಕಂಡಿವೆ. ಟಾಟಾ ಕನ್ಸ್ಯೂಮರ್ ಪ್ರಾಡಕ್ಟ್ಸ್ ಶೇ 6.05ರಷ್ಟು, ರಿಲಯನ್ಸ್ ಶೇ 3.15ರಷ್ಟು, ಟೈಟಾನ್ ಶೇ 3.03ರಷ್ಟು, ಸಿಪ್ಲಾ ಶೇ 3.02ರಷ್ಟು ಮತ್ತು ಪವರ್ ಗ್ರಿಡ್ ಶೇ 2.50ರಷ್ಟು ಕುಸಿದಿವೆ.

ಮುನ್ನೋಟ: ಮಾರ್ಚ್ ಆರಂಭದಲ್ಲಿ ಅರ್ಥ ವ್ಯವಸ್ಥೆಯಲ್ಲಿ ಎಲ್ಲವೂ ಸರಿಯಿತ್ತು ಎನ್ನುವಂತ ಸ್ಥಿತಿ ಇತ್ತು. ಆದರೆ ಈಗ ಚಿತ್ರಣ ಸಂಪೂರ್ಣ ಬದಲಾಗಿದೆ. ಅರ್ಥ ವ್ಯವಸ್ಥೆಯ ಮೇಲೆ ಕೋವಿಡ್ ಕಾರ್ಮೋಡ ಆವರಿಸಿರುವುದರಿಂದ ಷೇರುಪೇಯಲ್ಲಿ ಭಾರೀ ಏರಿಳಿತವಾಗಬಹುದು. ಒಳ್ಳೆಯ ಕಂಪನಿ ಷೇರುಗಳು ಕೂಡ ಕುಸಿತ ಕಾಣಬಹುದು. ಆದರೆ ಆತಂಕಕ್ಕೆ ಒಳಗಾಗಬೇಕಿಲ್ಲ, ತಾಳ್ಮೆಯಿಂದ ಹೂಡಿಕೆ ನಿಭಾಯಿಸಬೇಕು.

ನೀವು ಹೂಡಿಕೆ ಮಾಡಿರುವುದು ದೀರ್ಘಾವಧಿಗೆ ಎನ್ನುವ ಸ್ಪಷ್ಟತೆ ನಿಮ್ಮಲ್ಲಿರಬೇಕು. ಗುಣಮಟ್ಟದ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡಬೇಕು. ಇದಕ್ಕೆ ಪರ್ಯಾಯ ಆಯ್ಕೆ ಮತ್ತೊಂದಿಲ್ಲ. ಕಂಪನಿಯ ಅಡಿಪಾಯ ಭದ್ರವಾಗಿದ್ದಾಗ ತಾತ್ಕಾಲಿಕ ಏರಿಳಿತಕ್ಕೆ ತಲೆಕೆಡಿಸಿಕೊಳ್ಳದೆ ಹೂಡಿಕೆ ಮುಂದುವರಿಸಬಹುದು. ಈ ವಾರ ಅಪೋಲೋ ಟಯರ್ಸ್, ಹ್ಯಾಪಿಯೆಸ್ಟ್ ಮೈಂಡ್ಸ್, ಲುಪಿನ್, ಜಿಂದಾಲ್ ಸ್ಟೀಲ್, ಏಷ್ಯನ್ ಪೇಂಟ್ಸ್, ಇಂಡಿಗೋ ಪೇಂಟ್ಸ್, ಪಿಡಿಲೈಟ್ ಇಂಡಸ್ಟ್ರೀಸ್, ಟಾಟಾ ಪವರ್, ಯುಪಿಎಲ್, ವೋಲ್ಟಾಸ್, ಬ್ರಿಗೇಡ್, ಪಾಲಿಕ್ಯಾಬ್, ಸಿಪ್ಲಾ, ಡಾ ರೆಡ್ಡೀಸ್, ಎಸ್ಕೋರ್ಟ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಕೋವಿಡ್: ದೇಶಿ, ವಿದೇಶಿ ಕಂಪನಿಗಳ ನೆರವು

ನವದೆಹಲಿ (ಪಿಟಿಐ): ಕೋವಿಡ್–19 ವಿರುದ್ಧದ ಹೋರಾಟದಲ್ಲಿ ಭಾರತದ ಜೊತೆ ದೇಶ, ವಿದೇಶಗಳ ಕಂಪನಿಗಳು ಹೆಗಲು ನೀಡಿವೆ. ವೈದ್ಯಕೀಯ ಉಪಕರಣಗಳನ್ನು ವಿದೇಶಗಳಿಂದ ತರಿಸುವುದು, ವೈದ್ಯಕೀಯ ಆಮ್ಲಜನಕ ಸಿದ್ಧಪಡಿಸುವುದು ಸೇರಿದಂತೆ ಹಲವು ಬಗೆಗಳಲ್ಲಿ ನೆರವು ನೀಡುತ್ತಿವೆ.

ವಿದೇಶಿ ಕಂಪನಿಗಳಾದ ಅಮೆಜಾನ್, ಗೂಗಲ್, ಭಾರತದ ಕಂಪನಿಗಳಾದ ಟಾಟಾ ಸನ್ಸ್, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ಅದಾನಿ ಸಮೂಹ ಕೋವಿಡ್ ರೋಗಿಗಳ ಆರೈಕೆಗಾಗಿ ಆಸ್ಪತ್ರೆಗಳನ್ನು ಕೂಡ ಆರಂಭಿಸಿವೆ.

ಗೂಗಲ್ ಸಿಇಒ ಸುಂದರ್ ಪಿಚೈ ಅವರು ಭಾರತಕ್ಕೆ ನೆರವು ನೀಡುವುದಾಗಿ ಹಿಂದಿನ ತಿಂಗಳು ಪ್ರಕಟಿಸಿದ್ದಾರೆ. ಅಮೆಜಾನ್ ಕಡೆಯಿಂದ ಒಂದು ಸಾವಿರ ವೆಂಟಿಲೇಟರ್‌ಗಳು ಭಾರತಕ್ಕೆ ಬರಲಿವೆ. ತಾನು ಕೂಡ ಒಂದು ಸಾವಿರ ವೆಂಟಿಲೇಟರ್‌ಗಳನ್ನು, 25 ಸಾವಿರ ಆಮ್ಲಜನಕದ ಕಾನ್ಸನ್‌ಟ್ರೇಟರ್‌ಗಳನ್ನು ನೀಡುವುದಾಗಿ ಮೈಕ್ರೊಸಾಫ್ಟ್ ಹೇಳಿದೆ.

ರಿಲಯನ್ಸ್ ಕಂಪನಿಯು ಪ್ರತಿದಿನ ಒಂದು ಸಾವಿರ ಟನ್ ವೈದ್ಯಕೀಯ ಆಮ್ಲಜನಕ ತಯಾರಿಸುವಂತೆ ತನ್ನ ಸಾಮರ್ಥ್ಯ ಹೆಚ್ಚಿಸಿಕೊಂಡಿದೆ. ಗುಜರಾತ್ ಮತ್ತು ಮುಂಬೈನಲ್ಲಿ ಕಂಪನಿಯು ಒಟ್ಟು 1,875 ಹಾಸಿಗೆಗಳ ಸೌಲಭ್ಯ ಇರುವ ಆಸ್ಪತ್ರೆ ನಿರ್ಮಿಸಿದೆ. ವಿಪ್ರೊ ಕಂಪನಿಯು ಪುಣೆಯಲ್ಲಿನ ಒಂದು ಘಟಕವನ್ನು 430 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರವಾಗಿ ಪರಿವರ್ತಿಸಿದೆ. ಇನ್ಫೊಸಿಸ್ ಬೆಂಗಳೂರಿನಲ್ಲಿ ಆರೈಕೆ ಕೇಂದ್ರ ತೆರೆದಿದೆ.

ಸಿಪ್ಲಾ ಕಂಪನಿ ಮಹಾರಾಷ್ಟ್ರ ಸರ್ಕಾರಕ್ಕೆ ನೆರವಾಗಿದೆ, ವೇದಾಂತ ಕಂಪನಿಯು ದೆಹಲಿಯಲ್ಲಿ ಆಸ್ಪತ್ರೆ ನಿರ್ಮಿಸುತ್ತಿದೆ. ಅದಾನಿ ಪ್ರತಿಷ್ಠಾನವು ಗುಜರಾತ್‌ನಲ್ಲಿ ಆಸ್ಪತ್ರೆಗಳನ್ನು ನಿರ್ಮಿಸಿದೆ. ಟಾಟಾ ಸಮೂಹವು ಒಟ್ಟು ಐದು ಸಾವಿರ ಬೆಡ್‌ಗಳನ್ನು ಕೋವಿಡ್ ರೋಗಿಗಳಿಗೆ ಲಭ್ಯವಾಗಿಸಿದೆ. ಐಟಿಸಿ ಕಂಪನಿಯು ಪಶ್ಚಿಮ ಬಂಗಾಳದಲ್ಲಿ ದಾಖಲೆಯ 72 ಗಂಟೆಗಳಲ್ಲಿ 200 ಬೆಡ್‌ಗಳ ತಾತ್ಕಾಲಿಕ ಆಸ್ಪತ್ರೆ ಸಿದ್ಧಪಡಿಸಿದೆ.

ಎಸ್‌ಬಿಐ ಕಡೆಯಿಂದ ದೇಶದ ಬೇರೆ ಬೇರೆ ಕಡೆ 1000 ಬೆಡ್‌ಗಳ ತಾತ್ಕಾಲಿಕ ಆಸ್ಪತ್ರೆಗಳು ಸಿದ್ಧವಾಗಿವೆ. ಟೆಕ್ ಮಹೀಂದ್ರ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಿದೆ. ಎಲ್‌ಆ್ಯಂಡ್‌ಟಿ ಸಮೂಹವು 22 ಆಮ್ಲಜನಕ ಉತ್ಪಾದನಾ ಯಂತ್ರಗಳನ್ನು ಅಗತ್ಯವಿರುವ ಆಸ್ಪತ್ರೆಗಳಿಗೆ ನೀಡಿದೆ.

ರಿಲಯನ್ಸ್ ರಿಟೇಲ್: ವೇಗವಾಗಿ ಬೆಳೆಯುತ್ತಿರುವ ಬ್ರ್ಯಾಂಡ್

ನವದೆಹಲಿ (ಪಿಟಿಐ): ಜಾಗತಿಕವಾಗಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ರಿಟೇಲ್ ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ರಿಲಯನ್ಸ್ ರಿಟೇಲ್ ಲಿಮಿಟೆಡ್ ಎರಡನೇ ಸ್ಥಾನ ಪಡೆದುಕೊಂಡಿದೆ. ಕಳೆದ ವರ್ಷ ಇದು ಮೊದಲ ಸ್ಥಾನದಲ್ಲಿತ್ತು.

ಡೆಲಾಯ್ಟ್ ಕಂಪನಿಯ 2021ರ ‘ಗ್ಲೋಬಲ್ ರಿಟೇಲ್ ಪವರ್ ಹೌಸಸ್’ ವರದಿಯಲ್ಲಿ ಈ ಮಾಹಿತಿ ಇದೆ. 250 ರಿಟೇಲ್ ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತದ ಏಕೈಕ ಕಂಪನಿ ರಿಲಯನ್ಸ್ ರಿಟೇಲ್ ಆಗಿದೆ.